ಸಂಪಾದಕರು :
ಎಂ.ಎಸ್. ವಿಕಾಸ್




ಭಾನುವಾರ, ಫೆಬ್ರವರಿ 18, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 277 RNI : 27369/75


# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
☎ 08192 254736 91642 99999



Ranjeethmal Gandhi Educational Trust
RG PRE SCHOOL
# 1461/2B, Siddaveerappa Badavane, 8th Cross, Opp Bapuji Bank Samudaya Bhavana, Shamanur Road, Davanagere-577004
Admissions Open 2024-25


Admission Contact
87468-89664, 74066-11199



## ಭದ್ರಾ; ಕೊನೆ ಭಾಗಕ್ಕೆ ನೀರು ತಲುಪಿಸಲು ಬಿಗಿ ಕ್ರಮ: ಡಿಸಿ

**ಭದ್ರಾ ಬಲದಂಡೆ ನಾಲೆಗೆ ಫೆ.28ರ ವರೆಗೆ ನೀರು**

**ಉಸ್ತುವಾರಿ ತಂಡಗಳ ರಚನೆ**

ದಾವಣಗೆರೆ,ಫೆ. 17- ಈ ವರ್ಷ ತೀವ್ರ ಬರಗಾಲದಿಂದ ಭದ್ರಾ ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿರುವುದರಿಂದ ಬೇಸಿಗೆ ಹಂಗಾಮಿನಲ್ಲಿ ಅರೆ ನೀರಾವರಿ ಬೆಳೆಗಳಿಗೆ ನೀರು ಹರಿಸಲು ತೀರ್ಮಾನಿಸಿ ಬಲದಂಡೆ ಕಾಲುವೆ ಮೂಲಕ ನೀರು ಹರಿಸಲಾಗುತ್ತಿದ್ದು ಈ ನೀರು ಕೊನೆ ಹಂತದ ರೈತರಿಗೂ ತಲುಪಬೇಕೆಂದು ಉಸ್ತುವಾರಿ ನೋಡಿಕೊಳ್ಳಲು ಅಧಿಕಾರಿಗಳ ತಂಡ ರಚನೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದರು.

ಅವರು ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು, ನೀರಾವರಿ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳೊಂದಿಗೆ ನಡೆಸಲಾದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಲದಂಡೆ ನಾಲೆಗೆ ಈಗಾಗಲೇ ಫೆ.16 ರಿಂದಲೇ ನೀರು ಬಿಡಲಾಗಿದ್ದು ಫೆ.28 ರ ವರೆಗೆ ನೀರು ಹರಿಸಲಾಗುತ್ತದೆ. ಒಟ್ಟು 13 ದಿನಗಳವರೆಗೆ ಕಾಲುವೆಯಲ್ಲಿ ನೀರು ಹರಿಯಲಿದ್ದು ನಂತರ ನಿಲ್ಲಿಸಲಾಗುತ್ತದೆ. ಈ ವೇಳೆ ಕೊನೆಯ ಹಂತದ ರೈತರಿಗೂ ನೀರು ತಲುಪಿಸಬೇಕಾಗಿದೆ. ನೀರಿನ ಸಂಗ್ರಹ ಕಡಿಮೆ ಇರುವ ಕಾರಣ ಅರೆ ನೀರಾವರಿ ಬೆಳೆ ಬೆಳೆಯಲು ಸಲಹೆ ನೀಡಲಾಗಿದೆ. ಇರುವ ತೋಟಗಳನ್ನು ಉಳಿಸಿಕೊಳ್ಳಲು ಮತ್ತು ಕುಡಿಯುವ ನೀರಿನ ಕೊಳವೆ ಬಾವಿಗಳ ಅಂತರ್ಜಲ ಕಡಿಮೆಯಾಗದಂತೆ ನೋಡಿಕೊಳ್ಳುವುದು ನಮ್ಮ ಆದ್ಯತೆಯಾಗಿದೆ ಎಂದರು.

ಬಲದಂಡೆಗೆ ಕೆಲವು ರೈತರು ಅನಧಿಕೃತವಾಗಿ ಪಂಪ್ ಅಳವಡಿಕೆ ಮಾಡಿಕೊಂಡು ನೀರೆತ್ತುತ್ತಿದ್ದಾರೆ. ಇದರಿಂದ ಕೊನೆ ಭಾಗದ ರೈತರಿಗೆ ನೀರು ತಲುಪುತ್ತಿಲ್ಲ. ನೀರಾವರಿ ಇಲಾಖೆಗೆ ಸೇರಿರುವ ಜಾಗದಲ್ಲಿ ಅಂದರೆ ಭೂಸ್ವಾಧೀನವಾದ ಜಾಗದಲ್ಲಿಯೇ ಕೊಳವೆಬಾವಿ ಕೊರೆಯಿಸಿ ಟಿ.ಸಿ.ಗಳನ್ನು ಅಳವಡಿಸಿ ನೀರೆತ್ತಲಾಗುತ್ತಿದೆ. ನಿಯಮಾನುಸಾರ ಕ್ರಮ ಕೈಗೊಂಡು ಅನಧಿಕೃತವಾಗಿದ್ದಲ್ಲಿ ತೆರವಿಗೆ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುತ್ತದೆ. ಇದಕ್ಕಾಗಿ ಕಂದಾಯ ಇಲಾಖೆ ಅಧಿಕಾರಿಗಳು, ಪೊಲೀಸ್ ಇಲಾಖೆ ಅಧಿಕಾರಿಗಳು, ನೀರಾವರಿ ಇಲಾಖೆ ಅಧಿಕಾರಿಗಳನ್ನೊಳಗೊಂಡು ದಾವಣಗೆರೆ, ಹರಿಹರ, ಚನ್ನಗಿರಿ ತಾಲ್ಲೂಕುಗಳಿಗೆ ಮೂರು ತಂಡಗಳನ್ನು ರಚನೆ ಮಾಡಲಾಗಿದೆ. ಈ ತಂಡಗಳು ಎಲ್ಲೆಲ್ಲಿ ನಾಲೆಗೆ (4ನೇ ಪುಟಕ್ಕೆ)

## ಪ್ರತಿ ಜಿಲ್ಲೆಯಲ್ಲೂ ಬಸವ ಭವನ ನಿರ್ಮಿಸಿ

### ಸಾಂಸ್ಕೃತಿಕ ನಾಯಕ ಬಸವಣ್ಣನವರ ಭಾವಚಿತ್ರ ಅನಾವರಣ ಕಾರ್ಯಕ್ರಮದಲ್ಲಿ ಎಸ್ಸೆಸ್



ದಾವಣಗೆರೆ, ಫೆ. 17 - ಪ್ರತಿ ಜಿಲ್ಲೆಯಲ್ಲಿ ಬಸವ ಭವನಗಳನ್ನು ನಿರ್ಮಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಾಸಕ ಶಾಮನೂರು ಶಿವಶಂಕರಪ್ಪ ಆಗ್ರಹಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ಸಾಂಸ್ಕೃತಿಕ ನಾಯಕ ಶ್ರೀ ಜಗಜ್ಯೋತಿ ಬಸವಣ್ಣನವರ ಭಾವಚಿತ್ರ ಅನಾವರಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿ ಜಿಲ್ಲೆಯಲ್ಲಿ ಅಂಬೇಡ್ಕರ್ ಭವನಗಳನ್ನು ಸ್ಥಾಪಿಸುತ್ತಿರುವ ರೀತಿಯಲ್ಲೇ ಬಸವ ಭವನಗಳನ್ನೂ ಸ್ಥಾಪಿಸಬೇಕು. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಪ್ರಸ್ತಾಪಿಸಿದ್ದೇನೆ. ಅವರು ಬಸವ ಭವನಕ್ಕೆ ಸಮ್ಮತಿಸುವ ಭರವಸೆ ಇದೆ ಎಂದು ಶಿವಶಂಕರಪ್ಪ ಹೇಳಿದರು.

ಬಸವೇಶ್ವರರನ್ನು ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ ಎಂದು ಘೋಷಿಸಬೇಕೆಂದು ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ಲಿಂಗಾಯತ ವೀರಶೈವ ಮಹಾಸಭೆಯಲ್ಲಿ ಆಗ್ರಹಿಸಲಾಗಿತ್ತು. ಅದರಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಶಿವಶಂಕರಪ್ಪ ಹೇಳಿದರು.


ಬಸವಣ್ಣನವರು ಹುಟ್ಟಿನಿಂದ ಬ್ರಾಹ್ಮಣ ಜಾತಿಯವರಾಗಿದ್ದರೂ, ಅಲ್ಲಿದ್ದ ಕಟ್ಟುನಿಟ್ಟಿನ ಭಾವನೆಗಳನ್ನು ತೊರೆದು, ವೀರಶೈವ ಧರ್ಮವನ್ನು ಅಪ್ಪಿಕೊಂಡಿದ್ದರು. ವೀರಶೈವ ಧರ್ಮದ ಉದ್ಧಾರಕ್ಕಾಗಿ ಶ್ರಮಿಸಿದ್ದರು ಎಂದು ಶಾಸಕರು ಹೇಳಿದರು.

ಬಸವಣ್ಣನವರು ಮಹಿಳೆಯರು ಹಾಗೂ ಹಿಂದುಳಿದ ಸಮುದಾಯಗಳು ಕಟ್ಟುಪಾಡುಗಳಿಂದ ಹೊರ ಬರುವಂತೆ ಮಾಡಿದ್ದರು. ಬಸವಣ್ಣನವರಿಂದ ಮಹಿಳೆಯರು ಮನೆಯೊಳಗಿನ ಬೇಲಿ ದಾಟಿ ಬರಲು ಸಾಧ್ಯವಾಯಿತು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಕೆ.ಎಸ್. ಬಸವಂತಪ್ಪ, ಈ ಹಿಂದೆ ಎಲ್ಲ ಜಾತಿಯವರು ತಮ್ಮ ಮಕ್ಕಳಿಗೆ ಬಸವಣ್ಣನವರ ಹೆಸರಿಡುತ್ತಿದ್ದರು. ಅದರಲ್ಲೂ ದಲಿತರ ಕೇರಿಗಳಲ್ಲಿ ಮಕ್ಕಳಿಗೆ ಬಸವಣ್ಣನವರ ಹೆಸರಿಡುವ ಪದ್ಧತಿ ಹೆಚ್ಚಾಗಿತ್ತು. ಆದರೆ, ಇತ್ತೀಚೆಗೆ ಮಕ್ಕಳಿಗೆ ಬಸವಣ್ಣನವರ ಹೆಸರು ಇಡುವುದು ಕಡಿಮೆಯಾಗಿದೆ. ಈಗಿನ ಪೀಳಿಗೆಯವರೂ ಮಕ್ಕಳಿಗೆ ಬಸವಣ್ಣನವರ ಹೆಸರಿಡಬೇಕು. ಆಗ ಮುಂದಿನ ಪೀಳಿಗೆಗೆ ಬಸವಣ್ಣನವರನ್ನು ಉತ್ತಮವಾಗಿ ಪರಿಚಯಿಸಲು ಸಾಧ್ಯವಾಗುತ್ತದೆ ಎಂದರು.

ಶಾಲಾ ಮಕ್ಕಳಿಗೆ ವಚನಗಳನ್ನು ಕಲಿಸಬೇಕು. ಬಸವಣ್ಣನವರ ವಚನಗಳನ್ನು ಅಳವಡಿಸಿಕೊಂಡ ಮಕ್ಕಳು ಎಂದೂ ಅಶಾಂತಿಗೆ (4ನೇ ಪುಟಕ್ಕೆ)

## ಜ್ಞಾನಪೀಠ ಪ್ರಶಸ್ತಿಗೆ ಆಯ್ಕೆಯಾದ ಗುಲ್ಜಾರ್, ರಾಮಭದ್ರಾಚಾರ್ಯ

ನವದೆಹಲಿ, ಫೆ. 17 – ಹೆಸರಾಂತ ಉರ್ದು ಕವಿ ಗುಲ್ಜಾರ್ ಹಾಗೂ ಸಂಸ್ಕೃತ ವಿದ್ವಾಂಸ ಜಗದ್ಗುರು ರಾಮಭದ್ರಾಚಾರ್ಯ ಅವರನ್ನು 58ನೇ ಜ್ಞಾನಪೀಠ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಗುಲ್ಜಾರ್ ಎಂದೇ ಹೆಸರಾಗಿರುವ ಸಂಪೂರ್ಣ ಸಿಂಗ್ ಕಲ್ರಾ ಅವರು ಹಿಂದಿ ಸಿನಿಮಾದ ಹಾಡುಗಳಿಗೆ ಹೆಸರಾಗಿದ್ದಾರೆ. ಅವರು ತಮ್ಮ ಯುಗದ ಶ್ರೇಷ್ಠ ಉರ್ದು ಕವಿಗಳಲ್ಲಿ ಒಬ್ಬರು ಎಂದು ಗುರುತಿಸಲ್ಪಟ್ಟಿದ್ದಾರೆ.

ರಾಮಭದ್ರಾಚಾರ್ಯ ಅವರು ಚಿತ್ರಕೂಟದ ತುಳಸಿ ಪೀಠದ ಸ್ಥಾಪಕ ಹಾಗೂ ಮುಖ್ಯಸ್ಥರಾಗಿದ್ದಾರೆ. ಅವರು 240ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ್ದಾರೆ.

## ವೀರಶೈವ ಲಿಂಗಾಯತ ನಿಗಮದ ಅಧ್ಯಕ್ಷರಾಗಿ ಕಾಶಪ್ಪನವರ್



ಬೆಂಗಳೂರು, ಫೆ. 17 - ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ್ ಅವರನ್ನು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಈ ಹಿಂದೆ ಅವರನ್ನು ಕ್ರೀಡಾ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಿಸಲಾಗಿತ್ತು. ಈ ಆದೇಶವನ್ನು ವಾಪಸ್ ಪಡೆಯಲಾಗಿದ್ದು, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

## ಪಂಚಾಯ್ತಿಗಳು ಬಜೆಟ್ ರೂಪಿಸಲು ಆದೇಶ

**ವಾರ್ಷಿಕ ಖರ್ಚು-ವೆಚ್ಚದ ಮುಂಗಡ ಪತ್ರ ಮಂಡಿಸಿ ಅನುಮೋದನೆ ಪಡೆದು, ಅಭಿವೃದ್ಧಿ ಕಾರ್ಯಕ್ಕೆ ಸೂಚನೆ**

ಬೆಂಗಳೂರು, ಫೆ. 17 - ಹಣಕಾಸು ಸಚಿವರು ರಾಜ್ಯ ಬಜೆಟ್ ಮಾಡುವ ಮಾದರಿಯಲ್ಲೇ ಗ್ರಾಮ ಪಂಚಾಯ್ತಿಗಳೂ ತಮ್ಮ ವಾರ್ಷಿಕ ಖರ್ಚು-ವೆಚ್ಚಗಳಿಗೆ ಪಂಚಾಯ್ತಿ ಮುಂಗಡ ಪತ್ರ ಮಂಡಿಸಿ ಅನುಮೋದನೆ ಪಡೆದು, ಅಭಿವೃದ್ಧಿ ಕಾರ್ಯಗಳಿಗೆ ಮುಂದಾಗುವಂತೆ ಸರ್ಕಾರ ಆದೇಶ ಮಾಡಿದೆ.

ಈ ಸಂಬಂಧ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು, ರಾಜ್ಯದ ಎಲ್ಲಾ ಪಂಚಾಯ್ತಿಗಳ ಅಧ್ಯಕ್ಷರಿಗೆ ಪತ್ರ ಬರೆದು, ಕಡ್ಡಾಯವಾಗಿ ಆರ್ಥಿಕ ಸ್ಥಿತಿಗತಿ ಮತ್ತು ಯಾವ ಬಾಬ್ತು, ಎಷ್ಟು ವೆಚ್ಚ ಮಾಡುತ್ತೀರಿ ಎಂಬುದನ್ನು ಬಜೆಟ್‌ನಲ್ಲಿ ಘೋಷಿಸಿ, ಸಾರ್ವಜನಿಕಗೊಳಿಸಬೇಕು ಎಂದಿದ್ದಾರೆ.

ರಾಜ್ಯದ ಗಮನಕ್ಕೂ ಬಾರದೆ ಕೇಂದ್ರ ಸರ್ಕಾರ ನೇರವಾಗಿ ನಿಮ್ಮ ಕೆಲವು ಯೋಜನೆಗಳಿಗೆ ಆರ್ಥಿಕ ನೆರವು ನೀಡುತ್ತದೆ, ಇದಲ್ಲದೆ, ರಾಜ್ಯವೂ ವಾರ್ಷಿಕ ಹಣ ನಿಗದಿಪಡಿಸಿದೆ. ಇದೆಲ್ಲದಕ್ಕೂ ಮಿಗಿಲಾಗಿ ಸ್ಥಳೀಯವಾಗಿ ನೀವು ಸಂಗ್ರಹಿಸುವ ಸಂಪನ್ಮೂಲವೂ ಸೇರಿದಂತೆ (3ನೇ ಪುಟಕ್ಕೆ)

ಮಾರಾಟಕ್ಕಿವೆ
ಹರಿಹರ ನಗರದ ಭಾಗೀರಥಿ ಕಲ್ಯಾಣ ಮಂಟಪ ಹಿಂಬದಿಯಲ್ಲಿ ಡಿ.ಸಿ. ಅಪ್ರೂವಲ್ ಆಗಿರುವ 39 ಸಾವಿರ ಅಡಿ ಜಾಗವಿದ್ದು, ಇದರಲ್ಲಿ 100/88 ಅಡಿ 4 ಗೋಡೌನ್‌ಗಳು, 102/27 ಅಡಿ 5 ಮಳಿಗೆಗಳು, 102/37 ಅಡಿಯ 5 ಆರ್‌ಸಿಸಿ ಮನೆಗಳು ಮಾರಾಟಕ್ಕಿವೆ.
94483 27937 - 97390 27320

## ರಂಭಾಪುರಿ ಶ್ರೀಗಳ ಕಾರು ತಡೆದು ಆಕ್ರೋಶ



**ಮಹಿಳೆಯಿಂದ ಕಾರಿನ ಕಡೆ ಚಪ್ಪಲಿ ಎಸೆತ**

ಕಲಾದಗಿ, ಫೆ. 17 – ಬಾಗಲಕೋಟೆ ಜಿಲ್ಲೆಯ ಕಲಾದಗಿ ಗ್ರಾಮದ ಗುರುಲಿಂಗೇಶ್ವರ ಪಂಚಗ್ರಹ ಸಂಸ್ಥಾನ ಮಠದ ಪೀಠಾಧಿಪತಿ ಆಯ್ಕೆ ವಿಚಾರಕ್ಕೆ ಸಂಬಂಧಿಸಿದ ವಿವಾದ ತಾರಕಕ್ಕೇರಿದ್ದು, ಬಾಳೆಹೊನ್ನೂರು ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ವಿರುದ್ಧ ಮಠದ ಭಕ್ತರು ಶನಿವಾರ ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಶ್ರೀಗಳ ಕಾರಿನ ಕಡೆ ಮಹಿಳೆಯೊಬ್ಬರು ಚಪ್ಪಲಿ ತೂರಿದ ಘಟನೆಯೂ ನಡೆದಿದೆ.

ಕಲಾದಗಿಯಲ್ಲಿರುವ ರಂಭಾಪುರಿ ಜಗದ್ಗುರು ಪೀಠದ ಶಾಖಾ ಮಠವಾದ ಗುರುಲಿಂಗೇಶ್ವರ ಮಠದ ಪೀಠಾಧಿಪತಿಯಾಗಿ ಗಂಗಾಧರ ಸ್ವಾಮೀಜಿ ಅವರನ್ನು ರಂಭಾಪುರಿ ಶ್ರೀಗಳು ನೇಮಿಸಿದ್ದರು. ಇದಕ್ಕೆ ಕೆಲ ಭಕ್ತರ ಆಕ್ಷೇಪವಿತ್ತು. ಆಯ್ಕೆ ವಿಷಯ ನ್ಯಾಯಾಲಯದ ಮೆಟ್ಟಿಲೇರಿದೆ.

ಗುರುಲಿಂಗೇಶ್ವರ ಮಠದ ವಿವಾದ ನ್ಯಾಯಾಲಯದಲ್ಲಿರುವಾಗಲೇ ಗಂಗಾಧರ ಸ್ವಾಮಿ ಮಠದ ದುರಸ್ತಿ ಹಾಗೂ ಮಠದ ಹೊಲ ಉಳುಮೆ ಮಾಡಿದ್ದಕ್ಕೆ ಹಲವು ಭಕ್ತರು ಆಕ್ರೋಶ ವ್ಯಕ್ತಪಡಿಸಿದರು.

ಉದಗಟ್ಟಿ ಗ್ರಾಮಕ್ಕೆ ಅಡ್ಡ ಪಲ್ಲಕ್ಕಿ (4ನೇ ಪುಟಕ್ಕೆ)

DCM SHRIRAM
Growing with trust
Fenesta
Better by Design
ಪ್ರಾರಂಭೋತ್ಸವ
ದಿನಾಂಕ 18–2–2024ನೇ ಭಾನುವಾರದಂದು
ನೂತನವಾಗಿ ಪ್ರಾರಂಭಿಸುತ್ತಿರುವ
ಸ್ಪಂದನ ಅಂಡ್ ಕೋ
ವಿಶ್ವಕರ್ಮ ಬ್ರಾಹ್ಮಣರ ಹಾಸ್ಟೆಲ್ ಬಿಲ್ಡಿಂಗ್, ಹದಡಿ ರಸ್ತೆ
ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ.
ಅಧೀಕೃತ ಹಂಚಿಕೆದಾರರು :
ಫೆನೆಸ್ಟಾ ವಿಂಡೋಸ್ ಮತ್ತು ಡೋರ್ಸ್
ತಾವೆಲ್ಲರೂ ಈ ಪ್ರಾರಂಭೋತ್ಸವ
ಕಾರ್ಯಕ್ರಮಕ್ಕೆ ಆಗಮಿಸಿ
ಯಶಸ್ವಿಗೊಳಿಸಬೇಕಾಗಿ ತಮ್ಮಲ್ಲಿ ಕಳಕಳಿಯ ಕೋರಿಕೆ
ಪೂಜೆ : ಬೆಳಿಗ್ಗೆ 9–00 ಗಂಟೆಗೆ
ಶುಭ ಕೋರುವವರು : ಹಿತೈಷಿಗಳು ಮತ್ತು ಸ್ನೇಹಿತರು
spandana.fenesta@gmail.com
+91 99806 60426
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ

## ಆರೋಗ್ಯ ಇಲಾಖೆ ಮೇಲೆ ಜನರ ನಿರೀಕ್ಷೆ ಹೆಚ್ಚಾಗಿದೆ

### ನಿರೀಕ್ಷೆಯಿಂದ ನಿಮ್ಮಲ್ಲಿ ಹೆಚ್ಚಾಗಿರುವ ಒತ್ತಡ ನಿವಾರಣೆಗೆ ಕ್ರೀಡಾಕೂಟ ಸಹಕಾರಿ : ಇಟ್ನಾಳ್



ದಾವಣಗೆರೆ, ಫೆ.17- ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳು ನಿಮ್ಮ ಒತ್ತಡ ನಿವಾರಿಸಲು ಹಾಗೂ ಯಾವುದೇ ಕೆಲಸವನ್ನಾದರೂ ಉತ್ಸಾಹದಿಂದ ಮಾಡಲು ಸಹಕಾರಿಯಾಗುತ್ತವೆ ಎಂದು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ.ಸುರೇಶ್ ಇಟ್ನಾಳ್ ಆರೋಗ್ಯ ಇಲಾಖೆ ವೈದ್ಯರು ಹಾಗೂ ಸಿಬ್ಬಂದಿಗಳನ್ನುದ್ದೇಶಿಸಿ ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಹೆಲ್ತ್ 11 ಕ್ರಿಕೆಟರ್ಸ್ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅರಿವು ಮೂಡಿಸುವ ಹಾಗೂ ಆರೋಗ್ಯ ಇಲಾಖೆ ನೌಕರರಿಗೆ ರಾಜ್ಯ ಮಟ್ಟದ ಕ್ರಿಕೆಟ್ ಟೂರ್ನಿಮೆಂಟ್‌ಗೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

ಕೊರೊನಾ ಸಮಯದಲ್ಲಿ ಜೀವನದ ಹಂಗು ತೊರೆದು ನೀವೆಲ್ಲಾ ಕೆಲಸ ಮಾಡಿದ್ದೀರಿ. ಕೊರೊನಾ ನಂತರವೂ ವಿವಿಧ ಬಗೆಯ ರೋಗಗಳು ಹೆಚ್ಚಾಗಿವೆ. ಅಂದು ಶಕ್ತಿ ಮೀರಿ ಕೆಲಸ ಮಾಡಿದ್ದರಿಂದ ಇಂದೂ ಸಹ ಅದೇ ರೀತಿ ಕೆಲಸ ಮಾಡಬೇಕೆಂಬ ನಿರೀಕ್ಷೆ ನಿಮ್ಮ ಮೇಲಿದೆ. ಇದರಿಂದ ನಿಮ್ಮ ಮೇಲೆ ಸಹಜವಾಗಿಯೇ ಒತ್ತಡವಿರುತ್ತದೆ ಎಂದರು.

ಇಂತಹ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಂದೆರೆಡು ದಿನಕ್ಕೆ ಸೀಮಿತಗೊಳಿಸದೆ ಅವಕಾಶ ಸಿಕ್ಕಾಗ ಅಥವಾ ಮೂರು ತಿಂಗಳಿಗೊಮ್ಮೆ ಆಯೋಜಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಆರೋಗ್ಯಾಧಿಕಾರಿಗಳು ಕ್ರಮ ಕೈಗೊಳ್ಳಲಿ ಎಂದು ಹೇಳಿದರು. ಜಿಲ್ಲೆಯ ವಿವಿಧ ಭಾಗಗಳಿಂದ 19 ತಂಡಗಳು ಟೂರ್ನಿಯಲ್ಲಿ ಭಾಗವಹಿಸಿದ್ದವು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ (3ನೇ ಪುಟಕ್ಕೆ)

## ಸಂಕ್ಷಿಪ್ತ ಸುದ್ದಿ

**☞ ಫೆ.21ರಂದು ನಾಲ್ಕು ರಾಜ್ಯಗಳಲ್ಲಿ ರೈತರ ಧರಣಿ**
ಮುಜಾಫರನಗರ : ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಉತ್ತರ ಪ್ರದೇಶ, ಹರಿಯಾಣ, ಪಂಜಾಬ್ ಹಾಗೂ ಉತ್ತರಾಖಂಡಗಳಲ್ಲಿ ಫೆಬ್ರವರಿ 21ರಂದು ಧರಣಿಗಳನ್ನು ನಡೆಸಲಾಗುವುದು ಎಂದು ಬಿ.ಕೆ.ಯು. ಸಂಘಟನೆಯ ನಾಯಕ ರಾಕೇಶ್ ಟಿಕಾಯತ್ ಹೇಳಿದ್ದಾರೆ.

**☞ ಸಂದೇಶ್‌ಖಾಲಿ ಸಂತ್ರಸ್ತರಿಗೆ ರಾಜಭವನದ ಬಾಗಿಲು ತೆರೆದಿದೆ ಎಂದ ರಾಜ್ಯಪಾಲ**
ಕೊಲ್ಕೊತಾ : ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ಸಂತ್ರಸ್ತರಾಗಿರುವ ಮಹಿಳೆಯರಿಗೆ ತಮ್ಮ ಮನೆಯಲ್ಲಿ ಅಸುರಕ್ಷತೆಯ ಭಾವನೆಯಾದರೆ, ಅವರಿಗೆ ರಾಜಭವನದ ಬಾಗಿಲುಗಳು ತೆರೆದಿವೆ ಎಂದು ರಾಜ್ಯಪಾಲ ಸಿ.ವಿ. ಆನಂದ ಬೋಸ್ ಹೇಳಿದ್ದಾರೆ. ಸಂದೇಶ್ ಖಾಲಿಯಲ್ಲಿ ಆಡಳಿತಾರೂಢ ಟಿ.ಎಂ.ಸಿ. ಮುಖಂಡರಿಂದ ಮಹಿಳೆಯರಿಗೆ ಪೀಡನೆಯಾಗಿದೆ ಎಂಬ ಆರೋಪಗಳು ಕೇಳಿ ಬಂದಿದ್ದವು.

**☞ ಬಿಜೆಪಿ ರಾಷ್ಟ್ರೀಯ ಮಂಡಳಿ ಸಭೆ ಆರಂಭ**
ನವದೆಹಲಿ : ಬಿಜೆಪಿ ರಾಷ್ಟ್ರೀಯ ಮಂಡಳಿಯ ಎರಡು ದಿನಗಳ ಸಭೆ ಶನಿವಾರ ಆರಂಭವಾಗಿದೆ. 11,500 ಬಿಜೆಪಿ ನಿಯೋಗಿಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಈ ಸಭೆ ಪ್ರಾಮುಖ್ಯತೆ ಪಡೆದುಕೊಂಡಿದೆ. ಬಿಜೆಪಿ 370ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

**☞ ಪಂಜಾಬ್‌ನಲ್ಲಿ ಬಿಜೆಪಿ ನಾಯಕರ ಮನೆ ಎದುರು ರೈತರ ಪ್ರತಿಭಟನೆ**
ಚಂಡೀಘಡ : ದೆಹಲಿ ಗಡಿಗಳಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆ ಐದನೇ ದಿನಕ್ಕೆ ಕಾಲಿಟ್ಟಿದೆ. ಈ ನಡುವೆ, ಭಾರತೀಯ ಕಿಸಾನ್ ಯೂನಿಯನ್ (ಏಕತಾ ಉಗ್ರಹಣ್) ಸಂಘಟನೆಯವರು ಪಂಜಾಬ್‌ನಲ್ಲಿ ಮೂವರು ಬಿಜೆಪಿ ಹಿರಿಯ ನಾಯಕರ ಮನೆ ಎದುರು ಪ್ರತಿಭಟನೆ ನಡೆಸಿದ್ದಾರೆ.

**☞ ಕೇರಳದ ಕಾಂಗ್ರೆಸ್ ಬೆಂಬಲಿತ ವಾಹಿನಿಯ ಖಾತೆಗಳ ಸ್ಥಗಿತ**
ತಿರುವನಂತಪುರಂ : ಕೇರಳದ ಕಾಂಗ್ರೆಸ್ ಬೆಂಬಲಿತ ಜೈ ಹಿಂದ್ ಟಿ.ವಿ.ಯ ಖಾತೆಗಳನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿದೆ ಎಂದು ಆರೋಪಿಸಲಾಗಿದೆ. ನಿನ್ನೆಯಷ್ಟೇ ಕಾಂಗ್ರೆಸ್ ಪಕ್ಷದ ಪ್ರಮುಖ ಬ್ಯಾಂಕ್ ಖಾತೆಗಳನ್ನು ಅಲ್ಪ ಕಾಲ ಸ್ಥಗಿತಗೊಳಿಸಲಾಗಿತ್ತು.

**☞ ಗರ್ಭಿಣಿ ಮೇಲೆ ಅತ್ಯಾಚಾರದ ನಂತರ ಬೆಂಕಿ**
ಮೊರೆನಾ : 34 ವರ್ಷದ ಗರ್ಭಿಣಿ ಮಹಿಳೆ ಮೇಲೆ ಮೂವರು ಸಾಮೂಹಿಕ ಅತ್ಯಾಚಾರ ಎಸಗಿ, ಬೆಂಕಿ ಹಚ್ಚಿರುವ ಘಟನೆ ಮಧ್ಯ ಪ್ರದೇಶದ ಮೊರೆನಾ ಜಿಲ್ಲೆಯಲ್ಲಿ ನಡೆದಿದೆ. ಮಹಿಳೆ ಈಗ ಆಸ್ಪತ್ರೆಯಲ್ಲಿ ಬದುಕಿಗಾಗಿ ಹೋರಾಟ ನಡೆಸುತ್ತಿರುವುದಾಗಿ ಪೊಲೀಸರು ಹೇಳಿದ್ದಾರೆ.

**☞ ಪ್ರತಿಪಕ್ಷದ ಸಾಲಿನಲ್ಲಿ ಕೂರಲು ಇಮ್ರಾನ್ ಖಾನ್ ಪಕ್ಷದ ನಿರ್ಧಾರ**
ಇಸ್ಲಾಮಾಬಾದ್ : ಪ್ರತಿಪಕ್ಷದ ಸಾಲಿನಲ್ಲಿ ಕುಳಿತುಕೊಳ್ಳುವುದಾಗಿ ಪಾಕಿಸ್ತಾನದ ಇಮ್ರಾನ್ ಖಾನ್ ಅವರ ಪಿ.ಟಿ.ಐ. ಪಕ್ಷ ತಿಳಿಸಿದೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ರಿಗ್ಗಿಂಗ್ ನಡೆದಿದ್ದು, ಇದರ ವಿರುದ್ಧ ದೇಶಾದ್ಯಂತ ಪ್ರತಿಭಟನೆ ನಡೆಸುವುದಾಗಿಯೂ ಪಕ್ಷ ಹೇಳಿದೆ. ಇಮ್ರಾನ್ ಖಾನ್ ಪ್ರಸಕ್ತ ಬಂಧನದಲ್ಲಿದ್ದಾರೆ.

## ಪಾಕ್ ಚುನಾವಣೆಯಲ್ಲಿ ಅಕ್ರಮ ಎಂದು ಅಧಿಕಾರಿ ರಾಜೀನಾಮೆ

ಇಸ್ಲಾಮಾಬಾದ್, ಫೆ. 17 – ಪಾಕಿಸ್ತಾನದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ವ್ಯಾಪಕ ರಿಗ್ಗಿಂಗ್ ನಡೆದಿದೆ. ಇದಕ್ಕೆ ನ್ಯಾಯಾಂಗ ಹಾಗೂ ಚುನಾವಣಾ ಆಯೋಗದ ಉನ್ನತರು ಸಹಕರಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ಆರೋಪಿಸಿದ್ದು, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ರಾವಲ್‌ಪಿಂಡಿಯ ಆಯುಕ್ತ ಲಿಯಾಕತ್ ಅಲಿ ಛತ್ತ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಆದರೆ, ಈ ಆರೋಪ ಆಧಾರ ರಹಿತ ಎಂದು ಪಾಕಿಸ್ತಾನದ ಮುಖ್ಯ ನ್ಯಾಯಮೂರ್ತಿ ಕಾಜಿ ಫಯೀಜ್ ಹೇಳಿದ್ದಾರೆ. ಚುನಾವಣಾ ಆಯೋಗ ಸಹ ಆರೋಪ ತಳ್ಳಿ ಹಾಕಿದೆ.

ಪಾಕಿಸ್ತಾನದಲ್ಲಿ ಚುನಾವಣೆ ನಡೆದು ಎಂಟು ದಿನಗಳಾಗಿವೆ. ಯಾವ ಪಕ್ಷ ಸರ್ಕಾರ ರಚಿಸಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ನಡುವೆ, ಆರೋಪ ಮಾಡಿರುವ ಅಧಿಕಾರಿ ಲಿಯಾಕತ್ ಅಲಿ ಅವರನ್ನು ಬಂಧಿಸಲಾಗಿದೆ.

## ಸಿಂಹಕ್ಕೆ ಸೀತೆ ಹೆಸರು ಬೇಡ ಎಂದ ವಿಹೆಚ್‌ಪಿ

ಸಿಲಿಗುರಿ, ಫೆ. 17 - ತ್ರಿಪುರಾದಿಂದ ಇಲ್ಲಿನ ಬಂಗಾಳ ಸಫಾರಿ ಪಾರ್ಕ್‌ಗೆ ತರಿಸಲಾಗಿರುವ ಹೆಣ್ಣು ಸಿಂಹಕ್ಕೆ ಸೀತೆ ಎಂಬ ಹೆಸರಿಟ್ಟಿರುವುದು ಸರಿಯಲ್ಲ ಎಂದು ಕಲ್ಕತ್ತಾ ಹೈಕೋರ್ಟ್‌ನ ಜಲ್ಪೈಗುರಿ ಸರ್ಕೀಟ್ ಪೀಠದಲ್ಲಿ ವಿಶ್ವ ಹಿಂದೂ ಪರಿಷತ್ ಅರ್ಜಿ ದಾಖಲಿಸಿದೆ.

ಎರಡು ಸಿಂಹಗಳನ್ನು ತ್ರಿಪುರಾದಿಂದ ತರಿಸಲಾಗಿತ್ತು. ಗಂಡು ಹುಲಿಗೆ ಅಕ್ಬರ್ ಎಂಬ ಹೆಸರಿಡಲಾಗಿದೆ ಎಂದು ವಿಶ್ವ ಹಿಂದೂ ಪರಿಷತ್ ಆರೋಪಿಸಿದೆ.

ಆದರೆ, ಹೆಣ್ಣು ಸಿಂಹಕ್ಕೆ ಯಾವುದೇ ಹೆಸರಿಟ್ಟಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

## 'ದಂಗಲ್' ಚಿತ್ರದ ನಟಿ ಸುಹಾನಿ ನಿಧನ



ನವದೆಹಲಿ, ಫೆ. 17 - ಅಮಿರ್ ಖಾನ್ ಅವರ 'ದಂಗಲ್' ಚಲನಚಿತ್ರ ದಲ್ಲಿ ಕಿರಿಯ ಬಬಿತಾ ಫೋಗಟ್ ಪಾತ್ರ ನಿರ್ವಹಿಸಿದ್ದ ಸುಹಾನಿ ಭಟ್ನಾಗರ್ ನಿಧನರಾಗಿದ್ದಾರೆ. ಅವರಿಗೆ 19 ವರ್ಷ ವಯಸ್ಸಾಗಿತ್ತು.

ಕಾಲು ಮುರಿದ ಕಾರಣದಿಂದಾಗಿ ಅವರಿಗೆ ಆರೋಗ್ಯ ಸಮಸ್ಯೆಯಾಗಿತ್ತು. ನಂತರ ಅವರನ್ನು ಎಐಐಎಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಹೇಳಲಾಗಿದೆ. ಫೆಬ್ರವರಿ 7ರಂದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಫೆಬ್ರವರಿ 16ರಂದು ಸಾವನ್ನಪ್ಪಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ವ್ಯಾಸಂಗಕ್ಕಾಗಿ ಸುಹಾನಿ ಅವರು ನಟನೆಯಿಂದ ಬಿಡುವು ಪಡೆದಿದ್ದರು.


॥ ಶ್ರೀ ಉತ್ಸವಾಂಬ ಕೃಪೆ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ವಿಜಯನಗರ ಜಿಲ್ಲೆ ಕೊಟ್ಟೂರು ತಾಲ್ಲೂಕು ತೂಲಹಳ್ಳಿ ಗ್ರಾಮದ **ಶ್ರೀ ಸಂಗಮೇಶ್ವರದ ಎಸ್. ಹೇಮಣ್ಣ, ದಾವಣಗೆರೆ** ನಿವೃತ್ತ ಮುಖ್ಯೋಪಾಧ್ಯಾಯರು ಮಾಡುವ ವಿಜ್ಞಾಪನೆಗಳು.
ದಿನಾಂಕ : 06.02.2024ನೇ ಮಂಗಳವಾರ ಬೆಳಿಗ್ಗೆ 5.30ಕ್ಕೆ ನನ್ನ ಧರ್ಮಪತ್ನಿ

**ಲಿಂ. ಶರಣೆ ಟಿ.ಎಂ. ಶಕುಂತಲ**
(ನಿವೃತ್ತ ಮುಖ್ಯೋಪಾಧ್ಯಾಯರು)

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

**ದಿನಾಂಕ : 18.02.2024ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ**
**ಮನೆ ನಂ. 1660-6, 10ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ**
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು : ಶ್ರೀ ಎಸ್. ಹೇಮಣ್ಣ ಮತ್ತು ಸಹೋದರರು, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಸಂಗಮೇಶ್ವರದ ವಂಶಸ್ಥರು ಮತ್ತು ತೂಲಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. 94816 19939**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


# ವಾಲ್ಮೀಕಿ ನಾಮಫಲಕ ಮತ್ತು ವೀರ ಮದಕರಿ ಮಹಾದ್ವಾರ : ಅನಧಿಕೃತ ನಾಮಫಲಕ ತೆರವುಗೊಳಿಸದಿದ್ದರೆ ಪ್ರತಿಭಟನೆಯ ಎಚ್ಚರಿಕೆ




ಹರಿಹರ

ಹರಿಹರ, ಫೆ.17- ಭಾನುವಳ್ಳಿ ಗ್ರಾಮದಲ್ಲಿರುವ ಯಕ್ಕೆಗೊಂದಿ , ನಂದಿಗುಡಿ ವೃತ್ತದ ರಸ್ತೆಯಲ್ಲಿ ಅನಧಿಕೃತ ಮತ್ತು ಕಾನೂನು ಬಾಹಿರವಾಗಿ ಹಾಕಿರುವ ಮಹರ್ಷಿ ವಾಲ್ಮೀಕಿ ನಾಮಫಲಕ ಮತ್ತು ವೀರ ಮದಕರಿ ಮಹಾದ್ವಾರವನ್ನು ಹತ್ತು ದಿನದ ಒಳಗೆ ತೆರವುಗೊಳಿಸದೇ ಹೋದರೆ, ಶಿವಮೊಗ್ಗ- ಹರಿಹರ ರಸ್ತೆಯಲ್ಲಿ ಬೃಹತ್ ಪ್ರತಿಭಟನೆ ಮಾಡಲಾಗುವುದು ಎಂದು ಭಾನುವಳ್ಳಿ ಗ್ರಾಮದ ಹಾಲುಮತ ಸಮಾಜದ ಮುಖಂಡ ಹಾಗೂ ತಾ.ಪಂ. ಮಾಜಿ ಅಧ್ಯಕ್ಷ ಕನ್ನಪ್ಪ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಮಗೆ ಸೇರಿದ ಖಾಸಗಿ ಜಾಗದಲ್ಲಿ ಸ್ಥಾಪನೆ ಮಾಡಿದ್ದ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಪುತ್ಥಳಿಯನ್ನು ಜಿಲ್ಲಾ ಆಡಳಿತ ಮತ್ತು ತಾಲ್ಲೂಕು ಆಡಳಿತ ಯಾರದೋ ಮಾತುಗಳನ್ನು ಕೇಳಿ ಮತ್ತು ಕೆಲವರು ಧರಣಿ ಮಾಡಿದರು ಎಂಬ ಕಾರಣಕ್ಕಾಗಿ ನಾವು ಕೊಟ್ಟ ದಾಖಲೆಗಳನ್ನು ಸರಿಯಾಗಿ ಪರಿಶೀಲನೆ ಮಾಡದೇ 144 ನೇ ಸೆಕ್ಷನ್ ಜಾರಿ ಮಾಡಿ, ಸಮಾಜದವರಿಗೆ ಮತ್ತು ಬೀರಲಿಂಗೇಶ್ವರ ಟ್ರಸ್ಟ್ ಸದಸ್ಯರ ಗಮನಕ್ಕೆ ತರದೇ ತೆರವುಗೊಳಿಸಿ, ಹಾಲುಮತ ಸಮಾಜದವರಿಗೆ ನೋವು ಆಗುವಂತಹ ಕೆಲಸ ಮಾಡಿದ್ದಾರೆ ಎಂದರು.

ಗ್ರಾಮದಲ್ಲಿ ಸ್ಥಾಪನೆಗೊಂಡಿರುವ ಮಹರ್ಷಿ ವಾಲ್ಮೀಕಿ ನಾಮ ಫಲಕ ಮತ್ತು ವೀರ ಮದಕರಿ ಹೆಸರಿನಲ್ಲಿರುವ ಮಹಾದ್ವಾರವನ್ನು ಸರ್ಕಾರಿ ಜಾಗದಲ್ಲಿ ನಿರ್ಮಾಣ ಮಾಡಲಾಗಿದೆ. ನಿರ್ಮಾಣಕ್ಕೆ ಪೂರಕ ದಾಖಲೆಗಳನ್ನು ಮಾಹಿತಿ ಹಕ್ಕಿನಲ್ಲಿ ಪಡೆದಾಗ ಜಿಲ್ಲಾ ಆಡಳಿತ ಅಥವಾ ತಾಲ್ಲೂಕು ಆಡಳಿತ ಮತ್ತು ಗ್ರಾಪಂ, ತಾಪಂ ಗಳಿಂದಾಗಲೀ ಯಾವುದೇ ಅನುಮತಿ ಹಾಗೂ ಪರವಾನಿಗೆ ಇಲ್ಲದೇ ಕಾನೂನು ಬಾಹಿರವಾಗಿ ಕಟ್ಟಿರುವುದಲ್ಲದೆ, ಸರ್ಕಾರದ ಹಣವನ್ನು ದುರುಪಯೋಗ ಮಾಡಿಕೊಂಡು ನಾಮಫಲಕ ಮತ್ತು ಮಹಾದ್ವಾರ ನಿರ್ಮಾಣ ಮಾಡಲಾಗಿದೆ ಎಂದು ತಿಳಿದುಬಂದಿದೆ ಎಂದು ಹೇಳಿದರು.

ಗ್ರಾ.ಪಂ. ಸದಸ್ಯ ಚಂದ್ರಪ್ಪ ಮಾತನಾಡಿ, ಗ್ರಾಮದ ಸಹೋದರ ಸಮಾಜದವರಾದ ವಾಲ್ಮೀಕಿ ಸಮಾಜದವರು ದಿ. 23 ರಂದು ಗ್ರಾಮದಲ್ಲಿ ಸೆಕ್ಷನ್ ಜಾರಿಗೊಳಿಸುವ ಮೂಲಕ ಸಂಗೊಳ್ಳಿ ರಾಯಣ್ಣ ಪುತ್ಥಳಿ ತೆರವುಗೊಳಿಸಿದ್ದು, ಮುಂದಿನ ದಿನಗಳಲ್ಲಿ ನಾವು ಕೂಡ ಸರ್ಕಾರದ 2012 ರ ಪ್ರಕಾರ ಕಾನೂನಾತ್ಮಕವಾಗಿ ಅದೇ ಜಾಗದಲ್ಲಿ ಸಂಗೊಳ್ಳಿ ರಾಯಣ್ಣ ಮೂರ್ತಿ ಪ್ರತಿಷ್ಠಾಪನೆ ಮಾಡುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಡಾ. ಕರಿಬಸವಯ್ಯ ಗಂಗನಹರಸಿ, ಗ್ರಾ.ಪಂ. ಸದಸ್ಯರಾದ ಚಂದ್ರಪ್ಪ, ಮಂಜಪ್ಪ, ರೇಣುಕಮ್ಮ ಬಿ.ಎನ್. ಕೆಂಚಪ್ಪ, ಕರಿಯಪ್ಪ, ಡಿ.ಕೆ. ಹನುಮಂತಪ್ಪ, ಮಂಜಪ್ಪ ಪವಾಡಿ, ಮಾಜಿ ಸದಸ್ಯ ರಾಮಪ್ಪ, ಗೋವಿಂದರಾಜು ಹಣಚಿಕ್ಕಿ, ಪ್ರಶಾಂತ್, ಚಂದ್ರಪ್ಪ ಕೆ.ಹೆಚ್. ಕೆ ನಾಗರಾಜ್, ಸೋಮನಗೌಡ, ಪೂಜಾರ್ ಬೀರಪ್ಪ, ವಿ ರಾಮಪ್ಪ, ಬಸವನಗೌಡ, ಮಂಜಪ್ಪ, ಹೇಮಂತರಾಜ್, ಹಾಲಪ್ಪ ಬೋಗಜಿ, ಯು.ಆರ್. ನವೀನ್, ದಿಳ್ಳೆಪ್ಪ, ರೇವಣಸಿದ್ದಪ್ಪ, ಸಿದ್ದಪ್ಪ ಇತರರು ಹಾಜರಿದ್ದರು.

**ಸಂಗೊಳ್ಳಿ ರಾಯಣ್ಣನ ಮೂರ್ತಿ ಸ್ಥಾಪನೆ ಮತ್ತು ಮಹರ್ಷಿ ವಾಲ್ಮೀಕಿ ಮಹಾದ್ವಾರದ ಸಮಸ್ಯೆ ಪರಿಹರಿಸಲು ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಕಾಗಿನಲೆ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಒಂದಾಗಿ ಸಂಧಾನ ನಡೆಸಲು ಮುಂದಾದರೆ ಪೂರಕ ಅಂಶಗಳು ಒಪ್ಪಿಗೆ ಬಂದರೆ ಗುರುಗಳ ಮಾತು ಮೀರದೆ ತೀರ್ಮಾನಕ್ಕೆ ಸಿದ್ಧರಿರುವುದಾಗಿ ಹೇಳಿದರು.**
**ಒಂದು ವೇಳೆ ಹೊರಗಿನವರನ್ನು ಬಿಟ್ಟು ಗ್ರಾಮದ ಎರಡು ಸಮಾಜಗಳ ಹಿರಿಯ ಮುಖಂಡರ ಸಮ್ಮುಖದಲ್ಲಿ ಹೊಂದಾಣಿಕೆಯ ಮಾತುಕತೆಗಳು ನಡೆಯುವುದಕ್ಕೆ ಮುಂದಾದರೂ ಸಹಿತ ನಮ್ಮ ಹಾಲುಮತ ಸಮಾಜಕ್ಕೆ ಪೂರಕವಾದ ಅಂಶಗಳನ್ನು ಸಹೋದರ ಸಮಾಜದವರು ಒಪ್ಪುವುದಾದರೆ ಅದಕ್ಕೂ ಬದ್ದರಾಗಿ ನಡೆದುಕೊಳ್ಳುವುದಾಗಿ ಹಾಲುಮತ ಸಮಾಜದ ಮುಖಂಡರು ತಿಳಿಸಿದರು.**

## ಕುಡಿಯುವ ನೀರು, ಗೋಶಾಲೆ ತೆರೆಯಲು ಆಗ್ರಹಿಸಿ ರೈತರ ಪ್ರತಿಭಟನೆ



ಜಗಳೂರು

ಜಗಳೂರು, ಫೆ. 17 - ತೀವ್ರ ಬರಗಾಲದಿಂದಾಗಿ ತಾಲ್ಲೂಕಿನ ಬಹುತೇಕ ಹಳ್ಳಿಗಳಲ್ಲಿ ಕುಡಿಯುವ ನೀರು ಪೂರೈಕೆ ಮತ್ತು ಗೋಶಾಲೆ ತೆರೆಯುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ರೈತ ಸಂಘ (ಹುಚ್ಚವ್ವನಹಳ್ಳಿ ಮಂಜುನಾಥ್ ಬಣ)ದ ನೇತೃತ್ವದಲ್ಲಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ರೈತರು ತಮ್ಮ ತೋಟಗಳನ್ನು ಉಳಿಸಿಕೊಳ್ಳಲು ದುಬಾರಿ ವೆಚ್ಚದಲ್ಲಿ ಟ್ಯಾಂಕರ್ ನೀರನ್ನು ಖರೀದಿಸಿ ಪೂರೈಕೆ ಮಾಡಲಾಗುತ್ತದೆ. ಜಾನುವಾರುಗಳು ಮೇವಿಲ್ಲದೆ ಸಾವಿನ ಅಂಚಿಗೆ ಬಂದು ತಲುಪಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಮುಂಗಾರು ಮತ್ತು ಹಿಂಗಾರು ಮಳೆಯ ವೈಫಲ್ಯದಿಂದ ತೀವ್ರ ಬರಗಾಲ ಎದುರಾಗಿದ್ದು, ಅಂತರ್ಜಲ ಕುಸಿತವಾಗಿದೆ. ಎಲ್ಲಾ ಕೆರೆಕಟ್ಟೆಗಳು ಬರಿದಾಗಿದ್ದು, ರೈತರ ಸಾವಿರಾರು ಕೊಳವೆ ಬಾವಿಗಳು ಸರಣಿ ರೂಪದಲ್ಲಿ ವಿಫಲವಾಗುತ್ತಿವೆ. ಬಹುತೇಕ ಹಳ್ಳಿಗಳಲ್ಲಿ ಈಗಾಗಲೇ ಕುಡಿಯುವ ನೀರಿನ ಕ್ಷಾಮ ಕಾಣಿಸಿಕೊಂಡಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಸಮಸ್ಯೆ ಬಿಗಡಾಯಿಸುವ ಸಾಧ್ಯತೆ ಇದೆ.

ತಾಲ್ಲೂಕು ಆಡಳಿತ ಕೂಡಲೇ ಗೋಶಾಲೆ ತೆರೆದು ಮೇವು ಒದಗಿಸಬೇಕು. ಸಂಕಷ್ಟದಲ್ಲಿರುವ ರೈತರ ನೆರವಿಗೆ ಸರ್ಕಾರ ಧಾವಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಬೇಕು. ಬರದಿಂದ ಕೆಲಸವಿಲ್ಲದೆ ಕಂಗೆಟ್ಟಿರುವ ಕೃಷಿ ಕೂಲಿ ಕಾರ್ಮಿಕರಿಗೆ ಉದ್ಯೋಗ ಕೊಡಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕಿನ ರೈತರು ಮತ್ತು ಸಾರ್ವಜನಿಕರು ಬರಗಾಲದಿಂದ ತತ್ತರಿಸಿರುವ ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಸಿಇಒ ಸುರೇಶ್ ಇಟ್ನಾಳ್ ಅವರು ಈಚೆಗೆ ತಾಲ್ಲೂಕಿನ ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಪೋಷಕರು ಕೇಳಿದಾಗ, ಶಾಲಾ ಮಕ್ಕಳು ತಮ್ಮ ಬಾಟಲ್ ಗಳ ಮೂಲಕ ಮನೆಯಿಂದ ನೀರು ಕಡ್ಡಾಯವಾಗಿ ತರಬೇಕು ಎಂದು ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ಮುಖಂಡರಾದ ಕಾನನ ಕಟ್ಟೆ ತಿಪ್ಪೇಸ್ವಾಮಿ, ತಾಲ್ಲೂಕು ಅಧ್ಯಕ್ಷ ಚಿರಂಜೀವಿ, ಪ್ರಧಾನ ಕಾರ್ಯದರ್ಶಿ ರಾಜು, ಪ್ರಹ್ಲಾದಪ್ಪ, ಸುಪುತ್ರಪ್ಪ, ರವಿ, ಸತೀಶ್ ಮುಂತಾದವರು ಇದ್ದರು.

**ಎರಡನೇ ದಿನವೂ ಪ್ರತಿ-ಭಟನೆ ;** ತಾಲ್ಲೂಕಿನ ಬಹುತೇಕ ಹಳ್ಳಿಗಳಲ್ಲಿ ಕುಡಿಯುವ ನೀರು ಪೂರೈಕೆ ಮತ್ತು ಗೋಶಾಲೆ ತೆರೆಯುವಂತೆ ಒತ್ತಾಯಿಸಿ ತಾಲ್ಲೂಕು ಕಛೇರಿಯ ಮುಂದೆ ನಡೆಸುತ್ತಿರುವ ಪ್ರತಿಭಟನೆ ಎರಡನೇ ದಿನವೂ ಮುಂದುವರೆದಿದೆ.

ಇಂದು ಶಾಸಕ ಬಿ. ದೇವೇಂದ್ರಪ್ಪ ಭೇಟಿ ನೀಡಿ ಪ್ರತಿಭಟನಾ ನಿರತ ರೈತ ಮುಖಂಡರೊಂದಿಗೆ ಚರ್ಚಿಸಿ, ಸಮಸ್ಯೆ ಪರಿಹಾರಕ್ಕೆ ಅಗತ್ಯವಾದ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

## ಫಲ ನೀಡದ ಶಾಸಕರ ಮತ್ತೊಂದು ಪ್ರಯತ್ನ; ಮುಂದುವರೆದ ರಾಣೇಬೆನ್ನೂರು ವರ್ತಕರ ಧರಣಿ



ರಾಣೇಬೆನ್ನೂರು,ಫೆ.17- ನೀವು ಪ್ರಮುಖವಾಗಿ ಹೇಳಿದ ನಾಲ್ಕು ಬೇಡಿಕೆಗಳಲ್ಲಿ ಮೂರು ಬೇಡಿಕೆಗಳನ್ನು ಸರ್ಕಾರ ಒಪ್ಪಿದ್ದು ಸೂಕ್ತ ಕ್ರಮ ಕೈಗೊಳ್ಳಲಿದೆ. ಇನ್ನೊಂದು ಬೇಡಿಕೆ ಬಗ್ಗೆ ಸೋಮವಾರ ಸಚಿವರೊಂದಿಗೆ ಮತ್ತೆ ಚರ್ಚೆ ಮಾಡಿ ಅವರ ಮನವೊಲಿಸುವ ಪ್ರಯತ್ನ ಮಾಡುವುದಾಗಿ ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ಅವರು ಹೂಲಿಹಳ್ಳಿ ಬಳಿಯ ಮೆಗಾ ಮಾರು ಕಟ್ಟೆಯ ನಿವೇಶನ ಪಡೆಯಲು ಸರ್ಕಾರ ಹಾಕಲಾದ ಷರತ್ತುಗಳನ್ನು ವಿರೋಧಿಸಿ ಎಪಿಎಂಸಿಯಲ್ಲಿ ಧರಣಿ ನಿರತ ವರ್ತಕರ ಜೊತೆ ಮಾತನಾಡುತ್ತಿದ್ದರು.

ನಾನು ನನ್ನ ಕ್ಷೇತ್ರದ ವರ್ತಕರಿಗಾಗಿ ಈ ಮೆಗಾ ಮಾರುಕಟ್ಟೆಯಿಂದ ಯಾವುದೇ ತೊಂದರೆ ಆಗದಂತೆ ಪ್ರಾಮಾಣಿಕ ಪ್ರಯತ್ನ ನಡೆಸಿದ್ದೇನೆ. ಎರಡನೇ ಹಂತದ ವಿತರಣೆಯಲ್ಲಿ ಯಾವುದೇ ಮೀಸಲಾತಿ ಇಲ್ಲದೇ ಎಲ್ಲ ನಿವೇಶನಗಳನ್ನು ಸ್ಥಳೀಯರಿಗೆ ಕೊಡಲಾಗುವುದು. ಈಗ ನೀವು ನಿವೇಶನದ ಅರ್ಜಿಗಳನ್ನು ತೆಗೆದುಕೊಳ್ಳಿರಿ ಎಂದು ಶಾಸಕರು ತಿಳಿಸಿದರು.

ನಡೆಯುತ್ತಿರುವ ಪ್ರಕ್ರಿಯೆ ಸಂಪೂರ್ಣ ದ್ವಂದ್ವ ವಾಗಿದೆ. ಇದರಿಂದ ವರ್ತಕರಿಗೆ ಬಹಳ ಅನ್ಯಾಯವಾಗಲಿದೆ ಎಂಬುದನ್ನು ವರ್ತಕರಾದ ಜಿ.ಜಿ.ಹೊಟ್ಟಿ ಗೌಡ್ರ, ಸದಾನಂದ ಉಪ್ಪಿನ, ರಾಜಣ್ಣ ಮೋಟಗಿ, ಹುಕ್ಮಿಚಂದ್ ಜೈನ್, ವಿ.ಪಿ.ಲಿಂಗನಗೌಡ ಅವರು ಶಾಸಕರಿಗೆ ಮನವರಿಕೆ ಮಾಡಿದಾಗ, ಈ ಬಗ್ಗೆ ಕೂಲಂಕುಶವಾಗಿ ಚರ್ಚೆ ನಡೆಸಿ, ಸೋಮವಾರದ ನಂತರ ಸೂಕ್ತ ನಿರ್ಣಯಕ್ಕೆ ಬರುವುದಾಗಿ ಶಾಸಕ ಪ್ರಕಾಶ ಕೋಳಿವಾಡ ತಿಳಿಸಿದ್ದು, ವರ್ತಕರ ಧರಣಿ ಮುಂದುವರೆದಿದೆ.

## ಎಲೆಬೇತೂರು : 'ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ' ಭಾವಚಿತ್ರ ಅನಾವರಣ



ಎಲೆಬೇತೂರು, ಫೆ. 17- ಇಲ್ಲಿನ ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಮತ್ತು ತರಳಬಾಳು ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ 'ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ'ನವರ ಭಾವಚಿತ್ರವನ್ನು ಅನಾವರಣಗೊಳಿಸಲಾಯಿತು.

ಪ್ರಾಸ್ತಾವಿಕವಾಗಿ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ಅನಾವರಣ ಕುರಿತು ಅಧ್ಯಾಪಕ ಹೆಚ್. ಎಸ್. ದ್ಯಾಮೇಶ್ ಮಾತನಾಡಿದರು. 'ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ'ನವರ ಭಾವಚಿತ್ರವನ್ನು ತರಳಬಾಳು ಪ್ರಾಥಮಿಕ ಶಾಲಾ ಸಲಹಾ ಸಮಿತಿಯ ಅಧ್ಯಕ್ಷ ಹೆಚ್. ಬಸವರಾಜಪ್ಪ ಅನಾವರಣಗೊಳಿಸಿದರು.

ಹಿರಿಯರಾದ ಶಿಖರಪ್ಪ ಮರುಳಸಿದ್ದಪ್ಪ, ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ. ಬೇತೂರು ಮಾತನಾಡಿದರು. ವೇದಿಕೆಯ ಮೇಲೆ ಶಾಲಾ ಸ್ಥಳೀಯ ಸಲಹಾ ಸಮಿತಿಯ ಸದಸ್ಯರಾದ ಹಳ್ಳಿಕೇರಿ ರಾಜಣ್ಣ, ಎಲಿಗಾರ್ ಮಹೇಶ್, ಮಾಗೋಡ್ರು ಕೊಟ್ರೇಶ್ ಮತ್ತು ಶಾಲಾ ಅಧ್ಯಾಪಕರು ಉಪಸ್ಥಿತರಿದ್ದರು.

ಮುಖ್ಯೋಪಾಧ್ಯಾಯಿನಿ ಎಂ.ಬಿ. ಪ್ರೇಮಾ ಸ್ವಾಗತಿಸಿದರು. ಷಣ್ಮುಖಪ್ಪ ವಂದಿಸಿದರು. ಅಧ್ಯಾಪಕರಾದ ಉಷಾ ಸುಶ್ರಾವ್ಯವಾಗಿ ಬಸವಣ್ಣನವರ ವಚಗಳನ್ನು ಹಾಡಿದರು. ಅಧ್ಯಾಪಕ ಎಸ್.ಆರ್. ನಾಗರಾಜ್ ಕಾರ್ಯಕ್ರಮ ನಡೆಸಿಕೊಟ್ಟರು. ಉಭಯ ಶಾಲೆಗಳ ವಿದ್ಯಾರ್ಥಿಗಳು ವಚನಗಳನ್ನು ಹೇಳಿ ಕಾರ್ಯಕ್ರಮಕ್ಕೆ ಮೆರಗು ನೀಡಿದರು.

## ಎಲೆಬೇತೂರಿನಲ್ಲಿ ಇಂದು - ನಾಳೆ ದುಂಡಿ ಬಸವೇಶ್ವರ ದೇವಸ್ಥಾನ ಉದ್ಘಾಟನೆ



ದಾವಣಗೆರೆ ಸಮೀಪದ ಎಲೆಬೇತೂರು ಗ್ರಾಮದ ಮಾಳಿಗೇರ ಬಸವರಾಜಪ್ಪ ಕುರುವತ್ತೆಪ್ಪ ಅವರ ಮನೆಯ ಆವರಣದಲ್ಲಿರುವ ಶ್ರೀ ದುಂಡಿ ಬಸವೇಶ್ವರ ದೇವಸ್ಥಾನ ಉದ್ಘಾಟನೆ, ದೇವರ ಪ್ರತಿಷ್ಠಾಪನೆ ಹಾಗೂ ನೂತನ ಗೋಪುರ ಕಳಸಾರೋಹಣ ಕಾರ್ಯಕ್ರಮವು ಇಂದು ಮತ್ತು ನಾಳೆ ಜರುಗಲಿದೆ.

ಇಂದು ಸಂಜೆ ದೇವಸ್ಥಾನದ ಆವರಣದಲ್ಲಿ ದೇವಾಲಯ ಶುದ್ಧೀಕರಣ, ನವಗ್ರಹ ಹೋಮ, ವಾಸ್ತು ಹೋಮ, ಶ್ರೀ ದುಂಡಿ ಬಸವೇಶ್ವರ ದೇವರಿಗೆ ಪ್ರಾಣ ಪ್ರತಿಷ್ಠಾಪನೆ ಹಾಗೂ ಶ್ರೀ ತರಳಬಾಳು ಯುವಕರ ಭಜನಾ ಸಂಘ, ಅಗಸನಕಟ್ಟೆ ಶಿವಕುಮಾರಯ್ಯ ಇವರ ತಂಡದಿಂದ ಭಜನಾ ಕಾರ್ಯಕ್ರಮಗಳು ನಡೆಯಲಿವೆ.

ನಾಳೆ ಸೋಮವಾರ ಬೆಳಿಗ್ಗೆ 6.30 ಗಂಟೆಗೆ ಶ್ರೀ ದುಂಡಿ ಬಸವೇಶ್ವರ ದೇವರಿಗೆ ಪಂಚಾಮೃತ ಅಭಿಷೇಕ, ದೇವರ ಗರ್ಭಗುಡಿ ಪ್ರವೇಶ, ಸ್ವಾಮಿಗೆ ವಿಶೇಷವಾಗಿ ಬಿಲ್ವಪತ್ರೆ ಹಾಗೂ ಪುಷ್ಪಾಲಂಕಾರ, ಪೂರ್ಣಾಹುತಿ ಹೋಮ, ಮಂಗಳಾರತಿ, ಗೋಪುರ ಕಳಾಸಾರೋಹಣ ನಂತರ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ನಡೆಯಲಿದೆ.

## ಹರಿಹರ : ಬಸವಣ್ಣ ಭಾವಚಿತ್ರ ಅನಾವರಣ



ಹರಿಹರ, ಫೆ.17-ಇಲ್ಲಿನ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಭಾವಚಿತ್ರದ ಪೋಟೋ ಅನಾವರಣ ಮಾಡಲಾಯಿತು.

ಈ ಸಂದರ್ಭದಲ್ಲಿ ಗ್ರೇಡ್-2 ತಹಶೀಲ್ದಾರ್ ಶಶಿಧರಯ್ಯ, ಸಿಬ್ಬಂದಿಗಳಾದ ಹೇಮಂತ್ ಕುಮಾರ್, ಪರಮೇಶ್ವರಪ್ಪ, ಸೋಮಶೇಖರ್, ಜಗದೀಶ್, ವಿಜಯ ಕುಮಾರ್, ಉಮೇಶ್ ಇತರರು ಹಾಜರಿದ್ದರು.

## ವನ್ಯ ಸಂಘರ್ಷ ತಪ್ಪಿಸಿ : ವಯನಾಡಿನಲ್ಲಿ ಸರ್ವಪಕ್ಷಗಳ ಹೋರಾಟ

ವಯನಾಡ್, ಫೆ. 17 - ಮಾನವ - ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ನೀಡುವಂತೆ ಕೇರಳದ ಆಡಳಿತಾರೂಢ ಹಾಗೂ ವಿರೋಧ ಪಕ್ಷಗಳೆರಡೂ ಪ್ರತಿಭಟನೆ ನಡೆಸಿದ ಘಟನೆ ಕೇರಳದ ವಯನಾಡಿನಲ್ಲಿ ನಡೆದಿದೆ.

ಆಡಳಿತಾರೂಢ ಎಲ್‌ಡಿಎಫ್, ಪ್ರತಿಪಕ್ಷಗಳಾದ ಯುಡಿಎಫ್ ಹಾಗೂ ಬಿಜೆಪಿ ಜೊತೆಯಾಗಿ ಜಿಲ್ಲಾದ್ಯಂತ ಹರತಾಳಕ್ಕೆ ಕರೆ ನೀಡಿದ್ದವು. ಈ ಸಂದರ್ಭದಲ್ಲಿ ಪುಲ್ಪಲ್ಲಿ ಎಂಬಲ್ಲಿ ಪ್ರತಿಭಟನಾಕಾರರು ಅರಣ್ಯ ಇಲಾಖೆ ವಾಹನಕ್ಕೆ ಹಾನಿ ಮಾಡಿದ್ದಾರೆ ಹಾಗೂ ಅದರ ಮೇಲೆ ಹುಲಿ ದಾಳಿಗೆ ಸಿಕ್ಕಿ ಸತ್ತ ಹಸುವನ್ನು ಕಟ್ಟಿದ್ದಾರೆ.

ವಯನಾಡಿನ ಈ ಸಮಸ್ಯೆ ಬಗೆಹರಿಸಲು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಸಚಿವರು ಹಾಗೂ ಉನ್ನತ ಅಧಿಕಾರಿಗಳ ಸಭೆ ಕರೆದಿದ್ದಾರೆ.


ಕಳೆದ ವಾರ ಅರಣ್ಯ ಇಲಾಖೆಯ ಪರಿಸರ ಪ್ರವಾಸಿ ಮಾರ್ಗದರ್ಶಕರಾಗಿದ್ದ ಪೌಲ್ ಆನೆ ದಾಳಿಗೆ ಸಿಲುಕಿ ಸಾವನ್ನಪ್ಪಿದ್ದರು. ನಂತರ ವಯನಾಡಿನಲ್ಲಿ ವ್ಯಾಪಕ ಪ್ರತಿಭಟನೆಗಳು ನಡೆಯುತ್ತಿವೆ.

### ಬಸಾಪುರದ ಗುರುಶಾಂತಮ್ಮ ನಿಧನ



ದಾವಣಗೆರೆ ತಾಲ್ಲೂಕು ಬಸಾಪುರ ಗ್ರಾಮದ ವಾಸಿ ದಿ॥ ಹರಿಯಜ್ಜರ ಗುರುಸಿದ್ದಪ್ಪನವರ ಧರ್ಮಪತ್ನಿ ಶ್ರೀಮತಿ ಗುರುಶಾಂತಮ್ಮ ಅವರು ದಿನಾಂಕ 17.02.2024ರ ಶನಿವಾರ ಮಧ್ಯಾಹ್ನ 1 ಗಂಟೆಗೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.02.2024ರ ಭಾನುವಾರ ಬೆಳಿಗ್ಗೆ 10.30ಕ್ಕೆ ಬಸಾಪುರದ ರುದ್ರಭೂಮಿಯಲ್ಲಿ ನೆರವೇರಲಿದೆ.

### ನುಚ್ಚಿನ ಉಮಾಪತಿಯಪ್ಪ ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ, 2ನೇ ಮೇನ್, 6ನೇ ಕ್ರಾಸ್ ವಾಸಿ ನುಚ್ಚಿನ ಉಮಾಪತಿಯಪ್ಪ (84) ಇವರು ದಿನಾಂಕ 17.02.2024ರ ಶನಿವಾರ ಸಂಜೆ 6.30ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.02.2024ರ ಭಾನುವಾರ ಮಧ್ಯಾಹ್ನ 2ಕ್ಕೆ ಗ್ಲಾಸ್‌ಹೌಸ್ ಹಿಂಭಾಗದ ಶಾಮನೂರು ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

### ಸಾಲಕಟ್ಟೆ ಕಡೇಮನೆ ಯೋಗಪ್ಪ ನಿಧನ



ಹರಿಹರ ತಾಲ್ಲೂಕು ಸಾಲಕಟ್ಟೆ ಗ್ರಾಮದ ಕಡೇಮನೆ ಯೋಗಪ್ಪ ಇವರು ದಿನಾಂಕ 17.02.2024ರ ಶನಿವಾರ ಸಂಜೆ 4 ಕ್ಕೆ ನಿಧನರಾದರು. ಪತ್ನಿ, ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.02.2024ರ ಭಾನುವಾರ ಮಧ್ಯಾಹ್ನ 1ಕ್ಕೆ ಸ್ವಗ್ರಾಮ ಹರಿಹರ ತಾಲ್ಲೂಕು ಸಾಲಕಟ್ಟೆ ಗ್ರಾಮದಲ್ಲಿ ನೆರವೇರಲಿದೆ.

### ಎಲೆಬೇತೂರು ಮಾಳಿಗೇರ ಮರುಳಪ್ಪ ನಿಧನ



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ ಮಾಳಿಗೇರ ಮರುಳಪ್ಪ (90) ಇವರು ದಿನಾಂಕ 17.02.2024ರ ಶನಿವಾರ ಮಧ್ಯಾಹ್ನ 4.30ಕ್ಕೆ ನಿಧನರಾದರು. ಓರ್ವ ಪುತ್ರ, ಐವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.02.2024ರ ಭಾನುವಾರ ಬೆಳಿಗ್ಗೆ 11ಕ್ಕೆ ಸ್ವಗ್ರಾಮ ಎಲೆಬೇತೂರು ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

## ಟೈಲರ್‌ಗಳ ಸಂಕಷ್ಟಕ್ಕೆ ಮಿಡಿಯದ ಸರ್ಕಾರ



ಟೈಲರ್‌ಗಳಿಗಾಗಿ ಕಲ್ಯಾಣ ಮಂಡಳಿ ರಚನೆಯಾಗಬೇಕೆಂಬುದು ರಾಜ್ಯದ ಎಲ್ಲ ಟೈಲರ್‌ಗಳ ಕನಸಾಗಿತ್ತು. ಆದರೆ ಈ ಬಾರಿಯ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಟೈಲರ್‌ಗಳಿಗೆ ನಿರಾಸೆ ಉಂಟು ಮಾಡಿದೆ.

ಕಟ್ಟಡ ಕಾರ್ಮಿಕರಿಗೆ ಇರುವ ಕಲ್ಯಾಣ ಮಂಡಳಿಯ ರೀತಿ ಟೈಲರ್‌ಗಳಿಗೂ ಕಲ್ಯಾಣ ಮಂಡಳಿ ಆಗಬೇಕೆಂದು ಸಾಕಷ್ಟು ಬಾರಿ ಹೋರಾಟ ಮಾಡಿದರೂ ಪ್ರಯೋಜನವಾಗಲಿಲ್ಲ, ಅದೇ ರೀತಿ ದಾವಣಗೆರೆ ಜಿಲ್ಲೆಗೆ ಯಾವುದೇ ಕೊಡುಗೆ ನೀಡದ ಬಜೆಟ್ ಇದಾಗಿದೆ. ದಾವಣಗೆರೆ ಸರ್ಕಾರಿ ವೈದ್ಯಕೀಯ ಕಾಲೇಜು, ಪೂರ್ಣ ಮಟ್ಟದ ಟೆಕ್ಸ್‌ಟೈಲ್ ಪಾರ್ಕ್ ಮತ್ತು ಸ್ಥಳೀಯ ಯುವ ಜನತೆಗೆ ಐಟಿ ಬಿಟಿ ಪಾರ್ಕ್‌ಬೇಕೆಂಬುದು ಈ ಬಾರಿಯೂ ಈಡೇರಿಲ್ಲ. ಒಟ್ಟಾರೆಯಾಗಿವ ರಾಜ್ಯದ ಟೈಲರ್‌ಗಳಿಗೆ ಹಾಗೂ ಜಿಲ್ಲೆಗೆ ಯಾವುದೇ ಕೊಡುಗೆಯಿಲ್ಲದ ಬಜೆಟ್ ಇದಾಗಿದೆ.

**-ಕೆ.ಜಿ.ಯಲ್ಲಪ್ಪ, ಅಧ್ಯಕ್ಷರು, ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ**

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ವಾರ ಭವಿಷ್ಯ

**ದಿನಾಂಕ : 18.02.2024 ರಿಂದ 24.02.2024ರವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಅನಿವಾರ್ಯ ಕಾರಣಗಳಿಂದ ಎಲ್ಲರೊಂದಿಗೆ ಹೊಂದಿಕೊಂಡು ಹೋಗಲು ಪ್ರಯತ್ನಿಸುವಿರಿ, ಕೌಟುಂಬಿಕ ಸೌಖ್ಯವಿದ್ದರೂ ಕೆಲವೊಮ್ಮೆ ಅಸಮಾಧಾನದ ಹೊಗೆ ಕಾಣಲಿದೆ. ಮಧ್ಯಗತಿಯಲ್ಲಿರುವ ಹಣಕಾಸಿನ ಸ್ಥಿತಿ ನಿಮ್ಮ ಹಲವು ಯೋಜನೆಗಳಿಗೆ ತಾತ್ಕಾಲಿಕ ಮಂದಗತಿ ಕಾಣಲಿದೆ, ಪಿತ್ರಾರ್ಜಿತ ಆಸ್ತಿ ವಿಭಾಗದ ವಿಷಯ ಈಗ ಮುನ್ನೆಲೆಗೆ ಬರಲಿದೆ. ಈ ಸಂದರ್ಭದಲ್ಲಿ ಅತಿಯಾದ ಕೋಪ-ತಾಪ ಒಳ್ಳೆಯದಲ್ಲ. ಹಳೆ ರೋಗಕ್ಕೆ ಮತ್ತೆ ಚಿಕಿತ್ಸೆ ಪಡೆಯುವಿರಿ. ಭಾನು-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಗಣಿತ ವಿಷಯ ಅಧ್ಯಾಪಕರಿಗೆ ಹೆಚ್ಚಿನ ಗಳಿಕೆಯಾಗಲಿದೆ, ಮನೆಯಲ್ಲಿ ಹಿರಿಯರು ಮತ್ತು ಗೆಳೆಯರು ಸಾಕಷ್ಟು ನೆರವು ನೀಡುವರು, ಅದನ್ನು ಸದುಪಯೋಗಪಡಿಸಿಕೊಳ್ಳಿ. ಸಂಗೀತಗಾರರ ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆ ಒದಗಿಬರಲಿದೆ. ನವದಂಪತಿಗಳಿಗೆ ಜೀವನದ ಪ್ರಾಮುಖ್ಯತೆಯ ಅರಿವಾಗಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳಿದ್ದು, ಉದ್ಯೋಗ ದೊರೆಯಲಿದೆ. ನಿಮ್ಮ ನಡಾವಳಿಕೆಯಲ್ಲಿ ತುಸು ಬದಲಾವಣೆ ಮಾಡಿಕೊಳ್ಳುವುದು ಮೇಲು. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**

ಅರಿತೋ ಅಥವಾ ಮರೆತೋ ಆಡಿದ ಮಾತು ಕೆಲವೊಮ್ಮೆ ನಿಮ್ಮ ಮೇಲೆ ಕೆಟ್ಟ ಪರಿಣಾಮ ಬೀರಲಿದೆ. ಇದು ಅಲಕ್ಷಿಸುವ ವಿಚಾರವಲ್ಲ ಎಂಬುದು ನೆನಪಿರಲಿ. ಕ್ರೀಡಾಪಟುಗಳಿಗೆ ಉತ್ತಮ ತರಬೇತುದಾರರು ದೊರೆಯುವರು ಸ್ವಂತ ಜಮೀನನ್ನು ಅಭಿವೃದ್ಧಿ ಪಡಿಸಲು ಇದು ಸಕಾಲ, ಜಮೀನಿನ ಒತ್ತುವರಿಗೆ ಸಂಬಂಧಪಟ್ಟ ತಕರಾರುಗಳನ್ನು ಆದಷ್ಟುಬೇಗ ಬಗೆಹರಿಸಿಕೊಳ್ಳಿ, ಮಧ್ಯಮ ಸ್ಥರದ ಆದಾಯವಿರುವುದ ರಿಂದ ಜೀವನಕ್ಕೇನೂ ತೊಂದರೆಯಿಲ್ಲ. ಮಂಗಳ-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಈ ವಾರ ಆಲಸ್ಯತನ ಎಂಬುದು ನಿಮ್ಮನ್ನು ಮನೆಯಲ್ಲಿದ್ದರೂ, ಕೆಲಸದಲ್ಲಿ ತೊಡಗಿಕೊಂಡಿದ್ದರೂ ಕಾಡಲಿದೆ, ಕಲಿಕೆಗಿರುವ ಉತ್ತಮಾವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳುವುದು ಮೇಲು. ಬೇಸಾಯದ ವಿಚಾರದಲ್ಲಿ ಎಲ್ಲದಕ್ಕೂ ಸರ್ಕಾರವನ್ನೇ ನೆಚ್ಚಿಕೊಂಡಿರುವುದರಲ್ಲಿ ಅರ್ಥವಿಲ್ಲ. ಅಧ್ಯಾತ್ಮ ವಿದ್ಯಾಸಕ್ತರಿಗೆ ಶ್ರೇಷ್ಠ ಗುರುಗಳ ಪ್ರಾಪ್ತಿಯಾಗಲಿದೆ, ಪಾಲುದಾರಿಕೆ ವ್ಯವಹಾರದಲ್ಲಿ ನಿಮ್ಮ ಪಾಲು ದೊರೆಯಲಿದೆ. ಭಾನು-ಸೋಮ-ಗುರು-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಯಾವುದೇ ಕಾರಣಕ್ಕೂ ಆತ್ಮವಿಶ್ವಾಸವನ್ನು ಬಿಡಬೇಡಿ, ಹೆಚ್ಚಿನ ನಂಬಿಕೆಯಿರಲಿ.ಇಲ್ಲವಾದಲ್ಲಿ ಇದರ ಅಡ್ಡಪರಿಣಾಮ ಉದ್ಯೋಗದ ಮೇಲಲ್ಲದೆ ವೈಯಕ್ತಿಕ ಬದುಕಿನ ಮೇಲೂ ಬೀರಬಹುದು. ಆರ್ಥಿಕ ಸ್ಥಿತಿ ಮಂದಗತಿಯಲ್ಲಿದೆಯೆಂದು ಅಡ್ಡ ದಾರಿಯಲ್ಲಿ ಹಣ ಗಳಿಸಲು ಯತ್ನಿಸಬೇಡಿ, ಮೇಲಾಧಿಕಾರಿಗಳಿಂದ ನಿಮಗೆ ಸಂಪೂರ್ಣ ಬೆಂಬಲ ದೊರೆಯಲಿದೆ, ಕೃಷಿಯಿಂದ ಹೆಚ್ಚಿನ ಲಾಭದ ನಿರೀಕ್ಷೆಬೇಡ, ಯುವಜನರಿಗೆ ಉತ್ತಮ ದಿನಗಳು, ಗೋ ಸೇವೆಮಾಡಿ. ಭಾನು-ಮಂಗಳ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಸಿನಮಾ ಕಲಾವಿದರಿಗೆ ಹೆಚ್ಚಿನ ಆದಾಯವಾಗಲಿದೆ, ಸಾಧ್ಯವಿದ್ದಲ್ಲಿ ಅವರು ಸ್ವ- ಉಳಿತಾಯಕ್ಕೆ ಯತ್ನಿಸಬಹುದು, ಚಾಡಿ ಮಾತುಗಳಿಗೆ ಹಿತ್ತಾಳೆ ಕಿವಿಯಾಗಿ ಕುಟುಂಬದ ನೆಮ್ಮದಿಯನ್ನು ಕಳೆದುಕೊಳ್ಳಬೇಡಿ, ಮರೆತು ಮಾಡಿದ ತಪ್ಪುಗಳಿಗೆ ಕ್ಷಮೆಯಿರಲಿ, ಮನೆಯಲ್ಲಿ ನಡೆಯಬೇಕಾಗಿರುವ ಶುಭ ಕಾರ್ಯಗಳ ಕಡೆ ಹೆಚ್ಚಿನ ಗಮನಹರಿಸುವುದು ಲೇಸು. ಬಂಧುಗಳ ಮಧ್ಯೆಯಿರುವ ವೈಮನಸ್ಯ ಈ ಶುಭ ಕಾರ್ಯದಲ್ಲಿ ಸರಿಹೋಗಲಿದೆ. ಹೆಚ್ಚಿನ ಆದಾಯದ ನಿರೀಕ್ಷೆಬೇಡ. ಸೋಮ-ಬುಧ-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಎಲ್ಲರಿಂದಲೂ ಅತಿಯಾದ ಗೌರವವನ್ನು ಅಪೇಕ್ಷಿಸಲು ಯತ್ನಿಸ ಬೇಡಿ, ಇದರಿಂದ ನಿರಾಶೆಯುಂಟಾಗುವುದರ ಜೊತೆಗೆ ಅಪಹಾಸ್ಯಕ್ಕೆ ಒಳಗಾಗ ಬಹುದು. ಅಗತ್ಯಕ್ಕೆ ತಕ್ಕಂತೆ ಆದಾಯವಿರುವುದರಿಂದ ಅದರ ಚಿಂತೆಬೇಡ, ಯುವಕರು ತಮ್ಮ ಮಾತಿನ ಚಾಕಚಕ್ಯತೆಯಿಂದ ಎಲ್ಲರ ಮನಗೆಲ್ಲು ವರು. ಆಸ್ತಿಗೆ ಸಂಬಂಧಪಟ್ಟ ದಾಖಲೆಗಳಲ್ಲಿದ್ದ ತಪ್ಪುಗಳು ಇನ್ನು ಮುಂದೆ ಸರಿ ಹೋಗಲಿವೆ, ಮಹಿಳೆಯರಿಗೆ ಉತ್ತಮ ದಿನಗಳು. ಬುಧ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಆರಕ್ಷಕರಿಗೆ ತಮ್ಮ ಮೇಲಾಧಿಕಾರಿಗಳ ಕೃಪಾಕಟಾಕ್ಷದಿಂದಾಗಿ ಪದೋನ್ನತಿಯಾಗಲಿದೆ, ಸಂಪಾದನೆ ಎಷ್ಟೇ ಹೆಚ್ಚಾಗಿದ್ದರೂ ಖರ್ಚು-ವೆಚ್ಚಗಳ ಮೇಲೆ ನಿಗಾವಹಿಸದೇ ಹೋದಲ್ಲಿ ಉಳಿತಾಯದ ಗಂಟೂ ಕರಗಲಿದೆ, ಮನೆಯಲ್ಲಿ ಹಿರಿಯರೊಂದಿಗೆ ಸ್ವಲ್ಪ ವಾಗ್ವಾದವಾಗಲಿದೆ. ಸಾಧ್ಯವಾದಷ್ಟು ಇದನ್ನು ತಡೆಯಲು ಪ್ರಯತ್ನಿಸಿ, ಆದರೂ ಅವರಿಗೆ ನಿಮ್ಮ ಮೇಲಿನ ಪ್ರೀತಿಯೇನೂ ಕಡಿಮೆಯಾಗು ವುದಿಲ್ಲ. ಗುರು ಸೇವೆ ಮಾಡಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಮಹಿಳೆಯರು ತಮಗೆ ಸಂಬಂಧಪಡದ ವಿಚಾರದಲ್ಲಿ ಪ್ರವೇಶ ಮಾಡುವುದರಿಂದ ಅಪಮಾನಕ್ಕೆ ಒಳಗಾಗುವರು. ಗುತ್ತಿಗೆದಾರರಿಗೆ ಸರ್ಕಾರ ದಿಂದ ಬರಬೇಕಾಗಿರುವ ಬಾಕಿ ಹಣ ಇಷ್ಟರಲ್ಲೇ ಕೈ ಸೇರಲಿದೆ, ಕೃಷಿಯಿಂದ ಉತ್ತಮ ಆದಾಯವು ರೈತ ಮಿತ್ರರ ಕೈಸೇರಲಿದೆ. ಸೋದರನಿಗೆ ವಿವಾಹ ನಿಶ್ಚಯ ವಾಗಲಿದ್ದು, ಮನೆಯಲ್ಲಿ ಹಬ್ಬದ ವಾತಾವರಣ ಮೂಡಲಿದೆ. ಕೆಲವರ ವಿಚಾರದಲ್ಲಿ ಉದಾಸೀನರಾಗಿರುವುದು ಉತ್ತಮ ಗೋ ಸೇವೆ ಮಾಡಿ. ಬುಧ-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಮಂತ್ರಿಮಹೋದಯರ ಕೃಪಾಕಟಾಕ್ಷದಿಂದ ಪದೋನ್ನತಿ ಪಡೆದವರಿಗೆ ಕರ್ತವ್ಯದಲ್ಲಿ ಜವಾಬ್ದಾರಿ ಹೆಚ್ಚಲಿದೆ. ಅದೃಷ್ಟವೋ ಎಂಬಂತೆ ಬರಬೇಕಾಗಿರುವ ಬಾಕಿ ಹಣ ತಾನಾಗಿಯೇ ಕೈ ಸೇರಲಿದೆ, ಅಲ್ಲದೇ ಆದಾಯ ದಲ್ಲೂ ಏರಿಕೆ ಕಂಡುಬರಲಿದೆ, ವಿದ್ಯಾರ್ಥಿಗಳ ಅಧ್ಯಯನಕ್ಕೆ ತಕ್ಕಂತೆ ಫಲಿತಾಂಶ ಬರಲಿದೆ, ನರಸಂಬಂಧಿ ಆರೋಗ್ಯ ಸಮಸ್ಯೆಯಿರುವವರು ತುಸು ಎಚ್ಚರದಿಂದಿರು ವುದು ಮೇಲು, ಮಹಿಳೆಯರಿಗೆ ತವರು ಮನೆಯಿಂದ ನೆರವು ಸಿಗಲಿದೆ. ಗುರು-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಮಾಡುವ ಕೆಲಸದಲ್ಲಿ ದ್ವಂದ್ವ ಕಂಡು ಬಂದಾಗ ಸ್ಥಿತಪ್ರಜ್ಞರಂತಿರು ವುದು ಮೇಲು, ವಿದೇಶಿ ಹಣ ಬದಲಾವಣೆ ವ್ಯವಹಾರ ಮಾಡುವವರಿಗೆ ಹೆಚ್ಚಿನ ಲಾಭವಾಗಲಿದೆ. ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡವರಿಗೆ ಸಾರ್ವಜನಿಕ ರಿಂದ ದೇಣಿಗೆ ಸಲ್ಲಲಿದೆ, ಕಲಿ ಪ್ರಭಾವವೋ ಎಂಬಂತೆ ಯುವಜನರಿಗೆ ಧರ್ಮ ದಲ್ಲಿ ಶ್ರದ್ಧಾಭಕ್ತಿ ಕಡಿಮೆಯಾಗಲಿದೆ. ಹಣ್ಣು, ಹೂವು, ತರಕಾರಿ ವ್ಯಾಪಾರಿಗಳಿಗೆ ಉತ್ತಮ ವಹಿವಾಟಿನಿಂದಾಗಿ ಲಾಭವಾಗಲಿದೆ. ಸೋಮ-ಬುಧ-ಶನಿ- ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಬೇರೆಯವರ ಥಳುಕಿನ ಮಾತುಗಳಿಗೆ ಮರುಳಾಗಿ ಹಣ ಕಳೆದುಕೊಳ್ಳುವ ಪ್ರಸಂಗ ಬರಲಿದೆ. ಮನೆಯಲ್ಲಿ ಮಂಗಳ ಕಾರ್ಯ ನಡೆದರೂ ಯಾವುದೋ ತಳಮಳ ನಿಮ್ಮನ್ನು ಬಾಧಿಸಲಿದೆ. ಕಂಡವರ ಕಷ್ಟಕ್ಕೆ ನೆರವಾಗಲು ಹೋಗಿ ನೀವೇ ತೊಂದರೆಗೆ ಸಿಲುಕುವಿರಿ, ವೃತ್ತಿಯಲ್ಲಿ ಸ್ಥಿರತೆ ಕಾಪಾಡಿಕೊಳ್ಳಲು, ಮೇಲಾಧಿಕಾರಿ ಗಳನ್ನು ಓಲೈಸುವಿರಿ, ಇಷ್ಟವಿಲ್ಲದ ಕೆಲಸಗಳನ್ನು ಕಷ್ಟವಾದರೂ ಮಾಡಲೇಬೇಕಾಗಬಹುದು, ಹಿರಿಯರ ಸಲಹೆ ಸಮಯಕ್ಕೆ ನೆರವಾಗಲಿದೆ. ಭಾನು-ಸೋಮ-ಗುರು-ಶುಭ ದಿನಗಳು.


**ಈ ವಾರದ ವಿಶೇಷತೆಗಳು :**

**ದಿನಾಂಕ: 18.2.2024 ನೇ ಭಾನುವಾರ ಮಧ್ವನವಮೀ (ಶ್ರೀ ಮಧ್ವಾಚಾರ್ಯರು ಬದರಿಕಾಶ್ರಮವನ್ನು ಪ್ರವೇಶಿಸಿದ ದಿನ), ಶ್ರೀಕ್ಷೇತ್ರ ಕಡ್ಲೇಬಾಳ್‌ನಲ್ಲಿ ಮಧ್ವಾಂಜನೇಯಸ್ವಾಮಿ ರಥೋತ್ಸವ.**

**ದಿನಾಂಕ:- 24-2-2024 ನೇ ಶನಿವಾರ ಭರತ ಹುಣ್ಣಿಮೆ, ಶ್ರೀಕ್ಷೇತ್ರ ಹರಿಹರದಲ್ಲಿ ಶ್ರೀ ಹರಿಹರೇಶ್ವರ ಸ್ವಾಮಿ ರಥೋತ್ಸವ. ಮಾಘ ಸ್ನಾನ ಸಮಾಪ್ತಿ.**

# ಸಾಂಸ್ಕೃತಿಕ ನಾಯಕ ಬಸವಣ್ಣ ಕೇವಲ ಪೂಜೆಯ ವಸ್ತುವಾಗಬಾರದು

## ಸಾಣೇಹಳ್ಳಿಯಲ್ಲಿನ ಬಸವಣ್ಣ ಭಾವಚಿತ್ರ ಬಿಡುಗಡೆ ಸಮಾರಂಭದಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ



ಸಾಣೇಹಳ್ಳಿ, ಫೆ. 17- ಸಾಂಸ್ಕೃತಿಕ ನಾಯಕ ಬಸವಣ್ಣ ಕೇವಲ ಪೂಜೆಯ ವಸ್ತುವಾಗಬಾರದು. ಅವರ ಆಶಯಗಳನ್ನು ಮನೆ, ಮನಗಳಲ್ಲಿ ಬಿತ್ತಿಕೊಂಡು, ಅವುಗಳನ್ನೇ ಬೆಳೆದರೆ ಎಲ್ಲರ ಬದುಕು ಹಸನಾಗುತ್ತದೆ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಶ್ರೀಮಠದಲ್ಲಿ ನಡೆದ ವಿಶ್ವಗುರು ಬಸವಣ್ಣನವರ 'ಸಾಂಸ್ಕೃತಿಕ ನಾಯಕ' ಭಾವಚಿತ್ರ ಬಿಡುಗಡೆ ಸಮಾರಂಭ ಹಾಗೂ 'ಮಾನವೀಯ ಸಮಾಜ ನಿರ್ಮಾಣದಲ್ಲಿ ವಚನ ಸಾಹಿತ್ಯ' ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶ್ವದ ಅನೇಕ ಸಂತರಲ್ಲಿ, ಶರಣರಲ್ಲಿ, ಸಾಮಾಜಿಕ ನೇತಾರರಲ್ಲಿ ಪ್ರಥಮ ಸ್ಥಾನ ಲಭ್ಯವಾಗುವಂಥದ್ದು ಬಸವಣ್ಣನವರಿಗೆ. ಕಾರಣ ಬಸವಣ್ಣನವರು ತಳಮೂಲದ ಸಂಸ್ಕೃತಿಯಿಂದ ಸಮಾಜವನ್ನು ಕಟ್ಟುವ ಕಾರ್ಯ ಮಾಡಿದರು. ಅಜ್ಞಾನ, ಮೂಢನಂಬಿಕೆ, ಮೌಢ್ಯವನ್ನು ಕಿತ್ತುಹಾಕುವ ಕಾರ್ಯದಲ್ಲಿ ಯಶಸ್ವಿಯಾಗಿ ಸಮಸಮಾಜ ಕಟ್ಟುವ ಅವರ ಎಲ್ಲ ಸಂಪತ್ತು ನಮ್ಮಲ್ಲೇ ಇದ್ದಾಗ ಮತ್ತೆ ಬೇರೆ ಕಡೆ ಆ ಸಂಪತ್ತನ್ನು ಹುಡುಕಿಕೊಂಡು ಹೋಗುತ್ತಿರುವುದು ನಾಚಿಕೆಗೇಡಿನ ಸಂಗತಿ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ವಿಶ್ವಗುರು ಬಸವಣ್ಣನವರನ್ನು 'ಸಾಂಸ್ಕೃತಿಕ ನಾಯಕ' ಎಂದು ಘೋಷಣೆ ಮಾಡಿದೆ. ಬಸವಣ್ಣನವರು ಮೇಲ್ವರ್ಗದ ಜನರನ್ನು ತಮ್ಮ ಕನಸನ್ನು ನನಸನ್ನಾಗಿ ಮಾಡಿಕೊಳ್ಳಲಿಕ್ಕೆ ಬಳಸಿಕೊಳ್ಳಲಿಲ್ಲ. ತಳಸಮುದಾಯದ ಜನರನ್ನು ಸಂಘಟಿಸಿ, ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿ ತನ್ಮೂಲಕ ಸಮಾಜದಲ್ಲಿ ಅದ್ಭುತವಾದ ಬದಲಾವಣೆ ತಂದರು. ಅಂತಹ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಅಂತ ಹೇಳಿ ಸರ್ಕಾರ ಗೌರವಿಸಿದ್ದು ಇಡೀ ಕನ್ನಡ ನಾಡಿಗೆ, ಭಾರತಕ್ಕೆ ಗೌರವ ತಂದುಕೊಟ್ಟ ಹಾಗೆ ಎಂದರು.

ಚಿಂತಕ ಎಸ್. ಜಿ. ಸಿದ್ಧರಾಮಯ್ಯ ಮಾತನಾಡಿ, ಮಕ್ಕಳಿಗೆ ಬಸವಣ್ಣನವರ ಸಾಂಸ್ಕೃತಿಕ ವ್ಯಕ್ತಿತ್ವ ಪರಿಚಯಿಸುವ ಹಿನ್ನೆಲೆ ಯಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬಸವಣ್ಣನವರು ಬಹುತ್ವದ ಸಂಕೇತ. ಈ ದೇಶದಲ್ಲಿ ಎಲ್ಲ ಧರ್ಮ, ಭಾಷೆಗಳಿವೆ. ಇವೆಲ್ಲವನ್ನು ಒಳಗೊಳ್ಳುವಂಥದ್ದೇ ಬಸವಣ್ಣ. ಬಸವಣ್ಣ ನಮ್ಮ ಕನ್ನಡ ಪ್ರಜ್ಞೆಯ ಪ್ರತೀಕ. 12ನೆಯ ಶತಮಾನದಲ್ಲಿ ಬದುಕಿನ ಪರಿಭಾಷೆಯಲ್ಲಿ ಹುಟ್ಟಿಕೊಂಡಿದ್ದು ಲಿಂಗಾಯತ ಧರ್ಮ. ಶರಣರು ಸನಾತನದ ವಿರುದ್ಧವಾಗಿ ಪುರಾತನ ಎಂದು ಹೇಳಿದರು.

ಈಗಲೂ ಎಷ್ಟೋ ಮಠಗಳಲ್ಲಿ ಹೋಮ- ಹವನ ನಡೆಯುತ್ತಿರುವುದು ನಾಚಿಕೆಗೇಡಿನ ಸಂಗತಿ. ಶರಣರು ವೈದಿಕ ಪಥ್ಯಗಳನ್ನು ವಿರೋಧಿಸುವರು. ಕೇಡಿನ ಮೂಲ ಕುರಿತಂತೆ ಅರಿವಿನ ಎಚ್ಚರದೊಳಗೆ ಮಾತನಾಡುವಂಥವರು. ದಾನದ ವಿರುದ್ಧವಾಗಿ ದಾಸೋಹ ರೂಪ ಕೊಟ್ಟವರು. ಅನೇಕ ವರ್ಗದವರು ನಮ್ಮನ್ನು ಸಾಂಸ್ಕೃತಿಕ ಗುಲಾಮರನ್ನಾಗಿ ಮಾಡಿಕೊಂಡಿದ್ದಾರೆ. ಅದಕ್ಕೆ ಕಾರಣ ನಮ್ಮಲ್ಲಿನ ಅಜ್ಞಾನ ಎಂದರು.

ಚಿಂತಕ ನಟರಾಜ್ ಬೂದಾಳು ಮಾತನಾಡಿ, ಬಸವಣ್ಣನವರು ಹಾಕಿಕೊಟ್ಟ ವಿಚಾರಗಳನ್ನು ಜಾರಿಗೆ ತರುವಲ್ಲಿ ನಾವೆಲ್ಲ ಸೋತಿದ್ದೇವೆ. ಬುದ್ಧ, ಬಸವ, ಅಂಬೇಡ್ಕರ್‌ರವರ ಚಿಂತನೆಗಳು, ತತ್ವಗಳು ಕೇವಲ ತತ್ವಗಳಾಗಿ ಉಳಿದುಕೊಳ್ಳದೇ ಆಚರಣೆಗೆ ತಂದಾಗ ಮಾತ್ರ ಏನಾದರೂ ಬದಲಾವಣೆ ಮಾಡಲಿಕ್ಕೆ ಸಾಧ್ಯ ಎಂದರು.

ಬಸವಣ್ಣನವರ ಫೋಟೋ ಹಾಕಿ ಪೂಜೆ ಮಾಡುತ್ತೇವೆ, ಆದರೆ ಹೋಟೆಲ್, ಮನೆಗಳಲ್ಲಿ ಅಸ್ಪೃಶ್ಯರಿಗೆ ಇಂದಿಗೂ ಪ್ರವೇಶ ಇಲ್ಲದೇ ಇರುವುದು ದುರಂತ. ಮಕ್ಕಳನ್ನು ದಿಕ್ಕು ತಪ್ಪಿಸುವ ಕಾರ್ಯ ನಿರಂತರವಾಗಿ ನಡೀತಾ ಇದೆ. ಅವರನ್ನು ದಿಕ್ಕು ತಪ್ಪಿಸದೇ ಸನ್ಮಾರ್ಗದಲ್ಲಿ ಕರೆದುಕೊಂಡು ಹೋಗುವ ವರ್ಗ ನಿರ್ಮಾಣ ಆಗಬೇಕೆಂದರು.

ಚಿಂತಕ ರಹಮತ್ ತರೀಕೆರೆ ಮಾತನಾಡಿ, ಬಸವಣ್ಣನವರನ್ನು ಗೌರವಿಸುವುದು ಎಂದರೆ ನಮ್ಮ ಸುತ್ತಮುತ್ತ ಶ್ರಮಿಕ ವರ್ಗದವರನ್ನು ಗೌರವಿಸುವುದು ಎಂದರ್ಥ. ಬಸವಣ್ಣನವರನ್ನು, ಸಂಸ್ಕೃತಿಯನ್ನು ಉಳಿಸ ಬೇಕು ಎಂದರೆ ಅದಕ್ಕೊಂದು ಅವಕಾಶ ಮತ್ತು ಜಾಗಬೇಕು. ಆ ಜಾಗವನ್ನು ಬಳಸಿಕೊಳ್ಳಬೇಕೇ ವಿನಃ ಹಚ್ಚಿಕೊಳ್ಳಬಾರದು. 12ನೇಯ ಶತಮಾನದಲ್ಲಿಯೇ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಎಲ್ಲ ಶರಣರು ಒಪ್ಪಿಕೊಂಡಿದ್ದರು. ಅದನ್ನು ಈಗ ಸರ್ಕಾರ ಘೋಷಣೆ ಮಾಡಿದೆ. ದ್ವೇಷ ಅಳಿಸಿ ಸಾಮರಸ್ಯ ಮೂಡಿಸುವಂಥದ್ದು ಶರಣರ ಆಶಯ. ನಮ್ಮ ದೋಷಗಳನ್ನು ಒಪ್ಪಿಕೊಳ್ಳದೇ ಹೋದರೆ ಸಾಂಸ್ಕೃತಿಕ ಲೋಕವನ್ನು ಕಟ್ಟಿಕೊಳ್ಳಲಿಕ್ಕೆ ಸಾಧ್ಯವಿಲ್ಲ ಎಂದರು.

ಚಿಂತಕ ಬಸವರಾಜ ಸಾದರ ಮಾತನಾಡಿ, ಲಿಂಗಾಯತ ಧರ್ಮದಲ್ಲಿ ಎಲ್ಲ ಇದ್ದೂ ಏನೂ ಇಲ್ಲ ಎನ್ನುವ ರೀತಿಯಲ್ಲಿ ವರ್ತಿಸುತ್ತಿದ್ದೇವೆ. ಆದ್ದರಿಂದ ವಚನಗಳನ್ನು ಸರಳವಾದ ಭಾಷೆಯಲ್ಲಿ ಎಲ್ಲರಿಗೂ ತಲುಪಿಸುವ ಕಾರ್ಯ ತುರ್ತಾಗಿ ಆಗಬೇಕು. 'ಮತ್ತೆ ಕಲ್ಯಾಣ' ಎನ್ನುವಂಥದ್ದು ಜನರಿಗೆ ಅಗತ್ಯವಾಗಿ ಬೇಕಾಗಿರುವಂಥದ್ದು. ಪ್ರಶ್ನಿಸುವುದು, ಪ್ರತಿಭಟಿಸುವುದು, ನಿರಾಕರಿಸುವುದು, ಉತ್ತೇಜಿಸು ವುದು ಈ ಮೂರರ ಪ್ರಜ್ಞೆ ಜನಸಾಮಾನ್ಯರಿಗೂ ಇರಬೇಕೆಂದರು.

ವೇದಿಕೆಯ ಮೇಲೆ ಚಿಂತಕ ಶಿವನಕೆರೆ ಬಸವಲಿಂಗಪ್ಪ, ಐ. ಜಿ. ಚಂದ್ರಶೇಖರಯ್ಯ ಇದ್ದರು. ಶಿವಸಂಚಾರದ ಕಲಾವಿದ ನಾಗರಾಜ್ ಹೆಚ್. ಎಸ್. ಶರಣ ವಚನ ಗೀತೆಗಳನ್ನು ಹಾಡಿದರು. ಮುಖ್ಯೋಪಾಧ್ಯಾಯ ಶಿವಕುಮಾರ್ ಬಿ.ಎಸ್ ಸ್ವಾಗತಿಸಿದರೆ, ಮಲ್ಲಿಕಾರ್ಜುನ್ ನಿರೂಪಿಸಿದರು.

### ಶರಣರೇ ಒಪ್ಪಿಕೊಂಡಿದ್ದರು..

'12ನೆಯ ಶತಮಾನದಲ್ಲಿಯೇ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಎಲ್ಲ ಶರಣರು ಒಪ್ಪಿಕೊಂಡಿದ್ದರು'

- ರಹಮತ್ ತರೀಕೆರೆ

### ನಾವು ಸೋತಿದ್ದೇವೆ..

'ಬಸವಣ್ಣನವರು ಹಾಕಿಕೊಟ್ಟ ವಿಚಾರಗಳನ್ನು ಜಾರಿಗೆ ತರುವಲ್ಲಿ ನಾವೆಲ್ಲ ಸೋತಿದ್ದೇವೆ'

- ನಟರಾಜ್ ಬೂದಾಳು

### ಬಹುತ್ವದ ಸಂಕೇತ..

'ಬಸವಣ್ಣ ಬಹುತ್ವದ ಸಂಕೇತ. ಈ ದೇಶದಲ್ಲಿ ಎಲ್ಲ ಧರ್ಮ, ಭಾಷೆಗಳಿವೆ. ಇವೆಲ್ಲವನ್ನು ಒಳಗೊಳ್ಳುವಂಥದ್ದೇ ಬಸವಣ್ಣ'

- ಎಸ್.ಜಿ.ಸಿದ್ದರಾಮಯ್ಯ

# ಮೇಕೆದಾಟು : ಡಿಎಂಕೆ ಸರ್ಕಾರಕ್ಕೆ ಎಐಎಡಿಎಂಕೆ ತರಾಟೆ

ಚೆನ್ನೈ, ಫೆ. 17 - ಮೇಕೆದಾಟು ಜಲಾಶಯ ನಿರ್ಮಾಣಕ್ಕೆ ಹಸಿರು ನಿಶಾನೆ ತೋರುವ ಕರ್ನಾಟಕದ ನಿರ್ಧಾರಕ್ಕೆ ಆಕ್ಷೇಪಿಸಿರುವ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಪಳನಿಸ್ವಾಮಿ, ಈ ಬಗ್ಗೆ ತಮಿಳುನಾಡಿನ ಡಿಎಂಕೆ ಸರ್ಕಾರ ಮೌನವಾಗಿದೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಮೇಕೆದಾಟಿನಲ್ಲಿ ಜಲಾಶಯ ನಿರ್ಮಿಸುವ ಮೂಲಕ ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕರ್ನಾಟಕ ಸರ್ಕಾರ ಮುಂದಾಗಿದೆ. ಆದರೆ, ಈ ಯೋಜನೆಯನ್ನು ತಮಿಳುನಾಡು ವಿರೋಧಿಸುತ್ತಿದೆ. ಕಾಂಗ್ರೆಸ್ ಜೊತೆ ಮೈತ್ರಿ ಹೊಂದಿರುವ ಡಿಎಂಕೆ ಪಕ್ಷವು ತಮಿಳುನಾಡು ಹಿತದ ವಿರುದ್ಧವಿದೆ ಎಂದು ಪಳನಿಸ್ವಾಮಿ ಆರೋಪಿಸಿದ್ದಾರೆ.

ಇತ್ತೀಚೆಗೆ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ ಸಭೆ ನಡೆದಾಗ ಮೇಕೆದಾಟು ವಿಷಯ ಪ್ರಸ್ತಾಪವಾಗಿತ್ತು. ಇದರ ವಿರುದ್ಧ ತಮಿಳುನಾಡು ಸಭೆಗೆ ಬಹಿಷ್ಕಾರ ಹಾಕಲಿಲ್ಲ. ಈಗ ಕರ್ನಾಟಕ ಸರ್ಕಾರ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಿದೆ ಎಂದವರು ಹೇಳಿದ್ದಾರೆ.

# 'ವಿನೂತನ ಸ್ತ್ರೀ ಸೂಪರ್ ಜೋಡಿಗಳು' ಕಾರ್ಯಕ್ರಮ

ದಾವಣಗೆರೆ, ಫೆ. 17- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ವಿನೂತನ ಮಹಿಳಾ ಸಮಾಜದ ವತಿಯಿಂದ 'ವಿನೂತನ ಸ್ತ್ರೀ ಸೂಪರ್ ಜೋಡಿಗಳು' ಎಂಬ ಸ್ಪರ್ಧೆ ಯನ್ನು ಹಮ್ಮಿಕೊಂಡಿದ್ದೇವೆ. 50 ವರ್ಷದ ಒಳಗಿನವರಿಗೆ ಹಾಗೂ 50 ವರ್ಷದ ಮೇಲ್ಪಟ್ಟವರಿಗೆ ಎಂದು ಎರಡು ಭಾಗವಾಗಿ ತಂಡ ವಿಭಜಿಸಲಾಗಿದೆ. ಬರುವ ಮಾರ್ಚ್ 12 ರಂದು ಮಂಗಳವಾರ ಬೆಳಿಗ್ಗೆ 11 ಗಂಟೆಗೆ ವಿನಾಯಕ ದೇವಸ್ಥಾನದ ಆವರಣ ದಲ್ಲಿ ಈ ಸ್ಪರ್ಧೆ ನಡೆಯಲಿದೆ. ವಿವರಕ್ಕೆ 96638 23664, 9886177445ಕ್ಕೆ ಸಂಪರ್ಕಿಸಬಹುದಾಗಿದೆ ಎಂದು ವಿನೂತನ ಮಹಿಳಾ ಸಮಾಜದ ಅಧ್ಯಕ್ಷರಾದ ರೇಖಾ ಓಂಕಾರಪ್ಪ ತಿಳಿಸಿದ್ದಾರೆ.

# ಪಂಚಾಯ್ತಿಗಳು ಬಜೆಟ್ ರೂಪಿಸಲು ಆದೇಶ

(1ನೇ ಪುಟದಿಂದ) ಎಲ್ಲವನ್ನೂ ಕ್ರೋಢಿಕರಿಸಿ ಬಜೆಟ್ ಸಿದ್ಧಪಡಿಸಿ ಎಂದು ಹೇಳಿದ್ದಾರೆ.

ಕೆಲವು ಪಂಚಾಯ್ತಿಗಳಲ್ಲಿ ಆರ್ಥಿಕ ಶಿಸ್ತು ಇಲ್ಲದಿರುವುದು ಲೆಕ್ಕ ಪರಿಶೋಧನಾ ವರದಿಗಳಿಂದ ತಿಳಿದುಬಂದಿದೆ. ಅಧಿಕಾರ ವಿಕೇಂದ್ರೀಕರಣ ದೃಷ್ಟಿಯಿಂದ ಮೂರು ಹಂತದ ಆಡಳಿತವನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದ್ದರೂ, ನೀವು ಆರ್ಥಿಕ ಶಿಸ್ತಿನಲ್ಲಿ ಎಡವುತ್ತಿದ್ದೀರಿ. ಸ್ಥಳೀಯ ಅಭಿವೃದ್ಧಿ ಸೇರಿದಂತೆ ಯಾವುದೇ ಆಡಳಿತಾತ್ಮಕ ವಿಷಯಗಳು ನಿಮ್ಮ ಗಮನಕ್ಕೆ ಮತ್ತು ಅನುಮೋದನೆಗೆ ಬರುತ್ತವೆ. ವಾರ್ಷಿಕ ಅನುದಾನದಲ್ಲಿ ನೀವು ಮುಂದೇನು ಮಾಡುತ್ತೀರಿ ಎಂಬ ಪಕ್ಷಿ ನೋಟ ನಿಮ್ಮ ಪಂಚಾಯತ್ ವ್ಯಾಪ್ತಿಯ ಜನರಿಗೂ ಮತ್ತು ಇಲಾಖೆಗೂ ತಿಳಿಯಬೇಕಿದೆ.

ಗುರಿಯಿಟ್ಟುಕೊಂಡು ಸಂಪನ್ಮೂಲವನ್ನು ಕ್ರೋಢೀಕರಿಸಿ ಮತ್ತು ಅದಕ್ಕೆ ತಕ್ಕಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡು ಹಣ ವೆಚ್ಚ ಮಾಡಿ ಎಂದು ಸಚಿವರು ಹೇಳಿದ್ದಾರೆ.

ಮುಂದಿನ ಆರ್ಥಿಕ ವರ್ಷದಲ್ಲಿ ವಿವಿಧ ಬಾಬ್ತುಗಳಡಿ ಲಭ್ಯವಾಗುವ ಅನುದಾನ ಹಾಗೂ ಕೈಗೊಳ್ಳಬೇಕಾದ ಅಭಿವೃದ್ಧಿ ಯೋಜನೆ ಒಳಗೊಂಡಂತೆ ಗ್ರಾಮ ಪಂಚಾಯ್ತಿ ಆಯವ್ಯಯ (ಪಂಚಾಯ್ತಿ ಬಜೆಟ್)ವನ್ನು ಕಡ್ಡಾಯವಾಗಿ ತಯಾರಿಸಿ ಮಾರ್ಚ್ 10ರೊಳಗೆ ಗ್ರಾಮ ಪಂಚಾಯ್ತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳಬೇಕು, ಪಂಚಾಯ್ತಿಗಳು ಬಜೆಟ್ ಮಂಡಿಸುವುದು ಕಡ್ಡಾಯವಾಗಿರುತ್ತದೆ. ಗ್ರಾಮ ಪಂಚಾಯ್ತಿಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ನೀಡುವ ಶಾಸನಬದ್ಧ ಅನುದಾನ, ವಿವಿಧ ಯೋಜನೆಗಳಡಿ ದೊರೆಯುವ ಅನುದಾನದ ಜೊತೆಗೆ ಸ್ವಂತ ಸಂಪನ್ಮೂಲ ಸಂಗ್ರಹಿಸಲು ಅವಕಾಶವಿರುವುದ ರಿಂದ ಎಲ್ಲ ಮೂಲಗಳನ್ನು ಕ್ರೋಢಿಕರಿಸಿ ಗ್ರಾಮ ಪಂಚಾಯ್ತಿ ಸಭೆಯಲ್ಲಿ ಅನುಮೋದನೆ ಪಡೆದು ತಾಲ್ಲೂಕು ಪಂಚಾಯ್ತಿಗೆ ಕಳುಹಿಸಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

# ಯಾರೂ ಮೇಲಲ್ಲ, ಕೀಳಲ್ಲ ಎನ್ನುವಂತೆ ರಚನೆಯಾದ ಸಂವಿಧಾನ



### ಸಂವಿಧಾನ ಜಾಗೃತಿ ಜಾಥಾದಲ್ಲಿ ಹರಪನಹಳ್ಳಿ ತಾಲ್ಲೂಕು ಪಂಚಾಯಿತಿ ಸಹಾಯಕ ಲೆಕ್ಕಾಧಿಕಾರಿ ವಿಜಯಕುಮಾರ್

ಹರಪನಹಳ್ಳಿ, ಫೆ.17- ಭಾರತ ಇಡೀ ಪ್ರಪಂಚದಲ್ಲಿ ಬೃಹತ್ ಸಂವಿಧಾನ ಹೊಂದಿರುವ ರಾಷ್ಟ್ರ ಎಂದು ತಾಲ್ಲೂಕು ಪಂಚಾಯಿತಿ ಸಹಾಯಕ ಲೆಕ್ಕಾಧಿಕಾರಿ ವಿಜಯಕುಮಾರ್ ಹೇಳಿದರು.

ತಾಲ್ಲೂಕಿನ ಹಿರೇಮೇಗಳಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿರೇಮೇಗಳಗೆರೆ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ವಿವಿಧ ಸಂಘ - ಸಂಸ್ಥೆಗಳ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಂವಿಧಾನ ಜಾಗೃತಿ ಜಾಥಾದ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಇಡೀ ವಿಜಯನಗರ ಜಿಲ್ಲೆಯಾದ್ಯಂತ ಈ ಸಂವಿಧಾನ ಜಾಗೃತಿ ಜಾಥಾದ ವಾಹನ ಸಂಚರಿಸಲಿದ್ದು, ಹರಪನಹಳ್ಳಿ ತಾಲ್ಲೂಕಿಗೆ ಇದೇ ಫೆ.12ಕ್ಕೆ ಆಗಮಿಸಿದೆ. ಹರಪನಹಳ್ಳಿಯ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಅದ್ಧೂರಿಯಾಗಿ ಜಾಗೃತಿ ಜಾಥಾ ಕಾರ್ಯಕ್ರಮ ನಡೆದಿದೆ. ಅದೇ ರೀತಿ ಹಿರೇಮೇಗಳಗೆರೆ ಗ್ರಾಮದಲ್ಲೂ ಬಹಳ ಅರ್ಥಪೂರ್ಣವಾಗಿ, ಜನ ಹಾಗೂ ಮನಗಳಿಗೆ ಸಂದೇಶ ಮುಟ್ಟುವಂತೆ ಸಂವಿಧಾನ ಮಹತ್ವ ಸಾರಲು ನಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೂ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವು ಈ ದೇಶದಲ್ಲಿರುವ ಪ್ರತಿಯೊಬ್ಬ ಪ್ರಜೆಗೂ ಒಂದೇ ನ್ಯಾಯ, ನೀತಿ ಎನ್ನುವಂತೆ ರಚಿಸಿದ್ದಾರೆ. ಇಲ್ಲಿ ಯಾರೂ ಮೇಲಲ್ಲ, ಕೀಳಲ್ಲ ಎನ್ನುವ ಭಾವನೆ, ಬದುಕು, ಜೀವನ ಎನ್ನುವಂತೆ ಅವರು ರಚಿಸಿದ ಸಂವಿಧಾನದ ಆಶಯದಲ್ಲಿ ನಾವು ಕಾಣಬಹುದು. ಸಂವಿಧಾನವನ್ನೂ ಪ್ರತಿಯೊಬ್ಬರೂ ಓದಿಕೊಳ್ಳಬೇಕು. ಈ ನೆಲದ ಕಾನೂನು - ಕಟ್ಟಳೆಗಳನ್ನು ಪಾಲಿಸಿ ಗೌರವಿಸಬೇಕು. ಯಾರೂ ಕೂಡ ಜಾತಿಭೇದ, ಲಿಂಗಭೇದವನ್ನು ಮಾಡಬಾರದು. ಇದು ಸರಿಯಲ್ಲ. ಆ ಕಾರಣಕ್ಕಾಗಿ ನಮ್ಮ ಸಂವಿಧಾನದಲ್ಲಿ ನಾನಾ ಕಠಿಣ ಕಾನೂನುಗಳು ಹಾಗೂ ದಂಡನೆಗೆ ಕಾಯ್ದೆಗಳೂ ಇವೆ. ಆದ್ದರಿಂದ ಎಲ್ಲರೂ ಸುಂದರ ಬದುಕು ಕಟ್ಟಿಕೊಳ್ಳಬೇಕು ಎಂದರು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ರೇಣುಕಾದೇವಿ ಮಾತನಾಡಿ, ಈ ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನ ಇದ್ದ ವ್ಯವಸ್ಥೆಯಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ಧಾರ್ಮಿಕ ಸೇರಿ ವಿವಿಧ ಕ್ಷೇತ್ರಗಳಲ್ಲಿ ನಾನಾ ತೊಡುಕುಗಳು ಇದ್ದವು. ಆದರೆ, ಸ್ವಾತಂತ್ರ್ಯ ಬಂದ ನಂತರ ಸಾಕಷ್ಟು ವಿಷಯಗಳು ಸುಧಾರಿಸಿವೆ. ಜನರು ಕೂಡ ಅದ್ಭುತ ಬದುಕುಗಳನ್ನು ನಿರ್ಮಿಸಿಕೊಂಡಿದ್ದಾರೆ. ಡಾ. ಬಿ. ಆರ್. ಅಂಬೇಡ್ಕರ್ ಅವರು ಹಲವು ದೇಶಗಳನ್ನು ಸುತ್ತಿ, ಅಲ್ಲಿನ ಸಂವಿಧಾನಗಳನ್ನು ಓದಿ, ಪರಿಶೀಲಿಸಿ ಈ ದೇಶಕ್ಕೆ ಅನುಗುಣವಾಗಿ ಸಂವಿಧಾನ ರಚಿಸಿದ್ದಾರೆ. ಈ ಹಿಂದೆ ದೇಶದಲ್ಲಿ ಯಾವ ಹೆಣ್ಣಿಗೆ ಗೌರವ ಸಿಗುತ್ತಿರಲಿಲ್ಲವೋ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಚಿಸಿದ ಇದೇ ಸಂವಿಧಾನದಡಿ ನಾನು ಕೂಡ ಹೆಣ್ಣಾಗಿ ಇಲ್ಲಿಯವರೆಗೂ ಬಂದು ನಿಂತಿದ್ದೇನೆ. ಇದೇ ಸಂವಿಧಾನಕ್ಕೆ ಇರುವ ಶಕ್ತಿ ಎಂದು ನುಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಪ್ರತಿಭಾ ಪರಶುರಾಮಪ್ಪ ಮಾತನಾಡಿ, ನಾನೂ ಕೂಡ ಒಬ್ಬ ತಳ ಸಮುದಾಯದ ಹೆಣ್ಣು ಮಗಳಾಗಿಯೂ ಅಧ್ಯಕ್ಷೆಯಾಗಿದ್ದೇನೆ ಎಂದರೆ ಸಂವಿಧಾನವೇ ಮೂಲ ಕಾರಣ. ಇಲ್ಲಿ ಎಲ್ಲರಿಗೂ ಅವಕಾಶಗಳು ಇವೆ. ಆದರೆ, ಸರ್ವರಿಗೂ ಸಮಬಾಳು - ಸಮಪಾಲು ಎನ್ನುವ ನೀತಿಯಂತೆ ಎಲ್ಲರನ್ನೂ ಮೇಲಕ್ಕೆತ್ತುವ ಆಶಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ರೇಖಾ ಕರಿಬಸಪ್ಪ, ಗ್ರಾ.ಪಂ.ನ ಎಲ್ಲಾ ಸದಸ್ಯರು, ಐಇಸಿ ಸಂಯೋಜಕ ಕೆ. ವಸಿಗೇರಪ್ಪ ಚಾಗನೂರು ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಗಾಂಧಿ ಕುಟುಂಬಕ್ಕೇ ರಾಯ್ ಬರೇಲಿ : ಅಜಯ್ ರಾಯ್

ವಾರಣಾಸಿ, ಫ. 17 - ಉತ್ತರ ಪ್ರದೇಶದ ರಾಯ್ ಬರೇಲಿ ಲೋಕಸಭಾ ಕ್ಷೇತ್ರ ಗಾಂಧಿ ಕುಟುಂಬದ ಬಳಿಯೇ ಇರಲಿದೆ ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಅಜಯ್ ರಾಯ್ ಹೇಳಿದ್ದಾರೆ. ರಾಯ್ ಬರೇಲಿ ಕ್ಷೇತ್ರವನ್ನು ಕಾಂಗ್ರೆಸ್ ಹಿರಿಯ ನಾಯಕಿ ಸೋನಿಯಾ ಗಾಂಧಿ ಪ್ರತಿನಿಧಿಸುತ್ತಿದ್ದರು. ಈ ಬಾರಿ ಅವರು ರಾಜ್ಯಸಭೆಗೆ ತೆರಳಲು ನಿರ್ಧರಿಸಿದ್ದಾರೆ.

ಈ ಬಗ್ಗೆ ಮಾಧ್ಯಮಗಳ ಜೊತೆ ಮಾತನಾಡಿದ ರಾಯ್, ಗಾಂಧಿ ಕುಟುಂಬದ ಜೊತೆ ರಾಯ್‌ಬರೇಲಿ ಹಲವು ಪೀಳಿಗೆಗಳ ಸಂಬಂಧ ಹೊಂದಿದೆ. ಈ ಕ್ಷೇತ್ರ ಗಾಂಧಿ ಕುಟುಂಬದ್ದಾಗಿದೆ ಹಾಗೂ ಗಾಂಧಿ ಕುಟುಂಬದ ಬಳಿಯೇ ಇರಲಿದೆ ಎಂದರು.

ಈ ಕ್ಷೇತ್ರದಿಂದ ಯಾರು ಸ್ಪರ್ಧಿಸಬೇಕು ಎಂಬುದನ್ನು ಗಾಂಧಿ ಕುಟುಂಬವೇ ನಿರ್ಧರಿಸಲಿದೆ ಎಂದು ರಾಯ್ ತಿಳಿಸಿದ್ದಾರೆ. ಈ ಕ್ಷೇತ್ರದಲ್ಲಿ ಸೋನಿಯಾ ಗಾಂಧಿ ಅವರ ಪುತ್ರಿ ಪ್ರಿಯಾಂಕ ಗಾಂಧಿ ಸ್ಪರ್ಧಿಸಲಿದ್ದಾರೆ ಎಂದು ಹೇಳಲಾಗುತ್ತಿದೆ.

# ಇಲಾಖೆ ಜನರ ನಿರೀಕ್ಷೆ ಹೆಚ್ಚಾಗಿದೆ

(1ನೇ ಪುಟದಿಂದ) ಕಲ್ಯಾಣಾಧಿಕಾರಿ ಡಾ.ಷಣ್ಮುಖಪ್ಪ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ರಾಘವನ್, ಜಿಲ್ಲಾ ಎನ್‌ವಿಬಿಡಿಸಿಪಿ ಅಧಿಕಾರಿ ಡಾ.ಗಂಗಾಧರ್, ಜಿಲ್ಲಾ ಕ್ಷಯ ರೋಗ ನಿವಾರ ಣಾಧಿಕಾರಿ ಡಾ.ಮುರುಳೀಧರ್, ಜಿಲ್ಲಾ ಕುಷ್ಠ ರೋಗ ನಿವಾರಣಾ ಧಿಕಾರಿ ಡಾ. ಮಂಜುನಾಥ್ ಎಲ್.ಪಾಟೀಲ್, ಆರ್‌ಸಿಹೆಚ್. ಅಧಿಕಾರಿ ಡಾ. ರೇಣುಕಾರಾಧ್ಯ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ರುದ್ರಸ್ವಾಮಿ, ಜಿಲ್ಲಾ ಐಇಸಿ ಅಧಿಕಾರಿ ಡಾ. ಸುರೇಶ್ ಬಾರ್ಕಿ, ಕಾರ್ಯಕ್ರಮ ಸಂಯೋಜಕರೂ ಆಗಿರುವ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ದೇವರಾಜ ಪಿ.ಪಟಗೆ ಉಪಸ್ಥಿತರಿದ್ದರು. ಡಾ.ಸುರೇಶ್ ಬಾರ್ಕಿ, ಹೆಚ್.ಉಮಾಪತಿ ನಿರೂಪಿಸಿದರು.


**ಖಾಲಿ ನಿವೇಶನದ ಕ್ರಯಪತ್ರ ಕಳೆದಿದೆ**

ದಾವಣಗೆರೆ ಸಿಟಿ ನಿಟ್ಟುವಳ್ಳಿ ಹೊಸ ಬಡಾವಣೆ ಕಾಲೇಜ್ ರಸ್ತೆ, 'ಶ್ರೀರಾಮ ನಿವಾಸ' ಡೋರ್ ನಂ. 556ರಲ್ಲಿ ವಾಸವಾಗಿರುವ 33 ವರ್ಷ ವಯಸ್ಸಿನ **ಶ್ರೀ ರಾಕೇಶ್ ಆರ್.ಎಸ್. ಬಿನ್ ಆರ್.ಎಸ್. ಶೇಖರಪ್ಪ** ಇವರ ಹೆಸರಿನಲ್ಲಿರುವ ದಿನಾಂಕ 30-03-2022ರಂದು ದಾವಣಗೆರೆ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ದಾಖಲಾಗಿರುವ ದಾವಣಗೆರೆ ತಾಲ್ಲೂಕು ಹಿರಿಯ ಉಪನೋಂದಣಾಧಿಕಾರಿಗಳವರ ಕಚೇರಿ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಪಾಮೇನಹಳ್ಳಿ ಗ್ರಾಮದ ರಿ.ಸರ್ವೆ ನಂ. : 43/4, ವಿಸ್ತೀರ್ಣ : 00-37 ಗುಂಟೆ ಮತ್ತು 42/3, ವಿಸ್ತೀರ್ಣ 00-35 ಗುಂಟೆ ಇರುವ ಸೈಟ್ ನಂ. 10, ಗ್ರಾಮ ಪಂಚಾಯಿತಿ ದಾಖಲೆಯ ಪ್ರಕಾರ ಸದರಿ ಸ್ವತ್ತಿನ ಸಂಖ್ಯೆ 150/10, ಅಳತೆ : 20×30, ಈ ಖಾಲಿ ನಿವೇಶನದ ಕ್ರಯಪತ್ರವು ದಿನಾಂಕ 20-01-2024ರಂದು ಬೆಳಿಗ್ಗೆ 10 ರಿಂದ 12 ಗಂಟೆ ಸಮಯದಲ್ಲಿ ದಾವಣಗೆರೆಯ ಸಾಯಿ ಗಾರ್ಮೆಂಟ್ಸ್ ಕಾಲೇಜ್ ರಸ್ತೆ, ನಿಟ್ಟುವಳ್ಳಿಯಲ್ಲಿ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್ ನಂಬರಿಗೆ ತಿಳಿಸಬೇಕಾಗಿ ವಿನಂತಿ.

**ಯಶೋಧ ಇ. ಮೊ.: 94488 20121**



**ಶ್ರೀ ಸಿದ್ದೇಶ್ವರ ಟೆಕ್ಸ್‌ಟೈಲ್ಸ್ ಎಂಪ್ಲಾಯೀಸ್ ಯೂನಿಯನ್ (ರಿ)**

ಮೇಲ್ಕಂಡ ಕೈಗಾರಿಕೆಯ ಕಾರ್ಮಿಕರಿಗೆ ತಿಳಿಯಪಡಿಸುವುದೇನೆಂದರೆ, ತಾವುಗಳು ಈ ಹಿಂದೆ ಗ್ರಾಚ್ಯೂಟಿ ಪಡೆದಿದ್ದು, ಗ್ರಾಚ್ಯೂಟಿ ಹಣಕ್ಕೆ ಬಡ್ಡಿ ಕೊಡುವ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ತಾವುಗಳು ಕಾರ್ಮಿಕರ ಆಯುಕ್ತರ ಕಛೇರಿ,ಬಿ.ಎಸ್.ಎನ್.ಎಲ್. ಕಟ್ಟಡದ ಎರಡನೇ ಮಹಡಿಯಲ್ಲಿರುವ ಕಛೇರಿಗೆ ಹೋಗಿ ಆಧಾರ್ ಕಾರ್ಡ್ ಜೆರಾಕ್ಸ್ ಮತ್ತು ತಮ್ಮ ಟಿ. ನಂಬರ್ ಕೊಟ್ಟು ಅರ್ಜಿ ನೋಂದಾವಣೆ ಮಾಡಿಕೊಳ್ಳಬೇಕಾಗಿ ಕೋರಿದೆ.

ಒಂದು ವೇಳೆ ಕಾರ್ಮಿಕನು ಮರಣ ಹೊಂದಿದಲ್ಲಿ ಇವರ ವಾರಸುದಾರರುಗಳಾದ ತಾವುಗಳು, ಮರಣ ಪ್ರಮಾಣ ಪತ್ರ ವಾರಸುದಾರರ ಆಧಾರ್ ಕಾರ್ಡ್ ಜೆರಾಕ್ಸ್, ಓಟರ್ ಐ.ಡಿ. ಜೆರಾಕ್ಸ್ ಮತ್ತು ವಂಶವೃಕ್ಷ ದಾಖಲೆಯನ್ನು ಕಾರ್ಮಿಕ ಆಯುಕ್ತರವರ ಕಛೇರಿಗೆ ಒದಗಿಸಿ ಅರ್ಜಿ ನೋಂದಾವಣೆ ಮಾಡಿಕೊಳ್ಳಬೇಕಾಗಿ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಭಾರತ ಕಮ್ಯೂನಿಸ್ಟ್ ಪಕ್ಷ, ಕಾಂ. ಪಂಪಾಪತಿ ಭವನ, ಅಶೋಕ ರಸ್ತೆ, ದಾವಣಗೆರೆ ಇಲ್ಲಿಗೆ ಬಂದು ಮಾಹಿತಿ ಪಡೆದುಕೊಳ್ಳಬೇಕಾಗಿ ವಿನಂತಿ.

**ಸಹಿ/- ಕಾಂ. ಆನಂದರಾಜ್, ಕಾರ್ಯದರ್ಶಿ**



**In the Court of the Hon'ble 1st Additional Senior Civil Jugde At Davangere.**

O.S. No. 249/2023

Plaintiffs : Smt. Renukamma and others -VS-
Defendants : Mallappa @ Sangajjara Mallappa and Others
Defendant No.11 Sri, Mallinath, S/o Andanuru Basappa,
Aged about 50 years, Business, R/o. # 20/1
P.J. Extanction, Akkamahadevi Road, Davangere city.

**COURT NOTICE U/O 5 RULE 20 CPC :**

Take Notice that the plaintiffs filed the above suit seeking an order of partition and separate possession of the suit schedule properties by meets and bounds. Take notice that the defendant no. 11 shall appear in person or through an advocate and say regarding the suit on 11.03.2024 before this honble court at 11.00 am, failing which the case against you will be heard and determined ex-parte.

Given under my hand and seal of the court this the 13th of February 2024.

Sd/- Advocate for plaintiffs
**Sri. D.P. Basavaraj**
Advocate
Davangere.

By the order of the court
Sd/- **Chief Ministerial Office (P) Civil Judge Senior Divison, Davanagere.**

## ಶ್ರೀಗಳ ಕಾರು ತಡೆದು ಆಕ್ರೋಶ

**(1ನೇ ಪುಟದಿಂದ)** ಕಾರ್ಯಕ್ರಮಕ್ಕೆ ರಂಭಾಪುರಿ ಶ್ರೀಗಳು ತೆರಳುತ್ತಿರುವಾಗ ಭಕ್ತರು ಮುತ್ತಿಗೆ ಹಾಕಿದರು. ತಳ್ಳಾಟ, ನೂಕಾಟ ಉಂಟಾಗಿ ಬಿಗುವಿನ ವಾತಾವರಣ ನಿರ್ಮಾಣ ವಾಯಿತು. ಆಗ ಮಧ್ಯೆ ಪ್ರವೇಶಿಸಿದ ಪೊಲೀಸರು ಶ್ರೀಗಳಿದ್ದ ವಾಹನ ಹೋಗಲು ಅನುವು ಮಾಡಿಕೊಟ್ಟರು. ಆಗ ಮಹಿಳೆಯೊಬ್ಬರು ಕಾರಿನತ್ತ ಚಪ್ಪಲಿ ಎಸೆದರು.


ಈ ಬಗ್ಗೆ ಪ್ರತಿಕ್ರಿಯಿಸಿ ರುವ ರಂಭಾಪುರಿ ಶ್ರೀಗಳು, ಅಭಿವೃದ್ಧಿ ಮಾಡಿದರೆ ಕೇಡೇನಲ್ಲ. ಧಾರ್ಮಿಕ ಸಂಸ್ಕೃತಿ ಕೆಡಿಸುವವರು ಎಲ್ಲೆಡೆ ಇರುತ್ತಾರೆ. ಅದಕ್ಕೆ ಆಸ್ಪದ ಕೊಡಬಾರದು. ಗುರುಲಿಂಗೇಶ್ವರ ಸಂಸ್ಥಾನ ಮಠವು ರಂಭಾಪುರಿ ಮಠದ ಶಾಖಾ ಪೀಠ ಆಗಿರುವ ಕಾರಣ, ಪೀಠದ ಜಗದ್ಗುರು ನಿರ್ಣಯವೇ ಅಂತಿಮ ಎಂದು ಹೇಳಿದ್ದಾರೆ.

## ಅಪ್ರೆಂಟಿಸ್ ಮೇಳ ; 19ಕ್ಕೆ ಮುಂದೂಡಿಕೆ

ಹರಿಹರ, ಫೆ.17- ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಡಿಪ್ಲೋಮಾ, ಐಟಿಐ ಪಾಸಾದವರಿಗೆ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ರಾಷ್ಟ್ರೀಯ ಅಪ್ರೆಂಟಿಸ್ ಮೇಳವನ್ನು ಇದೇ ದಿನಾಂಕ 19ಕ್ಕೆ ಮುಂದೂಡಲಾಗಿದೆ. ಈ ಶಿಶಿಕ್ಷು ಮೇಳದಲ್ಲಿ ಜಿಲ್ಲೆಯ ಐ.ಟಿ.ಐ, ಡಿಪ್ಲೋಮಾ ಪಾಸ್ ಆದ ನಿರುದ್ಯೋಗಿ ಯುವಕ, ಯುವತಿಯರು ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳು ಸಹ ಭಾಗವಹಿಸಬಹುದು. ಸಂಪರ್ಕಿಸಿ : ಮೊ. 9480085001, 99450 49894, 9743104863.

## ಪದವಾಣಿ-97

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**

| | | |
|---|---|---|
| 1) | ಕೆಲಸಕ್ಕೆ ಬಾರದವನು | 5 |
| 3) | ಪತಿಯ ಮನೆಯ ಸಂಪ್ರದಾಯ | 3 |
| 4) | ದೇವಕುಸುಮ ಎನ್ನಲಾಗುವ ಸಂಬಾರ ಪದಾರ್ಥ | 3 |
| 6) | ಅಂದಾಜು ಹೀಗಾಗಿದೆ | 4 |
| 8) | ಓಟು ಹಾಕುವುದು | 4 |
| 9) | ನಾಲ್ಕಕ್ಷರದ ಚೆಲುವೆ | 4 |
| 11) | ಅಡುಗೆ ಮನೆ | 4 |
| 14) | ಚಟ್ನಿಗೆ ಬಳಸುವ ಸುವಾಸನೆಯ ಸೊಪ್ಪು | 3 |
| 15) | ಈತ ದೇವಕಿಯ ತಂದೆ | 3 |
| 16) | ಭಾವನಿಗೆ ಕಂಡ ಮಹಾವ್ಯಕ್ತಿ | 5 |

**ಮೇಲಿನಿಂದ ಕೆಳಕ್ಕೆ :**

| | | |
|---|---|---|
| 1) | ರಸವನ್ನು ಹೊಂದಿರುವ ಭಕ್ಷ್ಯ | 4 |
| 2) | ವೇಷಧಾರಿಯಾಗಿ ಹಣ ಸಂಪಾದಿಸುವವ | 4 |
| 3) | ಒಂದು ಬಗೆಯ ಆಯುಧ | 3 |
| 5) | ಘನವಾಗಿರುವ ಆಕಾಶ | 3 |
| 7) | ಹೇಗೆ ನೋಡಿದರೂ ಇದು ದುರಸ್ತಿ | 3 |
| 8) | ಮರದ ನಡುವೆ ಸಿಹಿಯಿದೆ | 3 |
| 9) | ಇದು ಸುಡುಮದ್ದು | 3 |
| 10) | ವಿಷ್ಣುವಿನ ಹೆಸರು | 4 |
| 12) | ನಕುಲನ ಜೊತೆ ಹುಟ್ಟಿದವ | 4 |
| 13) | ಲಕ ಲಕ ಹೊಳೆಯುತ್ತಿರುವ ಬೊಟ್ಟು | 3 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 96ರ ಉತ್ತರಗಳು :**

ಎಡದಿಂದ ಬಲಕ್ಕೆ : 1) ಸರದಾರ 3) ನಗು 4) ಪಾದಾರವಿಂದ 6) ತಮ 8) ಅವನಿ 10) ವಿಧು 12) ಸುಪರ್ಣಕೇತು 14) ಪತ್ರ 15) ಗಡಿಯಾರ.

ಮೇಲಿನಿಂದ ಕೆಳಕ್ಕೆ : 1)ಸಮುಚಿತ 2) ರಮಪಾ (ಪಾಮರ) 3) ನಳಂದ 5) ರಜನಿ 7) ಮರಿ 8) ಅಪರ್ಣ 9) ರವಿ 11) ದುರಂಧರ 12) ಸುಮಿತ್ರ 13) ತುರಂಗ.

# ಪ್ರತಿ ಜಿಲ್ಲೆಯಲ್ಲೂ ಬಸವ ಭವನ ನಿರ್ಮಿಸಿ

**(1ನೇ ಪುಟದಿಂದ)** ಗುರಿಯಾಗುವುದಿಲ್ಲ ಎಂದವರು ಅಭಿಪ್ರಾಯಪಟ್ಟರು.

ದಾವಣಗೆರೆ ವಿ.ವಿ. ಉಪನ್ಯಾಸಕ ಹೆಚ್. ವಿಶ್ವನಾಥ್ ಮಾತನಾಡಿ, ವಚನಕಾರರಿಗೆ ಮುಂಚೆ ಸಾಹಿತ್ಯ ಕೇವಲ ರಾಜಾಶ್ರಯಕ್ಕೆ ಹಾಗೂ ಪಂಡಿತರಿಗೆ ಸೀಮಿತವಾಗಿತ್ತು. ಶರಣರು ಸಾಹಿತ್ಯವನ್ನು ಜನ ಸಾಮಾನ್ಯರಿಗೆ ತಲುಪಿಸಿದರು ಎಂದು ಹೇಳಿದರು.

ಬಸವಣ್ಣ ಅನುಭವ ಮಂಟಪ, ಕಾಯಕ ಮಂಟಪ ಹಾಗೂ ದಾಸೋಹ ಮಂಟಪಗಳು ಎಂಬ ಮೂರು ಮಂಟಪಗಳನ್ನು ರೂಪಿಸಿದರು. ಅಲ್ಲಿ ತಳ ಸಮುದಾಯದ ಎಲ್ಲರೂ ಒಂದೇ ಸೂರಿನಡಿ ಬರಲು ಸಾಧ್ಯವಾಯಿತು. ಇದರಿಂದ ಮೊದಲ ಬಾರಿಗೆ ಸಮಾನತೆ ಹಾಗೂ ಸಮ ಸಮಾಜ ಸಾಧ್ಯವಾಯಿತು ಎಂದವರು ತಿಳಿಸಿದರು.

ಮುರುಘಾ ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ವೇದಿಕೆಯ ಮೇಲೆ ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿ.ಪಂ. ಸಿಇಒ ಸುರೇಶ್ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಸೈಯಿದಾ ಅಫ್ರೀನ್ ಬಾನು, ತಹಶೀಲ್ದಾರ್ ಅಶ್ವತ್ಥ್, ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಬಿ. ವಾಮದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಮುಖಂಡರಾದ ದೇವರಮನಿ ಶಿವಕುಮಾರ್, ಮಹಾಂತೇಶ್ ಅಗಡಿ, ಶಶಿಧರ ಬಸಾಪುರ, ರುದ್ರಗೌಡ, ಆವರಗೆರೆ ರುದ್ರಮುನಿ, ಶುಭಾ ಐನಹಳ್ಳಿ, ಪಿ.ಡಿ. ರಮೇಶ್, ರುದ್ರಗೌಡ್ರು ಮತ್ತಿತರರು ಉಪಸ್ಥಿತರಿದ್ದರು.

### ಪೌರ ಕಾರ್ಮಿಕರನ್ನು ರಕ್ಷಿಸಬೇಕು

ಪೌರ ಕಾರ್ಮಿಕರಿಗೆ ಕೆಲವರು ಅನ್ಯಾಯ ಮಾಡುತ್ತಿದ್ದಾರೆ. ಪೌರ ಕಾರ್ಮಿಕರಾಗಿ ಶ್ರಮಿಸುತ್ತಿರುವ ದಲಿತ ಮಹಿಳೆಯರು 10-15 ಸಾವಿರ ರೂ. ದುಡಿದರೂ ಒಂದು ಪೈಸೆ ಮನೆಗೆ ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

ಈ ವಿಷಯದ ಬಗ್ಗೆ ವಿಧಾನಸಭೆಯಲ್ಲೂ ಪ್ರಸ್ತಾಪಿಸಿದ್ದೇನೆ. ಅಧಿಕಾರಿಗಳು ಹಾಗೂ ಪೊಲೀಸರು ಪೌರ ಕಾರ್ಮಿಕರ ರಕ್ಷಣೆ ಮಾಡುವ ಹೊಣೆ ನಿರ್ವಹಿಸಬೇಕು. ಸುಲಿಗೆಕೋರರಿಂದ ರಕ್ಷಿಸಬೇಕು ಎಂದು ಶಾಸಕರು ಒತ್ತಾಯಿಸಿದರು.

# ಕೊನೆ ಭಾಗಕ್ಕೆ ನೀರು ತಲುಪಿಸಲು ಬಿಗಿ ಕ್ರಮ: ಡಿಸಿ



**(1ನೇ ಪುಟದಿಂದ)** ಅನಧಿಕೃತವಾಗಿ ಪಂಪ್ ಅಳವಡಿಕೆ ಮಾಡಿದ್ದಾರೋ, ಅದನ್ನು ತೆರವು ಮಾಡುವರು ಮತ್ತು ರೈತರೇ ತೆರವು ಮಾಡದಿದ್ದಲ್ಲಿ ಪರಿಕರಗಳನ್ನು ಸರ್ಕಾರದ ವಶಕ್ಕೆ ಪಡೆದು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಎಂದರು.

ನಾಲೆಗೆ ನೀರು ಬಿಡಲಾಗಿದ್ದು ಅದರಲ್ಲಿ 10 ಅಡಿ ಮಾತ್ರ ನೀರು ಬರುತ್ತಿದೆ. ಇದು 13 ಅಡಿವರೆಗೆ ಏರಿಕೆಯಾದಲ್ಲಿ ಮಾತ್ರ ಕೊನೆ ಭಾಗದ ರೈತರಿಗೆ ತಲುಪಲು ಸಾಧ್ಯವಿದ್ದು ಅಗತ್ಯವಿದ್ದಲ್ಲಿ, 144ನೇ ಸೆಕ್ಷನ್ ಜಾರಿಗೊಳಿಸಲಾಗುತ್ತದೆ. ಬೆಸ್ಕಾಂ ವಿಜಿಲೆನ್ಸ್ ತಂಡದವರು ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದಿದ್ದಲ್ಲಿ ಕಡಿತಗೊಳಿಸಲು ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಇಟ್ನಾಳ್ ಮಾತನಾಡಿ, ಶಾಂತಿ ಸಾಗರದಲ್ಲಿ ಜಿಲ್ಲೆಯ ಚನ್ನಗಿರಿ, ಬಹುಗ್ರಾಮಗಳು ಸೇರಿದಂತೆ ಚಿತ್ರದುರ್ಗ ಜಿಲ್ಲೆಗೆ ನೀರು ಪೂರೈಸಲಾಗುತ್ತದೆ. ಆದರೆ ಶಾಂತಿಸಾಗರದಲ್ಲಿ ನೀರಿನ ಸಂಗ್ರಹ ಕಡಿಮೆ ಇದೆ. ನಾಲೆಯಿಂದ ನೀರು ಬಿಡುಗಡೆ ಮಾಡಿದಲ್ಲಿ ಬೇಸಿಗೆಗೆ ನೀರು ಪೂರೈಸಲು ಸಾಧ್ಯವಾಗಲಿದೆ. ಮತ್ತು ರಾಜನಹಳ್ಳಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ನಿರಂತರ ವಿದ್ಯುತ್ ಪೂರೈಕೆ ಮಾಡಬೇಕೆಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸೈಯಿದಾ ಆಫ್ರಿನ್ ಭಾನು ಎಸ್.ಬಳ್ಳಾರಿ, ಬಿ.ಆರ್.ಪ್ರಾಜೆಕ್ಟ್ ಅಧೀಕ್ಷಕ ಇಂಜಿನಿಯರ್ ಸುಜಾತ, ಉಪವಿಭಾಗಾಧಿಕಾರಿ ದುರ್ಗಶ್ರೀ, ಭದ್ರಾ ನಾಲಾ.ನಂ.5 ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್ ಆರ್.ಬಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.


**ಸೈಟು ಮಾರಾಟಕ್ಕಿದೆ**
ಕುಂದುವಾಡದ ತುಂಗಭದ್ರಾ ಬಡಾವಣೆಯಲ್ಲಿ ಉತ್ತರ ಮುಖವುಳ್ಳ 20×30 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಆಸಕ್ತಿಯುಳ್ಳವರು ಮಾತ್ರ ಸಂಪರ್ಕಿಸಿ :
97416 84666, 82177 98233

ಕರ್ನಾಟಕ ಹೌಸಿಂಗ್ ಬೋರ್ಡ್ (KHB)
**ಸೈಟ್ ಮಾರಾಟಕ್ಕೆ ಕಮರ್ಷಿಯಲ್**
1) 40X60 ಉತ್ತರ 120 ಅಡಿ ರಸ್ತೆಗೆ (85 ಲಕ್ಷ)
2) 30x40, 30x50 ಬನ್ನಿಕೋಡ್ 60 ಅಡಿ ರಸ್ತೆಗೆ (40 ಲಕ್ಷ) (45 ಲಕ್ಷ)
3) 40x40 (55 ಲಕ್ಷ) ದಕ್ಷಿಣ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆ ಡಬಲ್ ರೋಡ್‌ಗೆ
ಕಿರಣ್ ಬೂಸ್ನೂರ್ : 98440 63409
ರಿಜಿಸ್ಟರ್ ಖರ್ಚು+ಕಮೀಷನ್ ಸೇರಿ

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಲೇಔಟ್ 30x40 (ಪಶ್ಚಿಮ) 40 ಅಡಿ ರಸ್ತೆ ನೂತನ ಕಾಲೇಜು ಹಿಂಭಾಗ (LIC) ಕಾಲೋನಿ 25x40 (ಪಶ್ಚಿಮ) ವಿವೇಕಾನಂದ ಬಡಾವಣೆ 30x50 ಪಶ್ಚಿಮ. ಭೂಮಿಕಾ ನಗರ 30x40 (ಪೂರ್ವ) ಸರಸ್ವತಿ ನಗರ 45x50 (ಪಶ್ಚಿಮ-ದಕ್ಷಿಣ) ಕಾರ್ನರ್
95385 65909

**ಸೈಟ್ ಮಾರಾಟಕ್ಕಿದೆ**
KHB ಲೇಔಟ್, ದಾವಣಗೆರೆಯಲ್ಲಿ 50x80 ಪಶ್ಚಿಮ, ಈ ಸೈಟಿನ ಲೊಕೇಶನ್ ಬನ್ನಿಕೋಡ್ ರೋಡ್ ಗೆ ತುಂಬಾ ಸಮೀಪವಿದ್ದು, ಮನೆ ಕಟ್ಟಲು ಅಥವಾ ಇನ್ವೆಸ್ಟ್‌ಮೆಂಟ್‌ಗೆ ತುಂಬಾ ಅನುಕೂಲಕರವಾಗಿದೆ. ಸೈಟ್ ಓನರ್ ಗೆ ಸಂಪರ್ಕಿಸಿ
63621 81509

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**Property Hub**
• EC
• Eswathu
• Building Licence
• Khatha Change
96118 66449

**ಮಳಿಗೆ ಮಾರಾಟಕ್ಕೆ ಇವೆ**
400 ಅಡಿವುಳ್ಳ ಡುಪ್ಲೆಕ್ಸ್ ಪೂರ್ವ ಮಳಿಗೆ ಮಾರಾಟಕ್ಕೆ, AVK ಕಾಲೇಜ್ ರೋಡ್, 22x30 ಮಳಿಗೆ ಬಾಡಿಗೆಗೆ ಇದೆ. ಉತ್ತರ, AVK ಕಾಲೇಜ್ ರೋಡ್, 22x80 ಮಂಡಿಪೇಟೆಯಲ್ಲಿ ಮಳಿಗೆ ಬಾಡಿಗೆಗೆ ಇದೆ.
ಏಜೆಂಟರು S. ಯಲ್ಲೋಜಿರಾವ್
97418 11694

**ಹೊಸ ಮನೆ ಲೀಸ್‌ಗೆ ಇದೆ**
ಮೊದಲನೇ ಮಹಡಿಯಲ್ಲಿ (First Floor) 3BHK ಹೊಸ ಮನೆ ವಾಸ್ತು ಪ್ರಕಾರ ಇರುವ (North Face) ಕಾರ್ ಪಾರ್ಕಿಂಗ್ ಇರುವ ಮನೆ ಸರಸ್ವತಿ ನಗರದಲ್ಲಿ ಲೀಸ್‌ಗೆ ಇದೆ.
(Veg Only)
95385 65909

**ಮನೆ ಲೀಜ್‌ಗೆ ಇದೆ**
ನಿಟ್ಟುವಳ್ಳಿ ಮುಖ್ಯರಸ್ತೆ, ಲೇಬರ್ ಕಾಲೋನಿ 2ನೇ ಕ್ರಾಸ್‌ನಲ್ಲಿ 2ನೇ ಮಹಡಿಯಲ್ಲಿ ಉತ್ತರ ದಿಕ್ಕಿನ ಎರಡು ಬೆಡ್ ರೂಂನ ಮನೆ ಲೀಜ್‌ಗೆ ಇದೆ.
78996 81386, 9986617483

**ಮನೆ ಮತ್ತು ಸೈಟುಗಳು ಮಾರಾಟಕ್ಕೆ ಇವೆ**
37x90 ಪಶ್ಚಿಮ ಹೈಟೆಕ್ ಆಸ್ಪತ್ರೆ ರೋಡ್, 30x52 ಡಾಲರ್ಸ್ ಕಾಲೋನಿ ಉತ್ತರ ಇವೆ. ಮಹಾಲಕ್ಷ್ಮಿ ಲೇಔಟ್ 30x50 ಉತ್ತರ-ಪೂರ್ವ ಕಾರ್ನರ್.
S. ಯಲ್ಲೋಜಿರಾವ್
97418 11694

**ಮನೆ ಬಾಡಿಗೆಗೆ ಇದೆ**
(ಸಸ್ಯಹಾರಿಗಳಿಗೆ ಮಾತ್ರ)
2BHK ಗ್ರೌಂಡ್ ಫ್ಲೋರ್ (ಸಿಂಗಲ್ ಹೌಸ್) ವಾಸ್ತು ಪ್ರಕಾರ ಸುಸಜ್ಜಿತವಾದ ಮನೆಯು ಬಾಡಿಗೆಗಿದೆ (ಹೊಸ KSRTC ಬಸ್ ಸ್ಟ್ಯಾಂಡ್ ಹಿಂಭಾಗ) 921/9, KHB ಕಾಲೋನಿ, 9ನೇ ಕ್ರಾಸ್ (ಲೇಬರ್ ಕ್ವಾಟರ್ಸ್) (ತ್ರಿಶೂಲ್ ಸ್ಕೂಲ್ ರಸ್ತೆ) ದಾವಣಗೆರೆ - 577002.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ಸಂಪರ್ಕಿಸಿ 98440 72635

**ಸೈಟು & ಮನೆ ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ ಮನೆ (30x50) ಪಶ್ಚಿಮ
2) ಡಾಲರ್ಸ್ ಕಾಲೋನಿ ಸೈಟ್ (40x51) ಪಶ್ಚಿಮ
3) ಹಳೇ ಕುಂದವಾಡ ಸೈಟ್ (30x50) ಪಶ್ಚಿಮ
ಸಂಪರ್ಕಿಸಿ:
97404 47907, 91481 25125

**ಬೇಕಾಗಿದ್ದಾರೆ**
ಮನೆಯಲ್ಲಿ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ, ಆಸಕ್ತರು ಸಂಪರ್ಕಿಸಿ, ಭೇಟಿಯ ಸಮಯ : ಬೆಳಿಗ್ಗೆ 11.30 ರಿಂದ ಸಂಜೆ 5 ರವರೆಗೆ. ಸಂಪರ್ಕಿಸಿ :
08192 254736

**ಗೋಡೌನ್ ಬಾಡಿಗೆಗೆ ಇದೆ**
ದಾವಣಗೆರೆ APMC A-1 ಬ್ಲಾಕ್‌ನಲ್ಲಿ ಗೋಡೌನ್ ಹಾಗೂ ಆಫೀಸ್ ಇರುವ 5000 ಚ.ಅಡಿ ಗೋಡೌನ್ ಬಾಡಿಗೆಗೆ ಇದೆ.
ವಿಚಾರಿಸಿ : 98443 26096

**ವಾಣಿಜ್ಯ ಮಳಿಗೆ ಬಾಡಿಗೆಗಿದೆ**
ಲಕ್ಷ್ಮೀ ಪ್ಲಾಜಾ, ಚಾಮರಾಜ ಪೇಟೆ, ರವಿತೇಜ ಕಿಡ್ಸ್ ಎದುರು, ದಾವಣಗೆರೆ-1. 09x28 ಅಳತೆಯ ಗ್ರೌಂಡ್ ಫ್ಲೋರ್ ಮತ್ತು 1ನೇ ಮಹಡಿ ಬಾಡಿಗೆಗೆ ಇದೆ.
90085 77729

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ, ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, ಪೂಜಾ ರೂಂ, 24ಗಂಟೆ ನೀರಿನ ವ್ಯವಸ್ಥೆಯಿರುವ ಡಬ್ಬಲ್, ಸಿಂಗಲ್ ಬೆಡ್ ರೂಂ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ.
9900466607

**ಮನೆ ಬಾಡಿಗೆಗೆ**
24ನೇ ವಾರ್ಡ್, # 337/101, 2BHK ಮನೆ ಬಾಡಿಗೆಗೆ ಇದೆ. ಗಣೇಶ್ ಲೇಔಟ್, ದಾವಣಗೆರೆ.
ಸಂಪರ್ಕಿಸಿ :
98800 56262

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪೂರ್ವ ದಿಕ್ಕಿನ ಮನೆ ಗ್ರೌಂಡ್ ಫ್ಲೋರ್‌ನಲ್ಲಿ 2BHKಮನೆ, ಮೊದಲನೇ ಮಹಡಿಯಲ್ಲಿ ರೂಂ ವಿತ್ ಅಟ್ಯಾಚ್ಡ್ ಬಾತ್ ರೂಂ ಇರುವ ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.
9060081281

**ಬಾಡಿಗೆಗೆ**
ಆಫೀಸ್ ಬಾಡಿಗೆಗೆ ಇದೆ, 1st floor, GM Compound, PB Road, Davanagere.
Contact :
98800 56262

**ಸೈಟ್ ಮಾರಾಟಕ್ಕಿದೆ**
ಉತ್ತರ ದಿಕ್ಕಿನ 30x40 ಅಳತೆಯ 30 ಅಡಿ ಸಿಮೆಂಟ್ ರಸ್ತೆಗೆ ಹೊಂದಿರುವ ಯಲ್ಲಮ್ಮನಗರ, ರಿಂಗ್ ರಸ್ತೆ ಸಮೀಪದಲ್ಲಿರುವ ರೆವಿನ್ಯೂ ಸೈಟ್ ಮಾರಾಟಕ್ಕಿದೆ.
76761 62869

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ, ದಂಪತಿ ಬೇಕಾಗಿದ್ದಾರೆ. ಸಂಬಳ 20,000/- ಊಟ+ವಸತಿ ಉಚಿತ.
97400 98047

**ಬಾಡಿಗೆಗೆ ಕೊಡುವುದಿದೆ**
ನಿಜಲಿಂಗಪ್ಪ ಲೇಔಟ್, ಸುರಕ್ಷಾ ಆಸ್ಪತ್ರೆ ಹಿಂದೆ 1BHK ಮನೆ ಎರಡನೇಯ ಮಹಡಿಯಲ್ಲಿದ್ದು ನೀರು ಮೊದಲಾದ ಎಲ್ಲಾ ಸೌಲಭ್ಯಗಳನ್ನು ಹೊಂದಿದ್ದು ಸಸ್ಯಹಾರಿಗಳಿಗೆ ಬಾಡಿಗೆಗೆ ಕೊಡುವುದಿದೆ. ಸಂಪರ್ಕಿಸಿ :
98446 36575, 80953 75484

**ಖಾಲಿ ನಿವೇಶನದ ಮೂಲ ಪತ್ರ ಕಳೆದಿದೆ**
ಕೆ. ಶರತ್ ತಂದೆ ಕೆ. ಹನುಮಂತ ರೆಡ್ಡಿ, ದಾವಣಗೆರೆ ಸಿಟಿ, ಆಂಜನೇಯ ಬಡಾವಣೆ ವಾಸಿಯಾದ ನಾನು, ನನ್ನ ಖಾಲಿ ನಿವೇಶನದ ನಂ. 37, ಚಿಕ್ಕನಹಳ್ಳಿ ಹೊಸ ಬಡಾವಣೆ, ದಾವಣಗೆರೆಯ ಮೂಲ ಪತ್ರವು ಆಕಸ್ಮಿಕವಾಗಿ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.
99161 41646

**COSDERM HAIR & SKIN CARE WELLNESS CENTRE DAVANAGERE**
**URGENTLY STAFF REQUIRED**
Counsellor, Marketing manager, Nurse's, Therapist (Male, Female), House keeping (Male, Female), Dietitian
for more information
76192-57443, 08192 468705

**FURNISHED HOUSE TO LET**
3BHK, Big hall, Varanda, Pooja, Kitchen, Store, Bath, Front sit-out, Kiran Arun Nilaya 1st floor # 1646/31, 13th main, BIET Road, Opp Dvg-Harihara Urban Bank Ltd.
98444 99799

**SALES GIRL REQUIRED**
Experienced Sales Staff Needed For Innerwear Store.
WOMEN'S PARADISE
AVK College Road, Davanagere.
96204 53208

**ಬೇಕಾಗಿದ್ದಾರೆ**
ಸ್ವೀಟ್ಸ್ ಅಂಗಡಿಯ ಕೌಂಟರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ : 91138 57837

**ರೂಮ್ ಖಾಲಿ ಇದೆ**
ಶಕ್ತಿ ನಗರ, ರಾಜೇಂದ್ರ ಬಡಾವಣೆಯಲ್ಲಿ ಅಟ್ಯಾಚ್ ಬಾತ್ ರೂಮ್ ಇರುವ ರೂಮ್ ಖಾಲಿ ಇದೆ. ವಿದ್ಯಾರ್ಥಿನಿಯರಿಗೆ ಅಥವಾ ಉದ್ಯೋಗಸ್ಥ ಮಹಿಳೆಯರಿಗೆ ಮೊದಲ ಆದ್ಯತೆ. ಆಸಕ್ತರು ಸಂಪರ್ಕಿಸಿ :
63622 46356, 98802 94988

**2BHK ಮನೆ ಬಾಡಿಗೆಗಿದೆ**
ಪಿ.ಜೆ. ಬಡಾವಣೆ #397ರ 8ನೇ ಮೇನ್, 8ನೇ ಕ್ರಾಸ್, 1ನೇ ಮಹಡಿಯ 20x40ರ ಅಳತೆಯ ಅಟ್ಯಾಚ್ಡ್ ಬೆಡ್ ರೂಂ, ಓಪನ್ ಕಿಚನ್, ಹಾಲ್ (ಸಸ್ಯಹಾರಿಗಳಿಗೆ ಮಾತ್ರ)
78927 53714, 90603 20888

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಮಾರಾಟಕ್ಕೆ**
ಜಯನಗರದಲ್ಲಿ 26x40 (ಪೂರ್ವ) ಸೈಟು, ಶಿವಕುಮಾರ ಸ್ವಾಮಿ ಬಡಾವಣೆ 30x40 (ಉತ್ತರ) ಡುಪ್ಲೆಕ್ಸ್ ಮನೆ, ಚಿಕ್ಕಮ್ಮಣಿ ಲೇಔಟ್‌ನಲ್ಲಿ 20x30 (ಉತ್ತರ) ಸೈಟು ಹಾಗೂ ಸರಸ್ವತಿ ನಗರದಲ್ಲಿ 20x30 (ಪೂರ್ವ) ಮನೆ ಮಾರಾಟಕ್ಕೆ ಇವೆ.
98804 40602

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಕೆ.ಬಿ. ಬಡಾವಣೆ ಆಂಜನೇಯ ಬಡಾವಣೆ.
78997 60749, 99726 75759

**ಮನೆ ಬಾಡಿಗೆ/ಲೀಸ್‌ಗೆ**
1ನೇ ಮಹಡಿಯಲ್ಲಿರುವ ಡಬ್ಬಲ್ ಬೆಡ್ ರೂಂ ಮನೆ ಬಾಡಿಗೆ /ಲೀಸ್ ಗೆ ದೊರೆಯುತ್ತದೆ. (ಸಸ್ಯಹಾರಿಗಳಿಗೆ ಮಾತ್ರ)
ವಿಳಾಸ: ದೇವರಾಜ್ ಅರಸ್ ಬಡಾವಣೆ, ಸಿ ಬ್ಲಾಕ್, 1ನೇ ಕ್ರಾಸ್, ದಾವಣಗೆರೆ.
98448 59101

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಮನೆ ಮಾರಾಟಕ್ಕೆ ಇದೆ**
ಕರಿಯಮ್ಮನ ದೇವಸ್ಥಾನ ಹತ್ತಿರ 30x40 ಅಳತೆಯ 2 ಮಹಡಿಯ ಮನೆ ಮಾರಾಟಕ್ಕೆ ಇದೆ.
ವಿಳಾಸ : ನಿಟ್ಟುವಳ್ಳಿ ರಾಮನ ತೋಟ, 1ನೇ ಮೇನ್ 1ನೇ ಕ್ರಾಸ್.
98441 01178

**ಗುಮಾಸ್ತರು ಬೇಕು**
ಬೆಳ್ಳಿ - ಬಂಗಾರದ ಅಂಗಡಿಗೆ ಗುಮಾಸ್ತರು ಬೇಕಾಗಿದ್ದಾರೆ. ಗುಮಾಸ್ತ ಹುದ್ದೆಯಲ್ಲಿ ಅನುಭವವುಳ್ಳ ಪುರುಷ ಅಥವಾ ಮಹಿಳಾ ಅಭ್ಯರ್ಥಿಗಳು ಸಂಪರ್ಕಿಸಿ :
98444-44772

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಪೂಜಿಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಕಲ್ಯಾಣ ಬೆಳಕು ವಧುವರ ವೇದಿಕೆ**
ಜಂಗಮ ಮತ್ತು ಲಿಂಗಾಯತ ವಧುವರರ ಆನ್‌ಲೈನ್ ವೇದಿಕೆ - ಪ್ರವೇಶ ಶುಲ್ಕ ರೂ. 500/- ನಮ್ಮ ಗ್ರೂಪ್‌ಗಳಿಂದ ಮದುವೆ ನಿಶ್ಚಯವಾದರೆ ಯಾವುದೇ ಶುಲ್ಕ ಇರುವುದಿಲ್ಲ.
78291 460919

**ಮನೆ ಮಾರಾಟಕ್ಕೆ ಇದೆ**
ಮಹಾಲಕ್ಷ್ಮಿ ಬಡಾವಣೆಯಲ್ಲಿ 30x50ರಲ್ಲಿ ಪಶ್ಚಿಮ ದಿಕ್ಕಿನಲ್ಲಿ 2 ಬೆಡ್ ರೂಂನ ಹೊಸ ಮನೆ ಮಾರಾಟಕ್ಕೆ ಇದೆ.
98448 82366

**ಖಾಲಿ ನಿವೇಶನದ ಮೂಲ ಪತ್ರ ಕಳೆದಿದೆ**
ಕೆ. ರಾಘವೇಂದ್ರ ತಂದೆ ಕೆ. ಹನುಮಂತ ರೆಡ್ಡಿ, ದಾವಣಗೆರೆ ಸಿಟಿ, ಆಂಜನೇಯ ಬಡಾವಣೆ ವಾಸಿಯಾದ ನಾನು, ನನ್ನ ಖಾಲಿ ನಿವೇಶನ ನಂ. 38, ಚಿಕ್ಕನಹಳ್ಳಿ ಹೊಸ ಬಡಾವಣೆ, ದಾವಣಗೆರೆಯ ಮೂಲ ಪತ್ರವು ಆಕಸ್ಮಿಕವಾಗಿ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.
99161 41646

**WANTED**
Technician & Account Executive
Any Degree Male Candidate (Below 30 age)
VANI HONDA
P.B. ROAD, DAVANDEGERE.

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಆವರಗೆರೆಯ ಮಹಾಲಕ್ಷ್ಮಿ ಲೇಔಟ್‌ನಲ್ಲಿ 30x40 ಅಡಿಯ ಫೈನಲ್ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
96638 87111

**ಮನೆ ಬಾಡಿಗೆಗೆ ಇದೆ**
MCC A BLOCK 12TH MAIN 12TH CROSS #3714/72
ಡಬಲ್ ಬೆಡ್ ರೂಮ್ ಮನೆ ಮೊದಲನೇ ಮಹಡಿಯಲ್ಲಿ ಬಾಡಿಗೆ ಇದೆ. ಮುನ್ಸಿಪಲ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುತ್ತದೆ. ಆಸಕ್ತರು ವಿಚಾರಿಸಬಹುದು (ಬಕ್ಕೇಶ್ವರ ಹೈಸ್ಕೂಲ್ ಹತ್ತಿರ)
9481720733, 08192-225181

**ಮಳಿಗೆ/ಮನೆ ಮಾರಾಟಕ್ಕಿದೆ**
ನಗರದ ಕೆ.ಆರ್ ರಸ್ತೆ, ಶ್ಯಾಮನೂರು ಶಿವಶಂಕರಪ್ಪ ಸಾರ್ವಜನಿಕ ಆಸ್ಪತ್ರೆ ಹತ್ತಿರ, ಸಿಟಿ ಡೆಂಟಲ್ ಕ್ಲಿನಿಕ್ ಪಕ್ಕ, 10x51 ಅಡಿ ಉದ್ದದ ಕೆಳಗೆ ವ್ಯಾಪಾರ ಮಾಡಲು ಮಳಿಗೆ, ಮೇಲೆ ವಾಸಕ್ಕೆ ಅನುಕೂಲವಿರುವ ಕಟ್ಟಡ ಮಾರಾಟಕ್ಕಿದೆ.
79758 23058

**ಡಾಬರ್‌ಮನ್ ನಾಯಿಯನ್ನು ಕೊಡಲಾಗುವುದು**
5 ವ್ಯಾಕ್ಸಿನೇಷನ್ ಆಗಿದೆ. ಬೇಕಾದಲ್ಲಿ ಸಂಪರ್ಕಿಸಿ
94480 28276, 80736 92875

**ಮನೆ ಲೀಸ್‌ಗೆ ಬೇಕಾಗಿದೆ**
ದಾವಣಗೆರೆಯ ಆಂಜನೇಯ, ತರಳಬಾಳು, ವಿವೇಕಾನಂದ, ಸಿದ್ದವೀರಪ್ಪ, ಶಿವಕುಮಾರಸ್ವಾಮಿ, ವಿನಾಯಕ ಬಡಾವಣೆಗಳಲ್ಲಿ ಮತ್ತು ವಿದ್ಯಾನಗರದಲ್ಲಿ ನೆಲ ಅಂತಸ್ತಿನಲ್ಲಿ ಎಲ್ಲಾ ಸೌಲಭ್ಯ ಹೊಂದಿರುವ 2 ಬೆಡ್ ರೂಂ ಉಳ್ಳ ಮನೆ ಲೀಸ್‌ಗೆ ಬೇಕಾಗಿದೆ. ಸಂಪರ್ಕಿಸಿ :-
96630 60525, 93539 94544

**ಮನೆ ಮಾರಾಟಕ್ಕಿದೆ**
1828/A25,ಆಂಜನೇಯ ಬಡಾವಣೆ,18ನೇ ಕ್ರಾಸ್ ನಲ್ಲಿರುವ ಡುಪ್ಲೆಕ್ಸ್ (North Face), 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ (East Face) ವಾಸ್ತು ಪ್ರಕಾರ ಎಲ್ಲಾ ಅನುಕೂಲವಿರುವ fully furnished, ಬೋರ್ ವೆಲ್ & ಕಾರ್ಪೊರೇಶನ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕೆ ಇದೆ.
9008432505 /9902432505

**ಹೋಟೆಲ್ ಕೆಲಸಕ್ಕೆ**
ಅನುಭವವುಳ್ಳ ದೋಸೆ ಭಟ್ಟರು, ಟೀ-ಕಾಫಿ ಮಾಡುವವರು, ಸಪ್ಲೈಯರ್‌ಗಳು, ಕೌಂಟರ್ ಹುಡುಗರು, ಕ್ಲೀನರ್ ಗಳು, ಚಾಟ್ಸ್ ಮಾಡುವವರು, ಹೆಲ್ಪರ್ ಗಳು ಬೇಕಾಗಿದ್ದಾರೆ.
95350 35660, 63646 64518

**ಸಪ್ತರ್ಷಿ ಆರ್ಕಿಟೆಕ್ಟ್ ಮತ್ತು ಕನ್‌ಸ್ಟ್ರಕ್ಷನ್**
ನಮ್ಮಲ್ಲಿ ಉತ್ತಮ ಬೆಲೆಯಲ್ಲಿ ಮನೆಗಳನ್ನು ಕಟ್ಟಿಕೊಡಲಾಗುವುದು ಮತ್ತು ಇಂಟೀರಿಯರ್ ಮಾಡಿಕೊಡುತ್ತೇವೆ.
ಆರ್ಕಿಟೆಕ್ಟ್ ಗಗನ್ ದೀಪ್ : 9902521054
ಸಿವಿಲ್ ಇಂಜಿನಿಯರ್ ರಂಜಿತ್ : 9686093228
ಆಫೀಸ್ ವಿಳಾಸ : 616/2, 2ನೇ ಮೇನ್, 9ನೇ ಕ್ರಾಸ್, ಆಂಜನೇಯ ದೇವಸ್ಥಾನದ ಎದುರು ಅಮೃತ ವಿದ್ಯಾಲಯ ಶಾಲೆ ಹತ್ತಿರ ಎಸ್.ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.

**1 BHK ಮನೆ ಲೀಸ್**
ಇಂಡಿಪೆಂಡೆಂಟ್ ಮನೆ, 1st ಮೇನ್ ರೋಡ್ , K.B. ಬಡಾವಣೆ.
ಸಂಪರ್ಕಿಸಿ :
98440 38994

**ಸೈಟುಗಳು ಮಾರಾಟಕ್ಕಿವೆ**
30x50 ಸಿದ್ದಗಂಗಾ ಲೇಔಟ್, ಟಾಟಾ ಶೋ ರೂಮ್ ಹಿಂಭಾಗ (Opp Jain Temple) ಕಾಂಕ್ರೀಟ್ ರಸ್ತೆ, 120 ಅಡಿ ರಿಂಗ್ ರೋಡ್ ಹಿಂಭಾಗ, ಹತ್ತಿರದ ಪಿ.ಬಿ. ರಸ್ತೆಗೆ, ಆವರಗೆರೆ, ದಾವಣಗೆರೆ.
98452 95326

**ಬೇಕಾಗಿದ್ದಾರೆ**
BAMS / MBBS ಡ್ಯೂಟಿ ಡಾಕ್ಟರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ
ಆರೈಕೆ ಆಸ್ಪತ್ರೆ,
ಸ್ಟೇಡಿಯಂ ಹತ್ತಿರ, ಹದಡಿ ರಸ್ತೆ, ದಾವಣಗೆರೆ.
ಮೊ.: 84315 41487
98455 74143

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ಕನಿಷ್ಠ ಓದಲು, ಬರೆಯಲು ಬರುವ ಹಾಗೂ ಅನುಭವವಿರುವ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.
ವೇತನ : 8000 ದಿಂದ 9000ವರೆಗೆ.
9035536252, 7353950027

**ಬೇಕಾಗಿದ್ದಾರೆ**
ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ. ಕನ್ನಡ-ಇಂಗ್ಲಿಷ್ ಫಾಸ್ಟ್ ಟೈಪಿಂಗ್ ಅನುಭವವಿರುವವರಿಗೆ ಆದ್ಯತೆ ಮತ್ತು ಇ-ಸ್ಟಾಂಪ್ (ಛಾಪ ಕಾಗದ) ಪ್ರಿಂಟ್ ತೆಗೆಯಲು ಯುವಕ-ಯುವತಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
ಶ್ರೀ ವೆಂಕಟೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ
ಹೊಸ ಕೋರ್ಟ್ ಎದುರು, ದಾವಣಗೆರೆ.
ಮೊ.: 98440 25346

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC & PUC ಓದಿರುವ ಹಿಂದಿ ಭಾಷೆಯುಳ್ಳ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ ಆಕರ್ಷಕ ಸಂಬಳ ಕೊಡಲಾಗುವುದು. ಬೈಕ್‌ವುಳ್ಳವರಿಗೆ ಮೊದಲನೇ ಆದ್ಯತೆ.
9482389317, 6363403567

**CLASS 10TH CRASH COURSE**
Batch Maths, Science, Social, English Join Immediately.
STUDY IQ ACADEMY, DAVANGERE
Excellent Coaching Center for 8th, 9th & 10th Vidyanagar, MCC A Block.
8951717444, 9740215992

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50, 30x40 ಪೂರ್ವ, ಎಸ್.ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ ಶ್ರೀ ಸಾಮಾನ್ಯದಲ್ಲಿ 30x43 ಉತ್ತರ 40 ಅಡಿ ರಸ್ತೆಗೆ, ಬೈಪಾಸ್ ಸರ್ವೀಸ್ ರಸ್ತೆಗೆ, 30x55 ದಕ್ಷಿಣ (ಕಮರ್ಷಿಯಲ್) ಸರ್ಕಾರಿ ನೌಕರರ ಪಕ್ಕದ ಬಡಾವಣೆಯಲ್ಲಿ 30x40 ಪೂರ್ವ 2 ಸೈಟ್‌ಗಳು ಮಾರಾಟಕ್ಕೆ ಇವೆ.
ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907


**ಮಳಿಗೆ ಖಾಲಿ ಇದೆ**
ದಾವಣಗೆರೆ ಚರ್ಚ್ ರೋಡಿನಲ್ಲಿ ಸೂಪರ್ ಮಾರ್ಕೆಟ್ ಎದುರು 17x8 ಅಡಿ ಅಳತೆಯ ಮಳಿಗೆ ಖಾಲಿ ಇದೆ. ವಿಚಾರಿಸಿ.
97435 22625, 73492 06530

**ಮನೆ ಬಾಡಿಗೆಗಿದೆ**
2 ಬೆಡ್ ರೂಂ ಇರುವ ಗೀತಾಂಜಲಿ ನಿವಾಸ, # 2041, ಎಂಸಿಸಿ ಬಿ ಬ್ಲಾಕ್, 11ನೇ ಮೇನ್, 8ನೇ ಕ್ರಾಸ್, ಬಿಡಿಇಟಿ ಕಾಲೇಜ್ ರಸ್ತೆ, ವಿನಾಯಕ ಕ್ಲಿನಿಕ್ ಹತ್ತಿರ
63628 47140
98806 47830

**SHOP FOR RENT**
Boys Hostel Road, Ist Floor Shop For Rent 7th Cross, 9th Main
82177 72482

**WANTED**
Any Degree with Computer knowledge is must. for Male & Female.
Contact : Exllent Electronics
#2137/1, 4th Main, 3rd Cross, MCC 'A' Block, Davanagere - 577004
98865 15100

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ಫಾರ್ಮಾಸ್ಯೂಟಿಕಲ್ ಡಿಸ್ಟ್ರಿಬ್ಯೂಟರ್‌ನಲ್ಲಿ ಕೆಲಸ ಮಾಡಲು ಯುವಕ/ ಯುವತಿಯರು ಬೇಕಾಗಿದ್ದಾರೆ. SSLC/PUC Pass, ಪದವೀಧರರು ಬೇಕಾಗಿದ್ದಾರೆ. ಎಂಸಿಸಿ ಬಿ ಬ್ಲಾಕ್, ದಾವಣಗೆರೆ. ವಯೋಮಿತಿ : 18 ರಿಂದ 30 ವರ್ಷ
96069 04471

**V-MAX ELEVATORS**
B.E & Diploma for all Branches B.Com and any Degree for Marketing and Digital Marketing (Men & Women) SSLC & ITI for erection
Santhosh - 7899134055
Sunil - 99459 34405
Digital Marketing only Female (Urgent Required)

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, , ಸೊಳ್ಳೆ ಮೆಶ್ ಹಾಕಲಾಗುವುದು.
Swapan Cushion Work
Behind Vital Temple Maharaj Pet, Davanagere
98445 81966

**ವಾಹ್ ಕಾಫಿ !! ರಿಚ್ ಕಾಫಿ !!**
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಸೈಟು ಮತ್ತು ಮಳಿಗೆ ಮಾರಾಟಕ್ಕಿದೆ**
ಪಿ.ಬಿ. ರಸ್ತೆ ರವಿ ಮಿಲ್ ಎದುರು ಮಹೀಂದ್ರ ಶೋ ರೂಂ ಹತ್ತಿರವಿರುವ ನಾಗಮ್ಮ ಕೇಶವಮೂರ್ತಿ ಲೇಔಟ್‌ನಲ್ಲಿ 25x100 ಚ.ಅಡಿ ಇರುವ Powerವುಳ್ಳ ಸುಸಜ್ಜಿತ ಸೈಟು ಮತ್ತು ಮಳಿಗೆ ಮಾರಾಟಕ್ಕಿವೆ. ಸಂಪರ್ಕಿಸಿ.
96114 82735, 63625 25571

**WANTED**
Experienced Salesman and Sales Girls (B.com / MBA) Accountant (Female) Marketing Executive (Male)
Samyak Ceramics
Hadadi road, Davangere
96200 95520

**SITE FOR SALE**
1) 30x40 East
2) 30x50 West. Behind judge qtrs.
3) 30x40 East Sarkari Naukarar
4) 30x50 East MB City
9741857775

**HOUSE FOR RENT**
Ground floor Door no 868/51 Shankar Vihar Badavane, 3rd Block, 2nd cross, Near siddi Vinayaka Temple, Davangere -4
97397 97638

**ಡಬಲ್ ಬೆಡ್ ರೂಮ್ ಮನೆ ಬಾಡಿಗೆಗೆ ಇದೆ**
ಸಸ್ಯಹಾರಿಗಳಿಗೆ ಮಾತ್ರ
ಡಿ.ಸಿ.ಎಂ. ಹಿಂಭಾಗ, ರಾಜೇಂದ್ರ ಬಡಾವಣೆ, ಶಕ್ತಿ ನಗರ. ಸಂಪರ್ಕಿಸಿ :
63600 74675

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ ಪಕ್ಕ 30x30, 30x40
ಮಾಲೀಕರ ನೇರ ಸಂಪರ್ಕ
99807 51434, 78991 18395

**CRASH COURSE 2024-25**
Class 10 CBSE/State Maths & Science
49 Days (5 Hr per day)
Pi Academy,
Near by Laxmi Flour Mills
99642 29344

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

## ಮಲೇಬೆನ್ನೂರಿನಲ್ಲಿ 'ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ' ಭಾವಚಿತ್ರ ಅನಾವರಣ



ಮಲೇಬೆನ್ನೂರು, ಫೆ. 17- ಸರ್ಕಾರದ ಆದೇಶದಂತೆ ಇಲ್ಲಿನ ಪುರಸಭೆ ಮತ್ತು ನಾಡ ಕಛೇರಿ ಸೇರಿದಂತೆ, ವಿವಿಧ ಇಲಾಖೆಗಳ ಕಛೇರಿಗಳಲ್ಲಿ ಹಾಗೂ ಶಾಲಾ-ಕಾಲೇಜುಗಳಲ್ಲಿ 'ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ' ಭಾವಚಿತ್ರವನ್ನು ಅನಾವರಣಗೊಳಿಸಲಾಯಿತು.

ಪುರಸಭೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಾಧಿಕಾರಿ ಎ. ಸುರೇಶ್, ಉಪ ತಹಶೀಲ್ದಾರ್ ಆರ್. ರವಿ, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಸಾಬೀರ್ ಅಲಿ, ಶಬ್ಬೀರ್ ಖಾನ್, ಖಲೀಲ್, ನಯಾಜ್, ಭೋವಿ ಶಿವು, ದಾದಾಪೀರ್, ಬೆಣ್ಣೆಹಳ್ಳಿ ಸಿದ್ದೇಶ್, ಕೆ.ಪಿ. ಗಂಗಾಧರ್, ಭೋವಿಕುಮಾರ್, ಪಿ.ಆರ್. ರಾಜು, ಚಮನ್ ಷಾ, ಆಶ್ರಯ ಸಮಿತಿ ಸದಸ್ಯ ಕಣ್ಣಾಳ್ ನಾಗರಾಜ್, ಪುರಸಭೆ ಮಾಜಿ ಸದಸ್ಯ ಎ. ಆರೀಫ್ ಅಲಿ, ಜಿಗಳಿ ಹನುಮಗೌಡ, ಪುರಸಭೆ ಅಧಿಕಾರಿಗಳಾದ ಪ್ರಭು, ನವೀನ್, ಚಿತ್ರಾ, ಶಿವರಾಜ್, ಪರಶುರಾಮ್ ಹಾಗೂ ಸಿಬ್ಬಂದಿಗಳು, ಪೌರ ಕಾರ್ಮಿಕರು ಭಾಗವಹಿಸಿದ್ದರು.

ನಾಡ ಕಛೇರಿಯಲ್ಲಿ ಉಪ ತಹಶೀಲ್ದಾರ್ ಆರ್. ರವಿ ಅವರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಕಛೇರಿಯ ಪುಷ್ಪಾ ಹಿರೇಮಠ, ಶಿಲ್ಪಾ, ಬಸವರಾಜ್ ಮತ್ತು ಬಳೆಗಾರ ರಾಜಣ್ಣ ಈ ವೇಳೆ ಹಾಜರಿದ್ದರು.

## ಬಸವಣ್ಣನವರ ಭಾವಚಿತ್ರಕ್ಕೆ ಸೀಮಿತಗೊಳ್ಳದೇ ಅವರ ವಚನಗಳಲ್ಲಿನ ಸಾರವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು



### ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ ಕಳಕಳಿ

ಹೊನ್ನಾಳಿ, ಫೆ. 17- ಸಾಂಸ್ಕೃತಿಕ ನಾಯಕ ಬಸವಣ್ಣನವರ ಭಾವಚಿತ್ರವನ್ನು ಕೇವಲ ಕಚೇರಿಗಳಲ್ಲಿ ಹಾಕಿಕೊಳ್ಳುವುದಕ್ಕೆ ಮಾತ್ರ ಸೀಮಿತಗೊಳಿಸದೇ ಸರ್ಕಾರಿ ಅಧಿಕಾರಿಗಳು, ಸಾರ್ವಜನಿಕರು ಅವರ ವಚನಗಳಲ್ಲಿನ ಸಾರವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ರಾಜ್ಯದಲ್ಲಿ ಈ ಕಾರ್ಯಕ್ರಮ ಹೊಸ ಇತಿಹಾಸಕ್ಕೆ ನಾಂದಿಯಾಗುವಂತೆ ನೋಡಿಕೊಳ್ಳಬೇಕು ಎಂದು ಶಾಸಕ ಡಿ.ಜಿ. ಶಾಂತನಗೌಡ ಕರೆ ನೀಡಿದರು.

ಹೊನ್ನಾಳಿ ತಾಲೂಕು ಕಚೇರಿಯಲ್ಲಿ ಕ್ರಾಂತಿಯೋಗಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಭಾವಚಿತ್ರವನ್ನು ಅನಾವರಣಗೊಳಿಸಿ ಮಾತನಾಡಿದರು.

ಬಸವಣ್ಣನವರು ಜಾತಿ, ಧರ್ಮ, ಲಿಂಗ-ಭೇದವಿಲ್ಲದೇ ಸಮಾನತೆ, ಪ್ರಜಾಪ್ರಭುತ್ವ ಕಲ್ಪನೆಯನ್ನು ಕಟ್ಟಿದವರು. 12ನೇ ಶತಮಾನದಲ್ಲಿ ಬಸವಣ್ಣನವರ ವಚನಗಳು ಸಮಾಜದಲ್ಲಿನ ಅಸಮಾನತೆ, ಅಂಕು-ಡೊಂಕುಗಳನ್ನು ತಿದ್ದುವಂತಾಗಿದ್ದವು ಮತ್ತು ಇಂದಿಗೂ ಅವರ ವಚನಗಳು ಅತ್ಯಂತ ಪ್ರಸ್ತುತವಾಗಿವೆ ಎಂದು ಉದಾಹರಿಸಿದರು.

ಬಸವಣ್ಣನವರ ನೇತೃತ್ವದಲ್ಲಿ ಎಲ್ಲಾ ವಚನಕಾರರು ಜಾತಿ, ಭೇದ ಮತ್ತು ಲಿಂಗ ತಾರತಮ್ಯವಿಲ್ಲದೆ ಸಮ ಸಮಾಜವನ್ನು ರೂಪಿಸುವ ಕೆಲಸವನ್ನು ಹನ್ನೆರಡನೇ ಶತಮಾನದಲ್ಲಿಯೇ ಮಾಡಿದ್ದರು ಎಂದರು.

ಅಂಬೇಡ್ಕರ್ ರಚಿಸಿರುವ ಸಂವಿಧಾನದಲ್ಲೂ ಇದನ್ನೇ ಪ್ರಸ್ತಾಪಿಸಲಾಗಿದೆ, ಅಲ್ಲದೆ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ತಾತ್ವಿಕ ಮೌಲ್ಯಗಳನ್ನು ಬಸವಣ್ಣನವರು ಅಂದೇ ಪ್ರತಿಪಾದಿಸಿದ್ದರು ಎಂದು ಹೇಳಿದರು.

ಪ್ರಸ್ತುತ ದಿನಗಳಲ್ಲಿ ಬುದ್ದ, ಬಸವ, ಕನಕ ದಾಸರಂತಹ ಅನೇಕ ಮಹಾತ್ಮರನ್ನು ಜಾತಿಗೆ ಸೀಮಿತಗೊಳಿಸುವ ಕೆಲಸವಾಗುತ್ತಿದೆ.ಇದು ಸರಿಯಲ್ಲ, ಎಲ್ಲಾ ಮಹನೀಯರು ಇಡೀ ಮನುಕುಲದ ಒಳಿತಿಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದರು. ಬಸವಣ್ಣ ಸೇರಿದಂತೆ ಎಲ್ಲಾ ಮಹನೀಯರ ತತ್ವಾದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಹೊಸ ಸಮಾಜ ನಿರ್ಮಾಣಕ್ಕೆ ನಾಂದಿಯಾಡಬೇಕೆಂದು ಕರೆ ನೀಡಿದರು.

ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾತನಾಡಿ, ಪ್ರಪಂಚದ ಯಾವುದೇ ಭಾಷೆಯಲ್ಲಿ ಘಟಿಸದೇ ಇರುವ ಕ್ರಾಂತಿ 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣದಲ್ಲಿ ಘಟಿಸಿದ್ದು, ತನ್ಮೂಲಕ ಬಸವಣ್ಣನವರು ಸಾಮಾಜಿಕ ಕ್ರಾಂತಿಯನ್ನು ನಡೆಸುವ ಮೂಲಕ ಕನ್ನಡ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಗೆ ಅಪಾರ ಕೊಡುಗೆ ನೀಡಿದ್ದಾರೆ. ಆದ್ದರಿಂದಲ್ಲೇ ಬಸವಣ್ಣನವರು ನಾಡಿನ ಸಾಂಸ್ಕೃತಿಕ ನಾಯಕರಾಗಿದ್ದು, ಇದೀಗ ಸರ್ಕಾರ ಕೂಡ ಇದಕ್ಕೆ ಚಾಲನೆ ನೀಡುತ್ತಿದೆ ಎಂದು ಹೇಳಿದರು.

ತಹಶೀಲ್ದಾರ್ ಪಟ್ಟರಾಜಗೌಡ ಮಾತನಾಡಿ, ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿರದೇ ಅಶೋಕ ಚಕ್ರವರ್ತಿಯ ಆಸ್ಥಾನದಲ್ಲಿದ್ದಿದ್ದರೆ ಬಸವಣ್ಣನವರು ಕೇವಲ ಕರ್ನಾಟಕಕ್ಕೆ ಸೀಮಿತವಾಗದೆ ಇಡೀ ಭಾರತ ದೇಶ ಅವರನ್ನು ಆರಾಧಿಸುತ್ತಿತ್ತು, ಹಾಗೆಯೇ 12ನೇ ಶತಮಾನದಲ್ಲಿ ಅವರು ಮಾಡಿದ ಕ್ರಾಂತಿಯನ್ನು ಒಮ್ಮೆ ಸ್ಮರಿಸಿಕೊಂಡರೆ ಸಾಕು ಆ ಕಾಲದಲ್ಲೇ ಜಾತಿ ಪೆಡಂಭೂತದ ವಿರುದ್ದ ಹೋರಾಟ ನಡೆಸಿದ ಕ್ರಾಂತಿಕಾರಿ ಬಸವಣ್ಣನವರು ಅಂತಹ ಮಹಾತ್ಮರಿಗೆ ಇಂದು ನಮ್ಮ ಮುಖ್ಯಮಂತ್ರಿಗಳು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ಕಿತ್ತೂರುರಾಣಿ ಚನ್ನಮ್ಮ ವಸತಿ ಶಾಲೆಯ ಶಿಕ್ಷಕ ಕೆ.ವಿ.ಪ್ರಸನ್ನ ಅವರು ಬಸವಣ್ಣನವರ ಕುರಿತು ಉಪನ್ಯಾಸ ನೀಡಿದರು.

ತಾ.ಪಂ. ಇ.ಓ. ಎಚ್.ವಿ.ರಾಘವೇಂದ್ರ, ಬಿಇಓ ನಂಜರಾಜ್, ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕ ಡಿ.ಜಿ.ವಿಶ್ವನಾಥ್, ಮುಖಂಡರಾದ ಎಚ್.ಎ.ಉಮಾಪತಿ, ಬಿ.ಸಿದ್ದಪ್ಪ, ಎಚ್.ಬಿ.ಶಿವಯೋಗಿ, ಎಚ್.ಎ. ಗದ್ದಿಗೇಶ್, ಸಣ್ಣಕ್ಕಿ ಬಸವನಗೌಡ, ಎ.ಜಿ.ಪ್ರಕಾಶ್, ಕೊಡತಾಳ್ ರುದ್ರೇಶ್, ಆರ್.ನಾಗಪ್ಪ, ಪ್ರಶಾಂತ್ ಬಣ್ಣಜ್ಜಿ, ದಿಡಗೂರು ತಮ್ಮಣ್ಣ, ಹಾಲೇಶ್‌ಪುರದ ಹಾಲೇಶ್, ಪಂಚಮಸಾಲಿ ಸಮಾಜದ ಅಧ್ಯಕ್ಷ ವೀರಣ್ಣ, ಉಪನ್ಯಾಸಕ ಅಶೋಕ್, ರೈತ ಸಂಘದ ಅಧ್ಯಕ್ಷ ಅರುಂಡಿ ಬಸಪ್ಪ, ಹಿರೇಮಠದ ಬಸವರಾಜಪ್ಪ, ಕರಿಬಸಪ್ಪ ಮತ್ತಿತರರು ಭಾಗವಹಿಸಿದ್ದರು.

## ಹಣಕ್ಕೆ ಬೇಡಿಕೆ, ಬೆದರಿಕೆ: ಚೇತನ್ ಕನ್ನಡಿಗ ಬಂಧನ

ದಾವಣಗೆರೆ, ಫೆ.17- ಹಿಂದೂ ಜನ ಜಾಗೃತಿ ಸೇನಾ ಸಮಿತಿ ಸಂಘಟನೆಯ ಅಧ್ಯಕ್ಷ ಚೇತನ್ ಅಲಿಯಾಸ್ ಚೇತನ್ ಕನ್ನಡಿಗ ಎಂಬುವವರನ್ನು ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ.

ಚೇತನ್ ತನ್ನ ಸಹಚರರೊಂದಿಗೆ ಸೇರಿಕೊಂಡು ನಗರದ ಕರೂರು ಇಂಡಸ್ಟ್ರೀಯಲ್ ಏರಿಯಾದಲ್ಲಿರುವ ಸೈಯ್ಯದ್ ಅಕ್ಬರ್ ಅಲಿ ಎಂಬುವರಿಗೆ ಸೇರಿದ ಗ್ಲೋಬಲ್ ಪಬ್ಲಿಕ್ ಸ್ಕೂಲನ್ನು ಅನಧಿಕೃತವಾಗಿ ಇಂಡಸ್ಟ್ರೀಯಲ್ ಏರಿಯಾದಲ್ಲಿ ನಡೆಸುತ್ತಿದ್ದೀರಿ ಎಂದು ಶಿಕ್ಷಣ ಇಲಾಖೆಗೆ ಸಲ್ಲಿಸಿದ ದೂರು ಅರ್ಜಿಯನ್ನು ವಾಪಾಸ್ ಪಡೆಯಲು 5 ಲಕ್ಷ ರೂ.ಗಳಿಗೆ ಹಣಕ್ಕೆ ಬೇಡಿಕೆ ಇಟ್ಟು, ಹಣ ಕೊಡದಿದ್ದರೆ ಶಾಲೆ ಮುಚ್ಚಿಸುವ ಬೆದರಿಗೆ ಹಾಕಿದ್ದ ಎಂದು ಸೈಯದ್ ಅಕ್ಬರ್ ಅಲಿ ಗಾಂಧಿ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ತನಿಖೆ ನಡೆಸಿದ ಪೊಲೀಸರು ಫೆ.17ರಂದು ಚೇತನ್ ಕನ್ನಡಿಗ (28) ಆರೋಪಿಯನ್ನು ಪತ್ತೆ ಮಾಡಿ, 15 ಸಾವಿರ ಬೆಲೆಯ ಮೊಬೈಲ್, ಸ್ಕೂಟರ್ ವಶ ಪಡಿಸಿಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ಹಾಲಿ ನ್ಯಾಯಾಂಗ ಬಂಧನದಲ್ಲಿದ್ದಾನೆ. ಇದೇ ರೀತಿ ಇತರೆ ಕಡೆಗಳಲ್ಲೂ ಇಂತಹ ಕೃತ್ಯಗಳಲ್ಲಿ ಭಾಗಿಯಾಗಿರುವ ಬಗ್ಗೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಆರೋಪಿ ಪತ್ತೆಯಲ್ಲಿ ನಹೀಂ ಅಹಮದ್.ಟಿ.ಆರ್, ಆಜಾದ್ ನಗರ (ಗಾಂಧಿನಗರ) ವೃತ್ತ ಮತ್ತು ಸಿಬ್ಬಂದಿಯವರಾದ ನಿಜಲಿಂಗಪ್ಪ, ಸಿದ್ದೇಶ್, ದ್ಯಾಮೇಶ್, ಶಫಿವುಲ್ಲಾ ಸಿದ್ಧಿಕ್‌ಅಲಿ, ನಾಗರಾಜ್ ಶ್ರಮವಹಿಸಿದ್ದರು.

## 20ರಂದು ನಗರದಲ್ಲಿ ಜಿಲ್ಲಾ ಮಟ್ಟದ ಕ್ರೀಡಾ - ಸಾಂಸ್ಕೃತಿಕ ಸ್ಪರ್ಧೆ

ದಾವಣಗೆರೆ, ಫೆ. 18- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ಇದೇ ದಿನಾಂಕ 20 ಮತ್ತು 21 ರಂದು ಎರಡು ದಿನಗಳ ಕಾಲ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಎಸ್. ಒಡೇನಪುರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸುಮಾರು ಮೂರು ಸಾವಿರಕ್ಕೂ ಹೆಚ್ಚು ಸರ್ಕಾರಿ ನೌಕರರು ಭಾಗವಹಿಸಲಿದ್ದಾರೆ. 158 ಕ್ಕೂ ಹೆಚ್ಚು ವೈಯಕ್ತಿಕ ಕ್ರೀಡೆಗಳು ಹಾಗೂ 18 ಗುಂಪು ಕ್ರೀಡೆಗಳು ನಡೆಯಲಿವೆ ಎಂದರು. ಕ್ರೀಡಾಕೂಟದಲ್ಲಿ ಭಾಗವಹಿಸುವ ಅಧಿಕಾರಿ, ನೌಕರರಿಗೆ ಎರಡು ದಿನಗಳ ವಿಶೇಷ ಸಾಂದರ್ಭಿಕ ರಜೆಯನ್ನು ಸರ್ಕಾರ ನೀಡಲಿದೆ ಎಂದು ಮಾಹಿತಿ ನೀಡಿದರು.

ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕ್ರೀಡಾ ಕಾರ್ಯದರ್ಶಿ ಪುನೀತ್ ಶಂಕರ್ (97311 10799), ಡಿ.ಎನ್. ಗಣೇಶ್ ಕ್ರೀಡಾ ಕಾರ್ಯದರ್ಶಿ (9743924357) ಇವರನ್ನು ಸಂಪರ್ಕಿಸಬಹುದು. ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಪಾಲಾಕ್ಷಿ, ಸಿ. ಗುರುಮೂರ್ತಿ, ತಿಪ್ಪೇಸ್ವಾಮಿ, ಜಯಲಕ್ಷ್ಮಿ, ಮಂಜಮ್ಮ, ಪುನೀತ್, ಡಿ.ಎನ್. ಗಣೇಶ ಮತ್ತಿತರರಿದ್ದರು.

## ತರಳಬಾಳು ಹುಣ್ಣಿಮೆ : ನಗರದಲ್ಲಿ ಇಂದು ಗ್ರಾಮೀಣ ಕ್ರೀಡಾ ಸ್ಪರ್ಧೆ

ತರಳಬಾಳು ಹುಣ್ಣಿಮೆ ಮಹೋತ್ಸವದ ಅಂಗವಾಗಿ ದಾವಣಗೆರೆ ತಾಲ್ಲೂಕು ಗ್ರಾಮೀಣ ಯುವ ಕ್ರೀಡಾ ಸ್ಪರ್ಧೆಯನ್ನು ಇಂದು ಬೆಳಿಗ್ಗೆ 8 ಗಂಟೆಗೆ ಹದಡಿ ರಸ್ತೆಯ ಮಾಗನೂರು ಬಸಪ್ಪ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಪುರುಷರು ಮತ್ತು ಮಹಿಳೆಯರ ಪ್ರತ್ಯೇಕ ವಿಭಾಗಗಳಲ್ಲಿ ಒಟ್ಟು 8 ಕ್ರೀಡೆಗಳನ್ನು ಏರ್ಪಡಿಸಲಾಗಿದ್ದು, ವಿಜೇತರಿಗೆ ಬಹುಮಾನ ನೀಡಲಾಗುತ್ತದೆ.

ವಿವರಕ್ಕೆ ಮೊ. 99801 55612, 99725 58940, 99007 64666 ಸಂಪರ್ಕಿಸಿ ಹೆಸರು ನೋಂದಾಯಿಸಬಹುದು ಎಂದು ಶಿವಸೈನ್ಯದ ಸಂಚಾಲಕ ಶಶಿಧರ ಹೆಮ್ಮನಬೇತೂರು ತಿಳಿಸಿದ್ದಾರೆ.

ನಗರಸಭೆ ಮಾಜಿ ಅಧ್ಯಕ್ಷ ಶಿವನಳ್ಳಿ ರಮೇಶ್, ಡಿಡಿಸಿಸಿ ಬ್ಯಾಂಕ್ ನಿರ್ದೇಶಕ ಬೇತೂರು ಕರಿಬಸಪ್ಪ, ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ನಾಗರಾಜ ಲೋಕಿಕೆರೆ, ಉದ್ಯಮಿ ಶಿವಗಂಗಾ ಶ್ರೀನಿವಾಸ್, ಸಾಧು ಸದ್ಧರ್ಮ ವೀರಶೈವ ಸಮಾಜದ ಕಾರ್ಯದರ್ಶಿ ಮಾಗನೂರು ಸಂಗಮೇಶ್ವರ ಗೌಡ್ರು, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಗೀತಾ ದಿಳ್ಳೆಪ್ಪ ಸೇರಿದಂತೆ ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

## ಶ್ರೀಕ್ಷೇತ್ರ ಕಡಲಬಾಳ : ಶ್ರೀಮಧ್ವನವಮಿ ರಥೋತ್ಸವ

ದಾವಣಗೆರೆ ತಾಲ್ಲೂಕಿನ ಶ್ರೀ ಕ್ಷೇತ್ರ ಕಡಲಬಾಳು, ಶ್ರೀ ಹನುಮ ಭೀಮ ಮಧ್ವ ಸೇವಾ ಚಾರಿ ಟಬಲ್ ಟ್ರಸ್ಟ್‌ನಿಂದ ಇತಿಹಾಸ ಪ್ರಸಿದ್ಧ ಶ್ರೀಮಧ್ವನವಮಿ, ರಥೋತ್ಸವವನ್ನು ಇಂದು ಮತ್ತು ನಾಳೆ ವಿವಿಧ ಕಾರ್ಯಕ್ರಮಗಳೊಂದಿಗೆ ಹಮ್ಮಿಕೊಳ್ಳಲಾಗಿದೆ. ಇಂದು ಮಧ್ವನವಮಿಯ ಪ್ರಯುಕ್ತ ಬೆಳಿಗ್ಗೆ 6.30 ರಿಂದ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ಬೆಳಿಗ್ಗೆ 8.30ಕ್ಕೆ ವಾಯುಸ್ತುತಿ ಪುನಶ್ಚರಣ ಹಾಗೂ ರಾಘವೇಂದ್ರ ಅಷ್ಟೋತ್ತರ, ಬೆಳಿಗ್ಗೆ 9.30 ರಿಂದ ರಥೋತ್ಸವ ಹೋಮ ಹಾಗೂ ಬೆಳಿಗ್ಗೆ 11.30 ಕ್ಕೆ ಬ್ರಹ್ಮ ರಥೋತ್ಸವವು ಜರುಗುವುದು. ಮಧ್ಯಾಹ್ನ 1.30ರಿಂದ ಮಹಾಮಂಗಳಾರತಿ ನಂತರ ತೀರ್ಥಪ್ರಸಾದವಿರುವುದು. ನಾಳೆ ಸೋಮವಾರ ದಶಮಿಯಂದು ಬೆಳಿಗ್ಗೆ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರದ ನಂತರ ಅವಭೃತ ಸ್ನಾನ (ಓಕುಳಿ), ಬೆಳಿಗ್ಗೆ 8.30ಕ್ಕೆ ವಾಯುಸ್ತುತಿ ಪುನಶ್ಚರಣ ಹಾಗೂ ರಾಘವೇಂದ್ರ ಅಷ್ಟೋತ್ತರ, ಬೆಳಿಗ್ಗೆ 10.30ಕ್ಕೆ ಶ್ರೀ ಸತ್ಯನಾರಾಯಣ ಪೂಜೆ ನಡೆಯುವುದು ನಂತರ 11.30 ರಿಂದ ವೇ|| ಪಂ. ಮಣ್ಣೂರು ರಾಮಚಂದ್ರಚಾರ್ ಇವರಿಂದ ಪ್ರವಚನ ನಡೆಯುವುದು. ಮಧ್ಯಾಹ್ನ 1 ಗಂಟೆಗೆ ಮಹಾಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗವಿದೆ. ಈ ಕಾರ್ಯಕ್ರಮವನ್ನು ವೇ|| ಪಂ|| ಕಡೂರು ಪ್ರಾಣೇಶಾಚಾರ್‌ರವರು ವಹಿಸುವರು ಎಂದು ಊರಿನ ಮುಖಂಡರು ಹಾಗೂ ಎಸ್ ಎಂ ಪಿ ಸ್ಟೋನ್ ಕ್ರಷರ್ ಮಾಲೀಕರಾದ ಎಚ್ ಮರುಳಸಿದ್ದೇಶ್ ತಿಳಿಸಿದ್ದಾರೆ

## ನಗರದ ಗಾಜಿನ ಮನೆಯಲ್ಲಿ ಇಂದು 'ಸೈನ್ಸ್ ಆಫ್ ಸೆಲ್ಫ್ ಡಿಫೆನ್ಸ್'

ದಾವಣಗೆರೆ, ಫೆ.17- ಈಗಲ್ ಫಿಟ್‌ನೆಸ್ ಅಂಡ್ ಮಾರ್ಶಲ್ ಆರ್ಟ್ಸ್ ಆರ್ಗನೇಷನ್ ವತಿಯಿಂದ ನಾಳೆ ದಿನಾಂಕ 18ರ ಭಾನುವಾರ ನಗರದ ಗಾಜಿನ ಮನೆಯಲ್ಲಿ ಸೈನ್ಸ್ ಆಫ್ ಸೆಲ್ಫ್ ಡಿಫೆನ್ಸ್ ಸೆಮಿನಾರ್ (ಆತ್ಮರಕ್ಷಣೆ ಕಲೆಯ ತರಬೇತಿ) ಹಮ್ಮಿಕೊಳ್ಳಲಾಗಿದೆ ಎಂದು ವೆಂಕಿ ಸೆನ್ಸೈ ತಿಳಿಸಿದ್ದಾರೆ. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಿಗ್ಗೆ 7.30ರಿಂದ 10.30ರವರೆಗೆ ತರಬೇತಿ ನಡೆಯಲಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅವರು ಭಾಗವಹಿಸಲಿದ್ದಾರೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಲ್ಲಿಕಾರ್ಜುನ್, ಚಿಂತನಾ, ಜಗದೀಶ್, ದೀಕ್ಷಿತ್ ಉಪಸ್ಥಿತರಿದ್ದರು.

## ಲೇಬರ್ ಕಾಲೋನಿ : ಕರಿಬಸವೇಶ್ವರ ಸ್ವಾಮಿ ದೇವಸ್ಥಾನದ ಉದ್ಘಾಟನೆ ಇಂದು

ದಾವಣಗೆರೆ : ಲೇಬರ್ ಕಾಲೋನಿ, ಕೆಎಸ್ಸಾರ್ಟಿಸಿ ಬಸ್ ಸ್ಟ್ಯಾಂಡ್ ರಸ್ತೆ, 6ನೇ ಕ್ರಾಸ್‌ನಲ್ಲಿ ನಿರ್ಮಿಸಲಾಗಿರುವ ಶ್ರೀ ಗುರು ಕರಿಬಸವೇಶ್ವರ ಸ್ವಾಮಿ ನವ ದೇವಸ್ಥಾನದ ಉದ್ಘಾಟನೆ ಮತ್ತು ವಿಗ್ರಹದ ಮರು ಪ್ರತಿಷ್ಠಾಪನೆ ಪೂಜಾ ಕಾರ್ಯಕ್ರಮವನ್ನು ಇಂದು ಮತ್ತು ನಾಳೆ ಹಮ್ಮಿಕೊಳ್ಳಲಾಗಿದೆ.

ಲಿಂಗದಹಳ್ಳಿ ಹಿರೇಮಠದ ಶ್ರೀ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ದೇವಸ್ಥಾನವನ್ನು 1965ರಲ್ಲಿ ಸ್ಥಾಪಿಸಿ ಸೇವಾ ಕಾರ್ಯವನ್ನು ನಾಗಪ್ಪಜ್ಜ ಪಾಳ್ಯ ಇವರ ಪುತ್ರ ಪಿ.ಎನ್.ಲೋಕೇಶಪ್ಪ, ಶ್ರೀಮತಿ ನಾಗಮ್ಮ ಮತ್ತು ಬಂಧುಗಳು ನೆರವೇರಿಸಿಕೊಂಡು ಬರುತ್ತಿದ್ದಾರೆ.

ಈ ಕಾರ್ಯಕ್ರಮಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಸಂಸದ ಜಿ.ಎಂ.ಸಿದ್ದೇಶ್ವರ, ಸಿವಿಲ್ ಎಂಜಿನಿಯರ್ ಎಸ್.ರಾಜು ಸಾರಥಿ, ಮಹಾನಗರ ಪಾಲಿಕೆ ಸದಸ್ಯ ಜೆ.ಎನ್.ಶ್ರೀನಿವಾಸ್, ಕಾಂಗ್ರೆಸ್ ಮುಖಂಡ ಹುಲ್ಲುಮನಿ ಗಣೇಶ್ ಮತ್ತಿತರರು ಆಗಮಿಸಲಿದ್ದಾರೆ.

## ನಗರದಲ್ಲಿ ಮಹಾ ರುದ್ರಾಕ್ಷಿ ಮೇಳ



ದಾವಣಗೆರೆ, ಫೆ. 17 - ನಗರದ ಹೋಟೆಲ್ ಶಾಂತಿ ರಾಯಲ್ (ಹೋಟೆಲ್ ಶಾಂತಿ ಪಾಕ್ ಕಾಪೌಂಡ್) ನಲ್ಲಿ ಮಹಾಶಿವರಾತ್ರಿ ಪೂರ್ವ ಪ್ರದರ್ಶನ ಮತ್ತು ಮಾರಾಟ ಹೈದ್ರಾಬಾದ್ ಮೂಲದ ಇಂಡಸ್-ನೇಪಾಳ ರುದ್ರಾಕ್ಷಿ ಸಂಸ್ಥೆ ಆಯೋಜಿಸಿರುವ ನೇಪಾಳದ ರುದ್ರಾಕ್ಷಿಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ನಾಳೆ ದಿನಾಂಕ 18 ಮತ್ತು 19ರಂದು ಏರ್ಪಡಿಸಲಾಗಿದೆ.

ಗ್ರಾಹಕರಿಗೆ ಭೂಮಿ ಮೇಲೆ ವಿರಳವಾಗಿ ದೊರಕುವ ಹಾಗೂ ರತ್ನದ ಹರಳುಗಳು ಸಹ ಲಭ್ಯ ಇವೆ. ಜಗತ್ತಿನಲ್ಲಿ ಅತ್ಯಂತ ವಿರಳವಾಗಿರುವ ದುಂಡುಮುಖದ ಒಂದು ಮುಖಿ ರುದ್ರಾಕ್ಷಿ (ಸುಮಾರು 4.5 ಲಕ್ಷ ಬೆಲೆಯುಳ್ಳ) ರುದ್ರಾಕ್ಷಿಗಳು ಲಭ್ಯವಿವೆ.

ವ್ಯಕ್ತಿಯ ಜನ್ಮದಿನಾಂಕ ಆಧರಿಸಿ ಯಾವ ರಾಶಿಗೆ ಯಾವ ಮುಖದ ರುದ್ರಾಕ್ಷಿ ಸೂಕ್ತ ಎಂದು ನಿರ್ಧರಿಸಿ ಆ ಪ್ರಕಾರದ ರುದ್ರಾಕ್ಷಿ ಕೊಡಲಾಗುವುದು. ಸಸ್ಯಾಹಾರಿ ಹಾಗೂ ಮಾಂಸಹಾರಿಗಳು ಧರಿಸಬಹುದು. ಹೆಚ್ಚಿನ ಮಾಹಿತಿಗಾಗಿ ನರೇಂದ್ರ ಕಾಸಿರೆಡ್ಡಿ 7097296666 ಗೆ ಸಂಪರ್ಕಿಸಬಹುದು.

## ಅನ್ನದಾತರ ಪರ ದನಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲಿ ಅನ್ನದಾತರ ಪರವಾದ ಹಲವು ಕಾರ್ಯಕ್ರಮಗಳಿರುವುದು ಸಂತಸವಾದರೂ ಅನುಷ್ಠಾನದ ದಿಕ್ಕು ದೆಸೆಗಳು ನಂತರವಷ್ಟೇ ಗೋಚರಿಸಬೇಕು. ರೈತ ಪರ ಯೋಜನೆಗಳನ್ನು ಒಗ್ಗೂಡಿಸಲು ಕೃಷಿ ಅಭಿವೃದ್ಧಿ ಪ್ರಾಧಿಕಾರದ ರಚನೆ ಆಶಯ ಹೊಸ ಕಲ್ಪನೆ. ಬರಗಾಲ ಎದುರಿಸಲು ಸರೋವರಗಳ ನಿರ್ಮಾಣ, ಕೃಷಿ ಮಹಲು ಗಳ ಆರಂಭ, ಎಪಿಎಂಸಿ ಮಾರುಕಟ್ಟೆಗೆ ಕ್ರಿಯಾಶೀಲತೆ ಸ್ಪರ್ಶ ನೀಡಿರುವುದು ಸ್ವಾಗತಾರ್ಹ. ಮಧ್ಯ ಕರ್ನಾಟಕದ ನೀರಾವರಿ ಯೋಜನೆಗಳನ್ನು ನಿರ್ಲಕ್ಷಿಸಿರುವುದು ಸರಿಯಾದ ನಡೆಯಲ್ಲ. ಗ್ಯಾರಂಟಿಗಳ ಭರಾಟೆ ನಡುವೆ ಸಂಪನ್ಮೂಲ ಕ್ರೋಢೀಕರಣ ಮತ್ತು ವೆಚ್ಚ ಸವಾಲಿನ ಕೆಲಸವಾಗಿದ್ದು ಇಡೀ ಬಜೆಟ್ ಸಮತೋಲನ ಕಾಯ್ದುಕೊಂಡಂತೆ ಭಾಸವಾಗುತ್ತಿದೆ.

**- ಎಲ್.ಹೆಚ್.ಅರುಣ್ ಕುಮಾರ್, ಅಧ್ಯಕ್ಷರು, ವಕೀಲರ ಸಂಘ, ದಾವಣಗೆರೆ**

## ನಗರದಲ್ಲಿ ನಾಳೆ ಆರೋಗ್ಯ ತಪಾಸಣೆ

ದಾವಣಗೆರೆ, ಫೆ. 17 - ನಗರದ ಎಸ್.ಎಸ್.ಕೇರ್ ಟ್ರಸ್ಟ್, ಎಸ್.ಎಸ್. ಮೆಡಿಕಲ್ ಕಾಲೇಜು ಮತ್ತು ಎಸ್.ಎಸ್. ಹೈಟೆಕ್ ಆಸ್ಪತ್ರೆಯ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣೆ ಮತ್ತು ಸಮಾಲೋಚನೆ ಶಿಬಿರವನ್ನು ವಿದ್ಯಾನಗರದ ಈಶ್ವರ-ಪಾರ್ವತಿ, ಗಣಪತಿ ದೇವಸ್ಥಾನದ ಆವರಣದಲ್ಲಿ ನಾಡಿದ್ದು ದಿನಾಂಕ 19ರ ಸೋಮವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ಹಮ್ಮಿಕೊಳ್ಳಲಾಗಿದೆ.

**80x120 ಅಡಿ ಅಳತೆಯ 3 ಅಂತಸ್ತಿನ ಕಟ್ಟಡ ಬಾಡಿಗೆಗೆ ಇದೆ**



ದಾವಣಗೆರೆ ನಗರ ನಿಜಲಿಂಗಪ್ಪ ಬಡಾವಣೆಯ ರಿಂಗ್ ರೋಡ್ ಸರ್ಕಲ್ ಹತ್ತಿರ, ಶ್ರೀ ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು, ಡೋರ್ ನಂ. 429, 430ರಲ್ಲಿ 80x120 ಅಡಿ ಅಳತೆಯ 135 ಚದುರಡಿಯ 1ನೇ ಮಹಡಿ, 2ನೇ ಮಹಡಿ, 3ನೇ ಮಹಡಿಯಿರುವ ಬಿಲ್ಡಿಂಗ್ ಖಾಲಿಯಿದ್ದು, ಬಾಡಿಗೆಗೆ ಇದೆ. ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್, ಲಿಫ್ಟ್ ಸೌಲಭ್ಯ ಹೊಂದಿದೆ. ಸಂಪೂರ್ಣ ಕಟ್ಟಡವು ಬ್ಯಾಂಕ್, ಶಾಲೆ, ಕಾಲೇಜು, ಸರ್ಕಾರಿ ಕಛೇರಿ, ಖಾಸಗಿ ಕಛೇರಿ, ವಾಣಿಜ್ಯ ಉದ್ಯಮಗಳಿಗೆ ಬಾಡಿಗೆಗೆ ದೊರೆಯುತ್ತದೆ.

**ಸಂಪರ್ಕಿಸಿ. 82961 18778**

## ಸಾರ್ವಜನಿಕ ಪ್ರಕಟಣೆ

ಮಲ್ಲಿಕಾರ್ಜುನ ಎಂ.ಎಂ. ಬಿನ್ ಮಡಿವಾಳಪ್ಪ ಮುಂಡರಗಿ, ವಯಸ್ಸು ಸುಮಾರು 64 ವರ್ಷಗಳು, ವ್ಯವಸಾಯ, #1082, 2ನೇ ಮೇನ್, 1ನೇ ಕ್ರಾಸ್, ಎಸ್.ನಿಜಲಿಂಗಪ್ಪ ಬಡಾವಣೆ, ದಾವಣಗೆರೆ ವಾಸಿಯಾದ ನಾನು ನೀಡುತ್ತಿರುವ ಸಾರ್ವಜನಿಕ ಪ್ರಕಟಣೆ ಏನೆಂದರೆ. ನಮ್ಮ ಒಟ್ಟು ಕುಟುಂಬಗಳ ಆಸ್ತಿಯಲ್ಲಿ ದಾವಣಗೆರೆ ತಾಲ್ಲೂಕು ಬೇತೂರು ಗ್ರಾಮದ ರಿ.ಸರ್ವೆ ನಂ.99/1 ಇದರ ವಿಸ್ತೀರ್ಣ ಒಂಭತ್ತು ಎಕರೆ ಮೂವತ್ತೆಂಟು ಗುಂಟೆ (09-38)ವುಳ್ಳ ಜಮೀನು ನಮ್ಮ ಕುಟುಂಬದ ಹಿಸ್ಸೆಯಾಗಿ ಇದೇ ದಾವಣಗೆರೆಯ ಮಾನ್ಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿರಿಯ ವಿಭಾಗ), ದಾವಣಗೆರೆಯಲ್ಲಿ ನಡೆದ ಅಸಲು ದಾವಾ ಸಂಖ್ಯೆ.3/1991 ರಾಜೀ ಡಿಕ್ರಿ ದಿನಾಂಕ : 30.11.2009ರ ಪ್ರಕಾರ ನಮ್ಮ ಹಿಸ್ಸೆಗೆ ಬಂದಿದ್ದು, ನಂತರ ದಿನಾಂಕ : 06.07.2023ರಂದು ದಾವಣಗೆರೆಯ ಉಪ ನೋಂದಣಾಧಿಕಾರಿಗಳವರ ಕಛೇರಿಯಲ್ಲಿ ರಾಜೀ ಡಿಕ್ರಿಯನ್ನು 1ನೇ ಪುಸ್ತಕದ ದಸ್ತಾವೇಜು ನಂಬರ್ ಡಿವಿಜಿಡಿ-1-05765-2013-14 ಆಗಿ ಸಿಡಿ ನಂ. ಡಿವಿಜಿಡಿ-305ನೇ ನಂಬರಾಗಿ ನೋಂದಾಯಿಸಿಕೊಂಡು ಸ್ವಾಧೀನಾನುಭವ ಹೊಂದಿರುತ್ತೇನೆ.

ಇತ್ತೀಚೆಗೆ ನಮ್ಮ ಸಹೋದರ ಸಂಬಂಧಿ ದಿವಂಗತ ನಾಗರತ್ನಮ್ಮ ಕೋಂ ಷಣ್ಮುಖಪ್ಪ ಇವರ ಮಕ್ಕಳು, ಸೊಸೆ ಮತ್ತು ಮೊಮ್ಮಕ್ಕಳಾದ (1) ಮಹೇಶ್ ಬಿನ್ ಷಣ್ಮುಖಪ್ಪ (2) ಶೈಲಜಾ ಎಂ. ಕೋಂ ಲೇಟ್ ಮಂಜುನಾಥ, (3) ತೇಜಸ್ ಬಿನ್ ಲೇಟ್ ಮಂಜುನಾಥ (4) ಶ್ರೇಯಾ ಬಿನ್ ಮಂಜುನಾಥ್ ಇವರುಗಳು ತಮ್ಮ ಹೆಸರಿಗೆ ಈ ಮೇಲೆ ತಿಳಿಸಿದ ನ್ಯಾಯಾಲಯದ ಡಿಕ್ರಿಯನ್ನು ಮರೆಮಾಚಿ ಮಾನ್ಯ ತಹಶೀಲ್ದಾರ್, ದಾವಣಗೆರೆಯವರ ಮುಂದೆ ಮ್ಯುಟೇಷನ್ ತಮ್ಮ ಹೆಸರಿಗೆ ಬದಲಾಯಿಸಿದ್ದು, ಅದರ ಆಧಾರದ ಮೇಲೆ ನಮಗೆ ಸೇರಿದ ಆಸ್ತಿ ರಿ.ಸ. ನಂ.99/1ನ್ನು ಬೇರೆಯವರಿಗೆ ಪರಭಾರೆ ಮಾಡುತ್ತಿರುವುದು ತಿಳಿದು ಬಂದಿರುತ್ತದೆ. ನಮ್ಮ ಒಟ್ಟು ಕುಟುಂಬದ ಆಸ್ತಿಯನ್ನು ಸದರಿಯವರಿಗೆ ಮಾರಾಟ ಮಾಡುವ ಹಕ್ಕುಗಳು ಇರುವುದಿಲ್ಲ. ಆದುದರಿಂದ ಈ ಆಸ್ತಿಯನ್ನು ಯಾರೂ ವ್ಯವಹರಿಸಕೂಡದೆಂದು ಈ ಮೂಲಕ ನೀಡುತ್ತಿರುವ ಸಾರ್ವಜನಿಕ ಪ್ರಕಟಣೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬೇತೂರು ಗ್ರಾಮದ ರಿ. ಸರ್ವೆ ನಂ.99/1 ಒಂಭತ್ತು ಎಕರೆ ಮೂವತ್ತೆಂಟು ಗುಂಟೆ (09-38)ವುಳ್ಳ ಜಮೀನಿಗೆ **ಚಕ್ಕುಬಂದಿ: ಪೂರ್ವಕ್ಕೆ:** ಶ್ರೀಮತಿ ತುಳಜಮ್ಮನವರ ಜಮೀನು, **ಪಶ್ಚಿಮಕ್ಕೆ :** ಶ್ರೀ ಸಣ್ಣ ಅಣಜಿ ಹನುಮಂತಪ್ಪ ಮತ್ತು ಜಗಳೂರು ಖಾದರ್ ಸಾಬ್ ಇವರ ಜಮೀನು, **ಉತ್ತರಕ್ಕೆ :** ಜಗಳೂರು ರಸ್ತೆ, **ದಕ್ಷಿಣಕ್ಕೆ :** ಸಣ್ಣ ಅಣಜಿ ಶಿವಪ್ಪ ಮತ್ತು ಹನುಮಂತಪ್ಪ ನವರಿಗೆ ಸೇರಿದ ಜಮೀನು.

ಸ್ಥಳ: ದಾವಣಗೆರೆ, **(ಮಲ್ಲಿಕಾರ್ಜುನ ಎಮ್.ಎಮ್)**
ದಿನಾಂಕ: 17.02.2024 **97408 83797.**

**ಈಶ್ವರಮ್ಮ ಟ್ರಸ್ಟ್ (ರಿ)**

**Eshwaramma Higher Primary & High School**

3rd Main, 3rd Cross, P.J. Extension, Davangere - 577 002, Mob : 77604 99155



**Applications are invited for the post of Teaching Staff**

| Sl. No. | Posts | Qualifications | No. Of Posts | Pay Scale |
|---|---|---|---|---|
| 1 | Asst. Teachers for High School | M.A..B.Ed., (Eng Major)-1<br>M.Sc., B.Ed. (PM) -1<br>M.Sc., B.Ed. (CB) -1 | 3 | 14500-900-1000-19600 |
| 2 | Asst. Teachers for Lower Primary | PUC/B.A/B.Sc./D.Ed | 1 | 12000-700-800-15700 |
| 3 | Drawing Teacher for Lower Primary | Bachelor of Fine Art | 1 | |

**Applications to be send through Whatsapp No. 77604 99155 within 26.02.2024**

**Sri Satya Sai Vidyanikethana School**

**Tumbigere, Shashtrihalli, Mob : 94488 41881**

| Sl. No. | Posts | Qualification | No. Of Posts |
|---|---|---|---|
| 1 | Head Master | M.A./M.Sc./B.Ed./M.Ed. | 1 |
| 2 | Asst. Teachers for High School | M.A..B.Ed. (English/History Major) | 1 |
| 3 | Asst. Teachers for Higher Primay | B.A., B.Ed., (English/Hisotry) | 2 |
| 4 | Asst. Teacher for Lower Primary | PUC/B.A/B.Sc/D.Ed | 1 |

**Applications to be send through Whatsapp No. 94488 41881 within 26.02.2024**

**INSTRUCTIONS :**

* Preference is given to female candidates * Teacher should be well versed in English teaching
* Free Travelling facilities are provided for teachers from Davanagere to Shashtrihalli
* EPF & ESI facilities are provided * Higher Pay will be considered for experienced candidates
* Concessional Educational Facility is given for one child of the teacher

**Interview will be held on 02.03.2024 at 10.30 a.m to 2 p.m**

**Venue : Eshwaramma School, 3rd Main, 3rd Cross, P J Extension, Davanagere- 577002**

**New Admissions for Playgroup, LKG, UKG & Ist Std to 9th Std. Opened : 2024-25 (limited Seats Only)**

**ವೈಶಿಷ್ಟ್ಯಗಳು :**

● ಗ್ರಾಮಾಂತರ ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣ ● ಆಧುನಿಕ ತಂತ್ರಜ್ಞಾನ ಆಧಾರಿತ ಗುಣಾತ್ಮಕ ಶಿಕ್ಷಣ ● ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದು ● ಕಲಿಕಾ ಸಮಸ್ಯೆಗಳಿಗೆ ಪರಿಹಾರ ಶಿಕ್ಷಣ ● ಶಾಲಾ ವಾಹನ ಸೌಲಭ್ಯ ಇದೆ.



## ವಿಜೃಂಭಣೆಯ ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಿ ರಥೋತ್ಸವ

ದಾವಣಗೆರೆ, ಫೆ.17- ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ರಥಸಪ್ತಮಿಯ ದಿನವಾದ ನಿನ್ನೆ ಶ್ರೀ ಅನ್ನಪೂರ್ಣೇಶ್ವರಿ ದೇವಿಯ ರಥೋತ್ಸವವು ವಿಜೃಂಭಣೆಯಿಂದ ಜರುಗಿತು.

ರಥೋತ್ಸವದ ಪ್ರಯುಕ್ತ ದೇವಿಗೆ ಲಕ್ಷ ಬಿಲ್ವಾರ್ಚನೆ, ದುರ್ಗಾ ಹೋಮ, ರುದ್ರಹೋಮ, ನವಗ್ರಹ, ಗಿರಿಜಾ ಕಲ್ಯಾಣ ಇತರೆ ಕಾರ್ಯಕ್ರಮಗಳು ಜರುಗಿದವು. ದೇವಸ್ಥಾನ ಟ್ರಸ್ಟ್ ಗೌರವಾಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್, ಅಧ್ಯಕ್ಷ ಪ್ರಕಾಶ್ ಪಾಟೀಲ್, ವೆಂಕಟಾಚಲಪತಿ, ವೈ.ಬಿ.ಸತೀಶ್, ನಾಗರಾಜ್, ವೀರಭದ್ರಯ್ಯ, ರಮೇಶ್, ರವೀಂದ್ರ, ಜಯಂತ್ ಮತ್ತು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಪವರ್‌ಗ್ರಿಡ್‌ನಿಂದ ಜಿಲ್ಲೆಗೆ ಸಾಕಷ್ಟು ಅನುದಾನ

ದಾವಣಗೆರೆ, ಫೆ.17 - ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ನವರತ್ನ ಕಂಪನಿಯಿಂದ ರೂ. 1.63 ಕೋಟಿ ವೆಚ್ಚದಲ್ಲಿ ವಿನೂತನ ತಾಂತ್ರಿಕತೆಯಿಂದ ಬಿಸಿ ನೀರು ಪೂರೈಕೆ ಮಾಡಲು ಪರಿಕರಗಳನ್ನು ಪೂರೈಕೆ ಮಾಡಿದ್ದು ಜಿಲ್ಲೆಗೆ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಅನುಕೂಲತೆಗೆ ಕಾರಣವಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಅವರು ಶನಿವಾರ ಇಎಸ್‌ಐ ಆಸ್ಪತ್ರೆಯಲ್ಲಿ ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಕಂಪನಿಯಿಂದ ಗಾಳಿಯ ಮೂಲಕ ಹೀಟ್ ಪಂಪ್ ಉಪಯೋಗಿಸಿ ಬಿಸಿ ನೀರು ಸಂಗ್ರಹಿಸಿ ಪೂರೈಸುವ ಟ್ಯಾಂಕರ್ ಹಸ್ತಾಂತರ ಮಾಡಿ ಸಮಾರಂಭದಲ್ಲಿ ಮಾತನಾಡಿದರು.

ಇದೊಂದು ಅತ್ಯಾಧುನಿಕ ತಂತ್ರಜ್ಞಾನವಾಗಿದ್ದು ಅತ್ಯಂತ ಕಡಿಮೆ ವಿದ್ಯುತ್ ಬಳಕೆಯ ಮೂಲಕ ವಾತಾವರಣದ ಗಾಳಿ ಬಳಸಿ ಬಿಸಿ ನೀರು ಒದಗಿಸಲಾಗುತ್ತದೆ. ಇದರಿಂದ ಆಸ್ಪತ್ರೆಗೆ ಬರುವ ರೋಗಿಗಳಿಗೆ, ಬಾಲಮಂದಿರದಲ್ಲಿನ ಮಕ್ಕಳಿಗೆ ಹಾಗೂ ಮಹಿಳಾ ನಿಲಯದಲ್ಲಿನ ಮಹಿಳೆಯರಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದರು.



> **ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾದಿಂದ ಸಿಎಸ್‌ಆರ್ ನಿಧಿಯಡಿ ಆಸ್ಪತ್ರೆ, ಬಾಲಮಂದಿರ, ಮಹಿಳಾ ನಿಲಯಕ್ಕೆ ಬಿಸಿ ನೀರು ಪೂರೈಕೆ ಸಾಧನ ಅಳವಡಿಕೆ**
> \- ಜಿಲ್ಲಾಧಿಕಾರಿ ವೆಂಕಟೇಶ್

ಬಿಸಿ ನೀರು ಪೂರೈಕೆ ಮಾಡುವ ಸಾಧನಗಳನ್ನು ಇಎಸ್‌ಐ ಆಸ್ಪತ್ರೆ, ಬಾಲಮಂದಿರ ಹಾಗೂ ರಾಜ್ಯ ಮಹಿಳಾ ನಿಲಯದಲ್ಲಿ ಸಿಎಸ್‌ಆರ್ ನಿಧಿಯಡಿ ಅಳವಡಿಸಲಾಗುತ್ತಿದೆ. ಕಂಪನಿಯೊಂದಿಗೆ ಕಳೆದ ಡಿಸೆಂಬರ್‌ನಲ್ಲಿ ಜಿಲ್ಲಾಡಳಿತ ಒಡಂಬಡಿಕೆ ಮಾಡಿಕೊಂಡಿದ್ದು 45 ದಿನಗಳಲ್ಲಿಯೇ ಯೋಜನೆಯನ್ನು ಕಂಪನಿ ಅನುಷ್ಠಾನ ಮಾಡುವ ಮೂಲಕ ಜಿಲ್ಲೆಯ ಜನರಿಗೆ ಅನುಕೂಲ ಕಲ್ಪಿಸಿದೆ.

ಈ ವರ್ಷ ಪವರ್‌ಗ್ರಿಡ್ ಕಂಪನಿಯಿಂದ ಆರೋಗ್ಯ ಕ್ಷೇತ್ರದ ಸುಧಾರಣೆಗಾಗಿ ಅತ್ಯಾಧುನಿಕ ಸಾಧನಗಳನ್ನು ಅಳವಡಿಕೆಗೆ ಆದ್ಯತೆ ನೀಡಿದ್ದು ಇದುವರೆಗೆ ರೂ.5 ಕೋಟಿ ಮೊತ್ತದ ಪರಿಕರಗಳನ್ನು ಒದಗಿಸಲಾಗಿದೆ. ಇದೇ ಆರ್ಥಿಕ ವರ್ಷದಲ್ಲಿ ಮಾಡಿಕೊಂಡಿರುವ ಒಡಂಬಡಿಕೆಯಂತೆ ಆರೋಗ್ಯ ಮತ್ತು ಪೌಷ್ಟಿಕತೆಯ ಸುಧಾರಣೆಗಾಗಿ ರೂ.15 ಕೋಟಿ ಮೊತ್ತದ ಕ್ರಿಯಾ ಯೋಜನೆ ಮುಂದಿನ ದಿನಗಳಲ್ಲಿ ಸಾಕಾರಗೊಳ್ಳಲಿದ್ದು ಜಿಲ್ಲೆಗೆ ಬಹುದೊಡ್ಡ ಕೊಡುಗೆ ನೀಡುತ್ತಿರುವ ಕಂಪನಿಗೆ ಜಿಲ್ಲಾಡಳಿತ ಎಲ್ಲಾ ಸಹಕಾರ ನೀಡಲಿದೆ ಎಂದರು.

ಕಾರ್ಯಕ್ರಮದಲ್ಲಿ ಪವರ್ ಗ್ರಿಡ್ ಕಂಪನಿಯ ಜನರಲ್ ಮ್ಯಾನೇಜರ್ ಹರೀಶ್ ಕುಮಾರ್ ನಾಯರ್, ಇಎಸ್‌ಐ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ; ಬಸವನಗೌಡ ಜಿ.ಎಂ, ನರ್ಸಿಂಗ್ ಸೂಪರಿಂಟೆಂಡೆಂಟ್ ಗಣೇಶ್, ಬಾಲ ಮಂದಿರದ ಅಧೀಕ್ಷಕರಾದ ಫಾತಿಮಾ.ಹೆಚ್, ಮಹಿಳಾ ನಿಲಯದ ಅಧೀಕ್ಷಕಿ ಶಕುಂತಲಾ ಬಿ.ಕೋಲಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಜಿಲ್ಲಾಡಳಿತ ಭವನದಲ್ಲಿ ಸಂವಿಧಾನ ಪೀಠಿಕೆಯ ಪ್ರತಿಜ್ಞಾ ವಿಧಿ ಸ್ವೀಕಾರ



ದಾವಣಗೆರೆ, ಫೆ. 17 – ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ಸಾಂಸ್ಕೃತಿಕ ನಾಯಕ ಶ್ರೀ ಜಗಜ್ಯೋತಿ ಬಸವಣ್ಣ ಅವರ ಭಾವಚಿತ್ರ ಅನಾವರಣದ ಸಮಾರಂಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ನಾಗರಾಜ ಅವರು ಸಂವಿಧಾನ ಜಾಗೃತಿ ಜಾಥಾದ ಅಂಗವಾಗಿ ಸಂವಿಧಾನ ಪೀಠಿಕೆ ಓದುವ ಮೂಲಕ ಪ್ರತಿಜ್ಞೆ ಸ್ವೀಕರಿಸಲಾಯಿತು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಸಂವಿಧಾನ ಜಾಗೃತಿ ರಥಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಇದೇ ವೇಳೆ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಯುವ ಸಮೃದ್ಧಿ ಸಮ್ಮೇಳನದ ಬೃಹತ್ ಉದ್ಯೋಗ ಮೇಳದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಜಿಲ್ಲೆಯಲ್ಲಿ 15 ದಿನಗಳಿಂದ ವಿಪತ್ತು ನಿರ್ವಹಣಾ ತರಬೇತಿ ನೀಡಿದ ತರಬೇತುದಾರರಿಗೆ ಅಭಿನಂದನಾ ಪತ್ರವನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಶಾಸಕರಾದ ಶಾಮನೂರು ಶಿವಶಂಕರಪ್ಪ, ಕೆ.ಎಸ್. ಬಸವಂತಪ್ಪ, ಮುರುಘಾ ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ, ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್, ಜಿ.ಪಂ. ಸಿಇಒ ಸುರೇಶ್ ಇಟ್ನಾಳ್, ಎಸ್ಪಿ ಉಮಾ ಪ್ರಶಾಂತ್, ಜಿ.ಪಂ. ಉಪ ಕಾರ್ಯದರ್ಶಿ ಕೃಷ್ಣನಾಯ್ಕ, ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರಿನ್ ಭಾನು, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್, ದಾವಣಗೆರೆ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕ ಹೆಚ್.ವಿಶ್ವನಾಥ್, ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್, ಬಸವ ಬಳಗದ ಮಹಾಂತೇಶ್ ಅಗಡಿ, ಜಿಲ್ಲಾ ಕ.ಸಾ.ಪ ಅಧ್ಯಕ್ಷ ಬಿ. ವಾಮದೇವಪ್ಪ, ರುದ್ರಮುನಿ ಆವರಗೆರೆ, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಗಂಗಾಮತಸ್ಥರ ಸಭೆ

ಗಂಗಾಮತಸ್ಥರ ಸಂಘದ ಕಚೇರಿಯಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಗಂಗಾಮತಸ್ಥರ (ಬೆಸ್ತರ) ಸಂಘದ ಸಭೆ ನಡೆಯಲಿದೆ. ಬಿ.ಕೆ. ಮಂಜುನಾಥ್ ಮಾಗನಹಳ್ಳಿ ಅಧ್ಯಕ್ಷತೆ ವಹಿಸಲಿದ್ದು, ಎಂ. ಹನುಮಂತಪ್ಪ ಉಪಸ್ಥಿತಲಿರಲಿದ್ದಾರೆ.


**ಬೇಕಾಗಿದ್ದಾರೆ**
**ರವಿತೇಜ ಟೆಕ್ಸ್‌ಟೈಲ್ಸ್**
ಅಂಗಡಿಯಲ್ಲಿ ಅನುಭವವುಳ್ಳ ಕ್ಯಾಷಿಯರ್, ಸೇಲ್ಸ್ ಮೆನ್, ಸೇಲ್ಸ್ ಗರ್ಲ್ಸ್ ಕೆಲಸ ಮಾಡಲು ಬೇಕಾಗಿದ್ದಾರೆ.
**89703 23033**







# ಕಡತಗಳ ಗಣಕೀಕರಣಕ್ಕೆ ಎಸ್ಸೆಸ್ ಚಾಲನೆ



ದಾವಣಗೆರೆ, ಫೆ. 17 - ತಾಲ್ಲೂಕಿನ ಸುಮಾರು 2 ಲಕ್ಷ ಕಡತಗಳನ್ನು ಮತ್ತು ದಾಖಲೆಗಳನ್ನು ಗಣಕೀಕರಣ ಮಾಡಲು ಶಾಸಕ ಶಾಮನೂರು ಶಿವಶಂಕರಪ್ಪ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಈ ಗಣಕೀಕರಣದಿಂದ ರೈತರಿಗೆ ಅನುಕೂಲವಾಗಲಿದ್ದು, ರೈತ ಬಾಂಧವರು ಅನುಕೂಲ ಪಡೆದುಕೊಳ್ಳುವಂತೆ ತಿಳಿಸಿದರು.

ಈ ಗಣಕೀಕರಣ ಕಾರ್ಯದಿಂದ ರೈತಾಪಿ ವರ್ಗಕ್ಕೆ ದಾಖಲೆಗಳನ್ನು ಪಡೆದುಕೊಳ್ಳಲು ಅನುಕೂಲವಾಗಲಿದೆ ಎಂದು ತಹಶೀಲ್ದಾರ್ ಡಾ. ಎಂ.ಬಿ. ಅಶ್ವತ್ಥ್ ಅವರು ಮಾಹಿತಿ ನೀಡಿದರು.

ಗಣಕೀಕರಣದಿಂದ ಕಂದಾಯ ದಾಖಲೆಗಳನ್ನು ತಿದ್ದುಪಡಿ ಮಾಡಲು ಮತ್ತು ನಾಶ ಮಾಡಲು ಸಾಧ್ಯವಿಲ್ಲ. ಜೊತೆಗೆ ಪ್ರತಿಯೊಬ್ಬರು ತಮ್ಮ ದಾಖಲೆಗಳನ್ನು ಆನ್ಲೈನ್ ನಲ್ಲೆ ಚೆಕ್ ಮಾಡಿಕೊಳ್ಳಬಹುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಉಪವಿಭಾಗಾಧಿಕಾರಿ ಶ್ರೀಮತಿ ದುರ್ಗಾಶ್ರೀ ಹಾಗೂ ತಾಲ್ಲೂಕು ಕಚೇರಿ ಉಪತಹಶೀಲ್ದಾರರು, ಶಿರಸ್ತೇದಾರ್ ಮತ್ತು ನೌಕರರು, ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

## ಚಿಕ್ಕಬಾಸೂರಿನಲ್ಲಿ ನಾಳೆ ಕಳಸಾರೋಹಣ

ಸಾಸ್ವೆಹಳ್ಳಿ, ಫೆ. 17- ಚಿಕ್ಕಬಾಸೂರು ಗ್ರಾಮದಲ್ಲಿ ಶಿವಕುಮಾರ ಹಾಲಸ್ವಾಮಿ ಅವರಿಂದ ನಾಡಿದ್ದು ದಿನಾಂಕ 19 ಮತ್ತು 20 ರಂದು ವಿನಾಯಕ, ಬಸವೇಶ್ವರ ಸ್ವಾಮಿ, ಆಂಜನೇಯ ಸ್ವಾಮಿ ಹಾಗೂ ಮಾರಿಕಾಂಬ ದೇವಿ ದೇವಸ್ಥಾನದ ಪ್ರವೇಶ, ಕುಂಭಾಭಿಷೇಕ ಹಾಗೂ ಗೋಪುರದ ಕಳಸಾರೋಹಣ ನಡೆಯಲಿದೆ.


IDEAL INTERNATIONAL TECHNO SCHOOL
IDEAL EDUCATIONAL AND CHARITABLE TRUST®
WE ARE HIRING
WALK IN INTERVIEW

| Qualification | Subject | Medium | Posts |
| --- | --- | --- | --- |
| BSc/MSc B.Ed | Maths and Science | English | 04 |
| BA/MA B.Ed | English | English | 04 |
| BA/MA B.Ed | Social Science | English | 04 |
| BA/MA B.Ed | Kannada | English | 04 |
| BA/MA B.Ed | Hindi | English | 04 |
| BCA/MCA | Computer Science | English | 04 |

VENUE: IDEAL INTERNATIONAL TECHNO SCHOOL, ON 25TH FEB 2024 SUNDAY | TIME : 10:00 AM 4:00 PM
2-4 Years Experience Compulsory : Send your resume to
idealkidsinfo@gmail.com
Santhebennur Main Road, Garaga, Channagiri, Davanagere (D)
9972673799 ,9742090718


# ನಾಳೆ ಶಿವಾಜಿ ಮಹಾರಾಜರ ಜಯಂತ್ಯೋತ್ಸವ



ದಾವಣಗೆರೆ, ಫೆ. 17 - ಕ್ಷತ್ರೀಯ ಮರಾಠ ವಿದ್ಯಾವರ್ಧಕ ಸಂಘ ಮತ್ತು ಕ್ಷತ್ರೀಯ ಮರಾಠ ಸಮಾಜದ ವತಿಯಿಂದ ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ 397ನೇ ಜಯಂತ್ಯೋತ್ಸವ ಕಾರ್ಯಕ್ರಮವು ನಾಡಿದ್ದು ದಿನಾಂಕ 19 ರಂದು ಬೆಳಿಗ್ಗೆ 11ಕ್ಕೆ ನಗರದ ಕೃಷ್ಣ ಭವಾನಿ ಕಲ್ಯಾಣ ಮಂಟಪದ ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ ವೇದಿಕೆಯಲ್ಲಿ ನಡೆಯಲಿದೆ.

ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಜರುಗುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಿ. ಮಾಲತೇಶರಾವ್ ಜಾಧವ್ ವಹಿಸಲಿದ್ದಾರೆ.

ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿ.ಪಂ. ಸಿಇಓ ಡಾ. ಬಿ. ಸುರೇಶ ಇಟ್ನಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಸೈಯಿದಾ ಅಫ್ರಿನ್ ಬಾನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಯಶವಂತರಾವ್ ಜಾಧವ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

# ಅಯೋಧ್ಯೆಗೆ ರೈಲು ಸಂಚಾರಕ್ಕೆ ಸಂಸದ ಸಿದ್ದೇಶ್ವರ ಒತ್ತಾಯ

ದಾವಣಗೆರೆ, ಫೆ. 17- ಅಯೋಧ್ಯೆಗೆ ದಾವಣಗೆರೆ ಮಾರ್ಗವಾಗಿ ವಿಶೇಷ ರೈಲು ಓಡಾಟಕ್ಕೆ ಸಂಸದ ಜಿ.ಎಂ. ಸಿದ್ದೇಶ್ವರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ದೆಹಲಿಯಲ್ಲಿ ಮೊನ್ನೆ ಭೇಟಿ ಮಾಡಿ ಒತ್ತಾಯಿಸಿದ್ದಾರೆ.

ಬೆಂಗಳೂರು ಅಥವಾ ಮೈಸೂರು ಕಡೆಯಿಂದ ಹೊರಡುವ ವಿಶೇಷ ರೈಲುಗಳು ಅರಸೀಕೆರೆ-ಚಿಕ್ಕಜಾಜೂರು-ದಾವಣಗೆರೆ-ಹರಪನಹಳ್ಳಿ ಹಾಗೂ ಕೊಟ್ಟೂರು ಮಾರ್ಗವಾಗಿ ಹೊಸಪೇಟೆ ತಲುಪಿ ಅಯೋಧ್ಯೆ ಕಡೆ ಪ್ರಯಾಣ ಬೆಳೆಸುವಂತೆ ವ್ಯವಸ್ಥೆಯಾಗಬೇಕು ಎಂದು ಸಂಸದರು ವೈಷ್ಣವ್ ಅವರಿಗೆ ವಿವರಿಸಿದ್ದಾರೆ.

## ಪಟಾಕಿ ಘಟಕದಲ್ಲಿ ಅವಘಡ: 10 ಸಾವು

ವಿರುಧನಗರ, ಫೆ. 17 - ತಮಿಳುನಾಡಿನ ಪಟಾಕಿ ಘಟಕದಲ್ಲಿ ಸಂಭವಿಸಿದ ಸ್ಫೋಟದಲ್ಲಿ ಹತ್ತು ಜನ ಸಾವನ್ನಪ್ಪಿದ್ದಾರೆ.

ಕುಂಡಯಿರುಪ್ಪು ಎಂಬ ಹಳ್ಳಿಯಲ್ಲಿರುವ ಪಟಾಕಿ ಘಟಕದಲ್ಲಿ ಸ್ಫೋಟ ಸಂಭವಿಸಿದೆ. ಮೃತರಲ್ಲಿ ಆರು ಪುರುಷರು ಹಾಗೂ ನಾಲ್ವರು ಮಹಿಳೆಯರು ಸೇರಿದ್ದಾರೆ.

ಮೃತರ ಕುಟುಂಬಗಳಿಗೆ ತಲಾ 3 ಲಕ್ಷ ರೂ. ಹಾಗೂ ತೀವ್ರ ಗಾಯಗೊಂಡವರಿಗೆ 1 ಲಕ್ಷ ರೂ. ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ತಿಳಿಸಿದ್ದಾರೆ.

ಮಾನವ ಲೋಪದ ಕಾರಣದಿಂದಾಗಿ ಈ ಸ್ಫೋಟ ಸಂಭವಿಸಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.













**ತೃತೀಯ ಪುಣ್ಯಸ್ಮರಣೆ ಕಾರ್ಯಕ್ರಮ**

॥ ಶ್ರೀ ಪ್ರಸನ್ನ ರಾಮೇಶ್ವರ ಪ್ರಸನ್ನ ॥

**ಶ್ರೀಮತಿ ಮಂಗಳ ಶಿವಾನಂದ**

ನಂ. 2234, 'ಗಂಗಾ' ಸತ್ಸಂಗ ರಸ್ತೆ, ಎಂ.ಸಿ.ಸಿ 'ಎ' ಬ್ಲಾಕ್, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.



ಜನನ : 5-11-1944
ನಿಧನ : 18-02-2021

**ಡಾ॥ ಡಿ.ಎಂ.ಜಿ. ಶಿವಾನಂದ**

(ನಿವೃತ್ತ ಅನೆಸ್ತೀಷಿಯಾ ವಿಭಾಗ ಮುಖ್ಯಸ್ಥರು, ಎಸ್.ಎಸ್. ವೈದ್ಯಕೀಯ ವಿದ್ಯಾಲಯ, ದಾವಣಗೆರೆ.)
ಇವರ

**ತೃತೀಯ ಪುಣ್ಯಸ್ಮರಣೆ ಕಾರ್ಯಕ್ರಮ** ವನ್ನು

ದಿನಾಂಕ 18.02.2024ನೇ ಭಾನುವಾರ ಬೆಳಿಗ್ಗೆ 11.30ಕ್ಕೆ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಸಕಾಲಕ್ಕೆ ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಕಲ್ಪನೆಯೊಂದಿಗೆ
ಕಾಯಕವೇ ಕೈಲಾಸವೆಂಬ ತತ್ವದೊಂದಿಗೆ ನಮ್ಮ ಮನೆ-ಮನಗಳಲ್ಲಿ ದೀಪ ಮುಡಿಸಿ,
ಶಿಸ್ತು-ಸಂಸ್ಕೃತಿ-ಸಂಸ್ಕಾರ ಕಲಿಸಿದ್ದೀರಿ.
ನಮಗೆ ನೀಡಿದ ಮಮಕಾರ, ಪ್ರೀತಿ-ವಾತ್ಸಲ್ಯಕ್ಕಾಗಿ ನಾವು ಸದಾ ಚಿರಋಣಿ

ನಿಮ್ಮ ನೆನಪಿನಲ್ಲಿ ಪಯಣಿಸುತ್ತಿರುವ,

ಇಂತಿ ದುಃಖತಪ್ತರು : ಶ್ರೀಮತಿ ಮಂಗಳ ಶಿವಾನಂದ
ಡಾ॥ ಡಿ.ಎಸ್. ಪ್ರವೀಣ್, ಶ್ರೀಮತಿ ಡಾ॥ ವೀಣಾ, ಚಿ॥ ರೋಹನ್ ಪ್ರವೀಣ್,
ದೊಡ್ಡಮನೆ ಮತ್ತು ಮಾರ್ಗದ ವಂಶಸ್ಥರು, ಬೀರೂರು ಹಾಗೂ ಬಂಧುಗಳು ಮಿತ್ರರು. ಮೊ:94481 25628.

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ವಿನಂತಿ.